ಮುಳ್ಳೂರು ನಾಗರಾಜರ ಕಥಾನಕಗಳು

೨೦೦೮-೦೯ನೇ ಸಾಲಿನ ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ

ನಿಬಂಧಕಾರರು

ಜಿ.ಸಿ.ಶೋಭಾರಾಣಿ
ಕನ್ನಡ ಎಂ.ಫಿಲ್ (ಹಂಪಿ, ಕ.ವಿ.ವಿ)
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಪ್ರೊ. ಸುಧಾಕರ್
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೮-೦೯

733

ಮುಳ್ಳೂರು ನಾಗರಾಜರ ಕಥಾನಕಗಳು

೨೦೦೮-೦೯ನೇ ಸಾಲಿನ ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ

ನಿಬಂಧಕಾರರು

ಜಿ.ಸಿ.ಶೋಭಾರಾಣಿ
ಕನ್ನಡ ಎಂ.ಫಿಲ್ (ಹಂಪಿ, ಕ.ವಿ.ವಿ)
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಪ್ರೊ. ಸುಧಾಕರ್
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೮-೦೯

ದೃಢೀಕರಣಪತ್ರ

೨೦೦೮–೦೯ನೇ ಸಾಲಿನಲ್ಲಿ ಕ್ರಮ ಸಂಖ್ಯೆ KVTMKS - 00315ರ ಹಂಪಿ ವಿಶ್ವವಿದ್ಯಾನಿಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿನಿಯಾದ ಜಿ.ಸಿ.ಶೋಭಾರಾಣಿ ಅವರು ನನ್ನ ಮಾರ್ಗದರ್ಶನದಲ್ಲಿ **"ಮುಳ್ಳೂರು ನಾಗರಾಜರ ಕಥಾನಕಗಳು"** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

(ಪ್ರೊ. ಸುಧಾಕರ್)
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಮೈಸೂರು
ದಿನಾಂಕ: 30/9/2009

ಅಭ್ಯರ್ಥಿಯ ಘೋಷಣಾಪತ್ರ

"ಮುಳ್ಳೂರು ನಾಗರಾಜರ ಕಥಾನಕಗಳು" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್. ಪದವಿಯ ಕ್ರಮಸಂಖ್ಯೆ KVTMKS - 00315ರ ವಿದ್ಯಾರ್ಥಿಯಾದ ನಾನು ೨೦೦೮-೦೯ನೇ ಸಾಲಿನ ಪರೀಕ್ಷೆಗಾಗಿ **ಪ್ರೊ. ಸುಧಾಕರ್, ನಿವೃತ್ತ ಕನ್ನಡ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು** ಅವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ಸಂಪ್ರಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾನಿಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಶೋಭಾರಾಣಿ ಜಿ.ಸಿ.

(ಜಿ.ಸಿ.ಶೋಭಾರಾಣಿ)

ಮೈಸೂರು

ದಿನಾಂಕ : 30/9/2009

೨೦೦೮-೦೯ನೇ ಸಾಲಿನ ಎಂ.ಫಿಲ್. ವಿದ್ಯಾರ್ಥಿನಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಪ ರಿ ವಿ ಡಿ

*****

ಅಧ್ಯಾಯ – ೧

ಪ್ರವೇಶಿಕೆ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ವೈವಿಧ್ಯತೆ ಆಧುನಿಕ ಕನ್ನಡ ಸಾಹಿತ್ಯದ ಮುಖ್ಯ ಗುಣಗಳಲ್ಲಿ ಒಂದು ಕೃತಿಯ ವಸ್ತು ಮತ್ತು ಅದರ ಸ್ವರೂಪದ ಹಿನ್ನೆಲೆಯಲ್ಲಿ ಲೇಖಕನ ಮನೋಧರ್ಮದ ಹಿನ್ನೆಲೆಯಲ್ಲಿ, ಬದಲಾದ ಕಾಲಘಟ್ಟದ ಹಿನ್ನೆಲೆಯಲ್ಲಿ ಈ ವೈವಿಧ್ಯತೆಯನ್ನು ಗುರುತಿಸಬಹುದಾಗಿದೆ. ಕಳೆದ ಶತಮಾನದ ೭೦ರ ದಶಕದಲ್ಲಿ ಹುಟ್ಟಿಕೊಂಡ ದಲಿತ-ಬಂಡಾಯ ಪಂಥ ಕನ್ನಡ ಸಾಹಿತ್ಯವಾಹಿನಿಗೆ ಹೊಸನೀರನ್ನು ಹರಿಯಿಸಿದ್ದು, ಈಗ ಇತಿಹಾಸ, ಅಲ್ಲಿಂದೀಚೆಗೆ, ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಸಂಚಲನ ಉಂಟಾಯಿತು. ಆರಂಭದಲ್ಲಿ ಈ ಹೊಸ ಮಾದರಿಯನ್ನು ಕಂಡು ಸಂಪ್ರದಾಯಸ್ಥ ವಿದ್ವಾಂಸರು ಮೂಗುಮುರಿದಾದರೂ, ಆನಂತರ ಇದರ ಸತ್ವಯುತ ಬೆಳವಣಿಗೆಯನ್ನು, ಒಪ್ಪಲೇಬೇಕಾಯಿತು. ನವೋದಯ, ಪ್ರಗತಿಶೀಲ ಮತ್ತು ನವ್ಯ ಸಾಹಿತ್ಯ ಪರಂಪರೆಗೆ ಸಂಬಂಧಿಸಿದಂತೆ, ಬೇಕಾದಷ್ಟು ಅಧ್ಯಯನ, ಚರ್ಚೆ, ವಿಮರ್ಶೆ ನಡೆದಿದೆಯಾದರೂ, ದಲಿತ ಸಾಹಿತ್ಯವನ್ನು, ಇನ್ನೂ ವ್ಯಾಪಕವಾಗಿ, ಚರ್ಚೆಗೆ ಒಳಗು ಮಾಡಿಲ್ಲದಿರುವುದೂ, ಮೇಲುನೋಟಕ್ಕೆ ಕಾಣುವ ವಿಚಾರ. ಅಲ್ಪ, ಸ್ವಲ್ಪ ಚರ್ಚೆ ನಡೆದಿದೆಯಾದರೂ ಅದು ಕೆಲವೇ ಸಾಹಿತಿಗಳಿಗೆ ಸೀಮಿತಗೊಂಡಿವೆ. ಈ ಸಾಹಿತ್ಯ ಚಳುವಳಿಯ, ಆರಂಭದಿಂದಲೂ ಕ್ರಿಯಾಶೀಲವಾಗಿತ್ತು, ಕೃತಿರಚನೆಯನ್ನು ಮಾಡಿಕೊಂಡು ಬಂದಿದ್ದ ಮುಳ್ಳೂರು ನಾಗರಾಜರ ಸಾಹಿತ್ಯವನ್ನು ಕುರಿತು ಅಂತಹ ಮಹತ್ವದ ಎದ್ದುಕಾಣುವ, ವಿಮರ್ಶೆ, ಚರ್ಚೆ ನಡೆದಿಲ್ಲ ಎಂಬುದು ವಾಸ್ತವದ ವಿಚಾರ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂಶೋಧನ ಪ್ರಬಂಧಕ್ಕೆ ನಾನು "ಮುಳ್ಳೂರು ನಾಗರಾಜರ ಕಥಾನಕಗಳು" ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದೇನೆ.

ಇಲ್ಲಿ ನಾನು ಈ ಲೇಖಕರ ಎರಡು ಕಾದಂಬರಿ, 'ಮರಣ ಮಂಡಲ ಮಧ್ಯದೊಳಗೆ', 'ದಂಡಕಾರಣ್ಯ' ಒಂದು ಕಥಾಸಂಕಲನ 'ಸಿಂಗಳೀಕ' ಮತ್ತು ಆತ್ಮಕಥೆ, (ಮಾಮರದ ಮೇಲೊಂದು ಕೋಗಿಲೆ') ಆತ್ಮಚರಿತ್ರೆಯ (ಸಂಪುಟ-೧) ಇವುಗಳನ್ನು ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ಗುರುತಿಸಿಕೊಂಡಿದ್ದೇನೆ.

ಆಧುನಿಕ ಕನ್ನಡ ಸಾಹಿತ್ಯವನ್ನು ವೈಚಾರಿಕತೆಯಿಂದ ಹೊರತುಪಡಿಸಿ ಕಲ್ಪಿಸಿಕೊಳ್ಳುವುದು ತುಂಬಾ ಕಷ್ಟಸಾಧ್ಯ. ದಲಿತ ಬಂಡಾಯ ಸಾಹಿತ್ಯವೂ ಅದೇ ಹಾದಿಯಲ್ಲಿ ಸೃಷ್ಟಿಯಾಗಿರುವುದನ್ನು ಗಮನಿಸಬಹುದು. ದಲಿತ ಬಂಡಾಯದವರು ತೊಡುವ ಮುಖ್ಯ ಅಸ್ತ್ರಗಳು, ವೈಚಾರಿಕತೆಯ ಬತ್ತಳಿಕೆಯಿಂದ ತೆಗೆದವೇ ಆಗಿದೆ. ಸದ್ಯದ

ಪರಿಸ್ಥಿತಿಯಲ್ಲಿ ದಲಿತ ಲೇಖಕರ ಬರಹಗಳನ್ನು ವೈಚಾರಿಕತೆ, ತರ್ಕ, ಚರಿತ್ರೆಯ ಪುನರ್ ವ್ಯಾಖ್ಯಾನಗಳಲ್ಲದೆ, ಕಲ್ಪಿಸಿಕೊಳ್ಳಲು ಕಷ್ಟವಾಗುತ್ತದೆ. ವಚನ ಚಳುವಳಿಯನ್ನು ಬಿಟ್ಟರೆ, ಕನ್ನಡ ಸಾಹಿತ್ಯದಲ್ಲಿ ಅನೇಕ ಮಾದರಿಯ ವೈಚಾರಿಕತೆಯು ವಿಜೃಂಭಿಸಿದ್ದು ಈ ಶತಮಾನದಲ್ಲೇ ಅನಿಸುತ್ತದೆ ಎಂಬುದು ನಿರ್ವಿವಾದವಾದ ವಿಷಯ.

ಈ ದೃಷ್ಟಿಯಿಂದಲೇ ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದ ಈ ಐವತ್ತು ವರ್ಷಗಳಲ್ಲಿ ತೀವ್ರವಾದ ಏರಿಳಿತಗಳು, ಸಿದ್ಧಾಂತಗಳು ಬಂದಿದೆ. ನವೋದಯ ಸಾಹಿತ್ಯವು ವಸಾಹತುಶಾಹಿಯ ವಿರುದ್ಧ ಪ್ರತಿಭಟನೆಯನ್ನು ತೋರಿಸಿದ್ದರ, ಪ್ರಗತಿಶೀಲ ಸಾಹಿತ್ಯವು ಮಾರ್ಕ್ಸ್‌ವಾದದ ಬೆಳಕಿನಲ್ಲಿ ಬಂಡವಾಳಶಾಹಿ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಬಂಡೆದ್ದು ಮಧ್ಯಮ ವರ್ಗದ ಕಾರ್ಮಿಕ ಹಿತಾಸಕ್ತಿಗಳು, ದಟ್ಟ ದರಿದ್ರರ, ಹಸಿವು, ನಿರಾಸೆ, ಹತಾಶೆ, ಭಾವನೆಗಳು, ಸ್ತ್ರೀಯರ ತೀವ್ರ ಶೋಷಣೆ ಮೊದಲಾದವುಗಳನ್ನು ಕುರಿತು ಬರೆಯತೊಡಗಿತು. ನವ್ಯ ಸಾಹಿತ್ಯವು ಅಸ್ತಿತ್ವವಾದ, ಅಸಂಗತವಾದದ ಸುತ್ತ ತನ್ನ ಚಿಂತನೆಗಳನ್ನು ಹಬ್ಬಿಸಿತು ಮತ್ತು ಡಾ. ಅಂಬೇಡ್ಕರ್ ಅವರ ಬದುಕು ಹೋರಾಟ ಸಾಹಿತ್ಯ ಮತ್ತು ಲೋಹಿಯಾವಾದದ ಸಂವೇದನೆಯ ಹಿನ್ನೆಲೆಗಳು ದಲಿತ, ಬಂಡಾಯ ಸಾಹಿತ್ಯಕ್ಕೆ ಪ್ರೇರಣೆಯಾಗಿವೆ.

ಈ ಪ್ರಬಂಧದ ವ್ಯಾಪ್ತಿಯಲ್ಲಿ ಮೊದಲಿಗೆ 'ಪ್ರವೇಶ' ಎಂಬ ಶೀರ್ಷಿಕೆಯ ಅಡಿಯಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಕುರಿತು ಹೇಳಿದ್ದೇನೆ. ಎರಡನೆಯದಾಗಿ "ದಲಿತ ಸಾಹಿತ್ಯ ಮತ್ತು ಚಳುವಳಿಯ ಅವಲೋಕನ" ಎಂಬ ಅಧ್ಯಾಯವನ್ನು ಮಾಡಿಕೊಂಡಿದ್ದೇನೆ. ಇದರಲ್ಲಿ ದಲಿತ ಸಾಹಿತ್ಯದ ಹಿನ್ನೆಲೆ, ೭೦ರ ದಶಕದಲ್ಲಿ ಸ್ಫೋಟಗೊಂಡ ದಲಿತ ಸಾಹಿತ್ಯ ಚಳುವಳಿ ಮತ್ತು 'ದಲಿತ ಸಂಘರ್ಷ ಸಮಿತಿ' ಸ್ಥಾಪನೆಯ ವಿಷಯಗಳನ್ನು ಸ್ಥೂಲವಾಗಿ ಚರ್ಚಿಸಲಾಗಿದೆ.

ನಂತರ ಮೂರನೆಯ ಅಧ್ಯಾಯವಾಗಿ 'ಮುಳ್ಳೂರು ನಾಗರಾಜರ ಬದುಕು-ಬರಹ' ಎಂಬ ಮೂರನೇ ಅಧ್ಯಾಯದಲ್ಲಿ ಅವರ ಜನನ, ಬಾಲ್ಯ, ಪೋಷಕರು, ವಿದ್ಯಾಭ್ಯಾಸ, ಕೌಟುಂಬಿಕ ಪರಿಸರ, ಲೇಖನ, ಕೃಷಿ, ಸಾಹಿತಿ-ಪತ್ರಕರ್ತ, ಪುಸ್ತಕಗಳ ವಿವರಣೆ, ಹಿನ್ನೆಲೆ, ದಲಿತ ಸಾಹಿತ್ಯ ಚಳುವಳಿಯೊಂದಿಗಿನ ಸಂಬಂಧಗಳನ್ನು ಕುರಿತು ಚರ್ಚಿಸಿದೆ.

ನಾಲ್ಕನೇ ಅಧ್ಯಾಯ "ಮುಳ್ಳೂರು ನಾಗರಾಜರ ಕಥಾನಕಗಳ ವಿಭಿನ್ನ ನೆಲೆಗಳು" ಎಂದಿದ್ದು ಇಲ್ಲಿ ಲೇಖಕರ ಕಥೆ, ಕಾದಂಬರಿ ಮತ್ತು ಆತ್ಮಚರಿತ್ರೆಯಲ್ಲಿ ಕಂಡುಬರುವ ಸಾಮಾಜಿಕ ಸಂಘರ್ಷ, ಹಸಿವು ಮತ್ತು ಬಡತನ, ಮಹಿಳೆ ಶೋಷಣೆ ಜಾತ್ಯಾತೀತ ನೆಲೆಗಳು, ಭಾಷಿಕ ಸ್ವರೂಪದ ಅಧ್ಯಯನ ಎಂದು ವಿಭಾಗಿಸಿಕೊಂಡಿದ್ದೇನೆ.

'ಅಧ್ಯಯನದ ಫಲಿತಗಳು' ಎಂಬ ಐದನೇ ಅಧ್ಯಾಯದಲ್ಲಿ ಒಟ್ಟು ಅಧ್ಯಯನದ ಫಲಿತಗಳನ್ನು ಕ್ರೋಢೀಕರಿಸಿ ಚರ್ಚಿಸಲಾಗಿದೆ.

ಆರನೇ ಅಧ್ಯಾಯದಲ್ಲಿ 'ಸಮಾರೋಪ' ಎಂಬ ಶೀರ್ಷಿಕೆಯಡಿಯಲ್ಲಿ ಉಪಸಂಹಾರವನ್ನು ಹೇಳಲಾಗಿದೆ.

ಅಧ್ಯಾಯ - ೨

ದಲಿತ ಸಾಹಿತ್ಯ ಮತ್ತು ಚಳುವಳಿಯ ಅವಲೋಕನ

ಕರ್ನಾಟಕದಲ್ಲಿ ೧೨ನೇ ಶತಮಾನದ ನಂತರ, ದಲಿತರು ಮನಸ್ಸು ಬಿಚ್ಚಿ ಮಾತನಾಡಿದ್ದು, ಹಾಡಿದ್ದು ಹಾಗೂ ಬರೆದದ್ದು, ೧೯೭೦ರ ದಶಕದಲ್ಲಿ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಸುಮಾರು ಎರಡು ಸಾವಿರ ವರ್ಷಗಳಿಂದ ಎಲ್ಲಾ ರೀತಿಯ ಹಕ್ಕುಗಳಿಂದ ವಂಚಿತರಾಗಿ ಅಕ್ಷರಶಃ "ಮೂಕರೇ" ಆಗಿದ್ದ ದಲಿತರು ಎಪ್ಪತ್ತರ ದಶಕದಲ್ಲಿ ಮೊದಲಿಗೆ ಮಾತು ಬಂದಷ್ಟೇ ಉತ್ಸಾಹದಲ್ಲಿ ಮಾತನಾಡಿದಾಗ, ಹಾಡಿದಾಗ, ಬರೆದಾಗ ಇಡೀ ಕನ್ನಡ ಸಾಹಿತ್ಯಲೋಕ ಅಚ್ಚರಿಪಟ್ಟುಕೊಂಡಿತು. ಈ ಮೂಕರ ಮಾತನ್ನು ಹಾಡುಗಳನ್ನು ಕೇಳಲಾರದೆ, ಕಿವಿ ಮುಚ್ಚಿಕೊಂಡವರೂ ಉಂಟು. ಆದರೆ, ಹೊಸ ಲಯದ, ಹೊಸ ದನಿಯ ಈ ಹಾಡುಗಳಿಗೆ ಪುಳಕಗೊಂಡವರ ಹೆಚ್ಚು ಸಾಮಾನ್ಯವಾಗಿ ಹೊಸದೊಂದರ ಹುಟ್ಟು ಹೀಗೆಯೇ ಇರುತ್ತದೆ. ಅದರಲ್ಲೂ ಈವರೆಗೂ ದನಿಯಿಲ್ಲದ, ಮೂಕರಂತಿದ್ದವರು ಹಾಡಿಬಿಟ್ಟರೆ, ಸಹಜವಾಗಿಯೇ ಎಲ್ಲರಿಗೂ ಆಶ್ಚರ್ಯವಾಗುತ್ತದೆ. ಎಂತಲೇ ಈ ದಶಕದಲ್ಲಿ ದಲಿತರು ತಮ್ಮ ಸ್ವಂತ ಸಂಸ್ಕೃತಿಯ ಹಿನ್ನೆಲೆಯಲ್ಲಿ ತಮ್ಮ ಸ್ವಂತ ಬದುಕನ್ನೇ ಕುರಿತು ಎಲ್ಲರಿಗೂ ಅಚ್ಚರಿ ಹುಟ್ಟಿಸುವಂತೆ ಬರೆದರು. ತಿರಸ್ಕಾರ, ಅಪಮಾನಗಳಿಗೆ ಗುರಿಯಾಗಿದ್ದ, ಅಸ್ಪೃಶ್ಯರ ಬದುಕಿನ ನಿಗೂಢ ಜಗತ್ತನ್ನು ತಮ್ಮ ಸ್ವಂತ ಭಾಷೆಯಲ್ಲೇ ಅಭಿವ್ಯಕ್ತಿಸಿದರು. ದಲಿತ ಚಳುವಳಿ ಮತ್ತು ಸಾಹಿತ್ಯ ಒಟ್ಟೊಟ್ಟಿಗೆ ಆ ಸಂದರ್ಭದಲ್ಲಿ ಹುಟ್ಟಿ ಬೆಳೆದವು.

ಎಪ್ಪತ್ತರ ದಶಕದಲ್ಲಿ ದಲಿತ ಚಳುವಳಿಯೊಡನೆಯೇ ಹುಟ್ಟಿಕೊಂಡ ದಲಿತ ಸಾಹಿತ್ಯವು ಇಂದು ವೈವಿಧ್ಯಮಯವೂ, ಸಮೃದ್ಧವೂ ಆಗಿ ಬೆಳೆದು ನಿಂತಿದೆ. ಇದರಲ್ಲಿ ಕಾವ್ಯ, ಮಹಾಕಾವ್ಯ, ಕಾದಂಬರಿಗಳು, ಆತ್ಮಕಥೆಗಳು, ವಿಮರ್ಶೆ ಹೀಗೆ ವಿವಿಧ ಪ್ರಕಾರಗಳಲ್ಲಿ ಸೇರಿಕೊಂಡಿವೆ. ಇಷ್ಟು ಹುಲುಸಾಗಿ ಬೆಳೆದಿರುವ, ಈಗಲೂ ಬೆಳೆಯುತ್ತಿರುವ ಕನ್ನಡ ದಲಿತ ಸಾಹಿತ್ಯಕ್ಕೆ ಇರುವ ಹಲವಾರು ಪ್ರೇರಣೆ-ಪ್ರಭಾವಗಳನ್ನು ಪ್ರಸ್ತುತ ಅಧ್ಯಯನಕ್ಕೆ ಸ್ಥೂಲ ಹಿನ್ನೆಲೆಯಾಗಿಯಾದರೂ ಇಲ್ಲಿ ಅವಲೋಕಿಸುವುದು ಸೂಕ್ತ.

ದಲಿತರ ಮೇಲೆ ನಿರಂತರವಾಗಿ ನಡೆಯುತ್ತಿದ್ದ ಕ್ರೌರ್ಯ, ದೌರ್ಜನ್ಯಗಳು, ೧೯೭೨ರ ಬೂಸಾ ಪ್ರಕರಣ, ಮರಾಠಿ ದಲಿತ ಚಳುವಳಿ ಮತ್ತು ಸಾಹಿತ್ಯ, ಕನ್ನಡ ದಲಿತ ಸಾಹಿತ್ಯ ಸೃಷ್ಟಿಗೆ ಪ್ರಬಲ ಪ್ರೇರಣೆ ನೀಡಿವೆಯೆಂದು ಹೇಳಲಾಗುತ್ತಿದೆ. ಇದರ ಜೊತೆಗೆ ಮುಖ್ಯವಾಗಿ ಡಾಃ ಅಂಬೇಡ್ಕರರ ವಿಚಾರಗಳು ಮತ್ತು ಕಾರ್ಲ್‌ಮಾರ್ಕ್ಸ್ ವಿಚಾರಗಳು ಕನ್ನಡ ದಲಿತ ಸಾಹಿತ್ಯವನ್ನು ಗಾಢವಾಗಿ ಪ್ರಭಾವಿಸಿದೆ ಎಂಬುದು ಕೂಡ

ಈಗ ಸ್ಥಾಪಿತವಾಗಿರುವ ವಿಷಯವೇ ಆಗಿದೆ. ಜೊತೆಗೆ ಕನ್ನಡದ ಪ್ರಾಚೀನ ಇತಿಹಾಸದುದ್ದಕ್ಕೂ ಗುಪ್ತಗಾಮಿನಿಯಾಗಿ ಹರಿದು ಬಂದಿರುವ 'ದಲಿತ ಪರಂಪರೆ'ಯೂ ಕೂಡ ಕನ್ನಡ ದಲಿತ ಸಾಹಿತ್ಯವನ್ನು ಪ್ರಭಾವಿಸಿದೆ ಎಂದೂ ಸಹ ವ್ಯಾಖ್ಯಾನಿಸಲಾಗಿದೆ. ಲಿಖಿತ ಕಾವ್ಯ ತನ್ನ ಒಳಕ್ಕೆ ಬರಮಾಡಿಕೊಳ್ಳಲೊಪ್ಪದ, ಎಲ್ಲಾ ಸಂವೇದನೆಗಳು, ವಿಚಾರಗಳು ಮೌಖಿಕ ಪರಂಪರೆಯಲ್ಲಿ ವಿಜೃಂಬಿಸಿವೆ. ದಲಿತರು ಆಶಾವಾದದಿಂದ ಎದುರು ನೋಡುವ ಪರಂಪರೆ ಇದು. ಮಂಟೇಸ್ವಾಮಿ, ಮಲೆಯ ಮಾದೇಶ್ವರ, ಮರುಳಸಿದ್ದ ಎತ್ತಪ್ಪ ಜುಂಜಪ್ಪ, ಬಕಾಲ, ದಕ್ಷಾ ಇತ್ಯಾದಿ ಉಪೇಕ್ಷಿತ ಜಾತಿಯ ನಾಯಕರೆಲ್ಲಾ ವಿಜೃಂಭಿಸುವ ಕಾಲವಿದು.

ಸಾಮಾನ್ಯವಾಗಿ ಹಿಂದಿನ ತಲೆಮಾರಿನವರಲ್ಲಿ ದಲಿತರು ಮತ್ತು ಶೂದ್ರರು ಅನಕ್ಷರಸ್ಥ ರಾಗಿದ್ದರು. ಉದಾಃ 'ವ್ಯಾಸ-ಬೆಸ್ತ, ವಾಲ್ಮೀಕಿ-ಬೇಡ, ಮಾರ್ಕಂಡೇಯ-ಅಸ್ಪೃಶ್ಯ, ಅಗಸ್ತ್ಯ- ಬೇಟೆಗಾರ, ದೂರ್ವಾಸ-ಮಾದಿಗ, ಕಶ್ಯಪ-ಬಡಗಿ' ಹೀಗೆ ಪಟ್ಟಿಗಳು ಮುಂದುವರೆಯುತ್ತವೆ. ಈ ವಿಷಯವನ್ನು ಸ್ವತಃ ಬಸವೇಶ್ವರರು ತಮ್ಮ ವಚನವೊಂದರಲ್ಲಿ ಪ್ರಸ್ತಾಪಿಸಿದ್ದಾರೆ.[೧]

ವಚನ ಚಳುವಳಿಯ ನಂತರ, ಮುನ್ನೂರು ವರ್ಷಗಳಾದ ಮೇಲೆ ಕಾಣಿಸಿಕೊಂಡ ಸರ್ವಜ್ಞ ಕೂಡ ಶೂದ್ರ. ಕನ್ನಡ ಸಾಹಿತ್ಯಕ್ಕೆ ಹೊಯ್‌ಕೈಯಾಗಿ ಬೆಳೆದಿರುವ ಜನಪದ ಸಾಹಿತ್ಯ ಪರಂಪರೆಯ ನಿರ್ಮಾಪಕರು, ಬಹುಪಾಲು ಅವಮಾನಿತ, ಅನಕ್ಷರಸ್ಥ 'ಕುರಿತೋದೆದೆಯಂ ಕಾವ್ಯಪ್ರಯೋಗ ಪರಿಣೀತ ಮಿತಿ' ಗಳಾದ ದೇಶೀ ಸಾಹಿತಿಗಳೇ. "೭೦ರ ನಂತರ ಆಸ್ಫೋಟಗೊಂಡ ದಲಿತ ಸಾಹಿತ್ಯ" ಈ ಪರಂಪರೆಯ ಮುಂದುವರೆದ ಭಾಗವೇ ಆಗಿದೆ. ದಲಿತ ಚಳುವಳಿ ಮತ್ತು ಅದರ ಉತ್ಪನ್ನವಾದ ದಲಿತ ಸಾಹಿತ್ಯದ ಜನಕ ಬಾಬಾ ಸಾಹೇಬ ಅಂಬೇಡ್ಕರ್ ರಾದರೆ, ತಾಯಿ ಮಾತ್ರ ವಚನ ಚಳುವಳಿಯೇ ಆಗಿದೆ.[೨]

ಒಟ್ಟಾರೆ ಕನ್ನಡ ದಲಿತ ಸಾಹಿತ್ಯ ಎಂಬುದು ಪ್ರಾಚೀನ ಕನ್ನಡ ದಲಿತ ಮೌಖಿಕ ಪರಂಪರೆ ಮತ್ತು ವಚನ ಸಾಹಿತ್ಯದ ಗಾಢ ಪ್ರಭಾವವನ್ನು ಬೆಳೆದಿದೆಯಾದರೂ, ಅದೆಲ್ಲಕ್ಕೂ ಮಿಗಿಲಾಗಿ ಬಾಬಾ ಸಾಹೇಬ ಡಾಃ ಅಂಬೇಡ್ಕರ್ ರವರ ಪ್ರಬಲ ಪ್ರೇರಣೆಯಿಂದಲೇ ಕನ್ನಡ ದಲಿತ ಸಾಹಿತ್ಯ ಮತ್ತು ಚಳುವಳಿ ಜನ್ಮ ತಳೆಯಿತೆಂದು,

---

೧. ಬಸವಣ್ಣನ ವಚನಗಳು, ಪ್ರಕಟಕರು : ಕನ್ನಡ ಸಂಸ್ಕೃತಿ ಇಲಾಖೆ, ಲೇಖಕರು- ಬಸವರಾಜು, ಪುಟ. ೪೧

೨. ಕನ್ನಡ ದಲಿತ ಸಾಹಿತ್ಯ ಸಮಾಲೋಕನ, ಸಂಪಾದಕರು: ಡಾಃಅರ್ಜುನಗೊಳಿಸಂಗಿ, ಲೇಖನಃ ದಲಿತ ಚಳುವಳಿ ಮತ್ತು ಸಾಹಿತ್ಯ- ವಿ.ಮುನಿವೆಂಕಟಪ್ಪ

ಈವರೆಗೆ ಒಪ್ಪಿತವಾಗಿರುವ ವಿಚಾರವಾಗಿದೆ. ಅಂಬೇಡ್ಕರ್ ವಾದ ಕೂಡ ಏಕಾಏಕಿ ಸೃಷ್ಟಿಯಾದುದಲ್ಲ, ಅದಕ್ಕೂ ಹಿನ್ನೆಲೆಯಾಗಿ ಒಂದು ದೊಡ್ಡ ಪರಂಪರೆಯಿದೆ.

ಭಗವಾನ್ ಬುದ್ಧ ರೂಪಿಸಿದ 'ಬಹುಜನ ಹಿತಾಯ ಬಹುಜನ ಸುಖಾಯ' ಎಂಬ ತಾತ್ವಿಕ ದರ್ಶನ, ಪ್ರಾಚೀನ ಸಿಂಧೂ ನಾಗರೀಕತೆಯ ಮೂಲ ನಿವಾಸಿಗಳು ರೂಪಿಸಿಕೊಂಡಿದ್ದ, ಸಾಮ್ರಾಟ್ ಅಶೋಕನ ಮಾನವೀಯ ಮೌಲ್ಯಗಳ ಬೆಳಕು, ಮಹಾರಾಷ್ಟ್ರದ ಮಹಾತ್ಮ ಜ್ಯೋತಿಭಾಪುಲೆ ಮತ್ತು ಶಾಹುಮಹಾರಾಜರಿಂದ ಸಮಾನತೆಯ ಕನಸು ಮತ್ತು ದೂರದರ್ಶಿತ್ವದಿಂದ ರೂಪಿತವಾಗಿ ಪ್ರಬಲವಾಗಿ ಬೆಳೆದ 'ಬ್ರಾಹ್ಮಣೇತರ ಚಳುವಳಿ'ಯ ಪ್ರಭಾವ ಜೊತೆಗೆ ಬ್ರಿಟಿಷ್ ವಸಾಹತುಶಾಹಿ ಜಾರಿಗೆ ತಂದ ಹಲವು ಜನಪರ ಕಾನೂನುಗಳ ಪ್ರಭಾವವೂ ಇದೆ. ಒಟ್ಟಾರೆಯಾಗಿ ಶೋಷಿತ ಸಮುದಾಯದ ಉದ್ಧಾರದ ವಿಷಯದಲ್ಲಿ ಅಂಬೇಡ್ಕರ್ ಒಂದು ಮಿಷನ್ ಸ್ವರೂಪದಲ್ಲಿ ಕಾರ್ಯ ಯೋಜನೆ ರೂಪಿಸಿ, ಅನುಷ್ಠಾನಕ್ಕೆ ತರುತ್ತಾರೆಂಬ ಶಾಹುಮಹಾರಾಜರ ಭವಿಷ್ಯವಾಣಿ ನಿಜವಾದುದು ಗಮನಾರ್ಹವಾದ ಸಂಗತಿ. ಛತ್ರಪತಿ ಶಾಹುಮಹಾರಾಜರು ಕ್ರಿ.ಶ.೧೯೨೦ ಮಾರ್ಚ್ ೨೧-೨೨ ರಂದು 'ಮನಗಾಂವ್' ಎಂಬಲ್ಲಿ ಮಹಾರ್ ಸಮ್ಮೇಳನವೊಂದನ್ನು ಸಂಘಟಿಸಿ, ಆ ಸಮ್ಮೇಳನದ ಅಧ್ಯಕ್ಷತೆಯನ್ನು ಡಾಃ ಅಂಬೇಡ್ಕರ್ ವಹಿಸಿಕೊಡುತ್ತಾರೆ. ಈ ಸಮ್ಮೇಳನದಲ್ಲಿ ಶಾಹುಮಹಾರಾಜರು ಡಾಃ ಅಂಬೇಡ್ಕರ್ ರನ್ನು ಸಭೆಗೆ ಪರಿಚಯಿಸುತ್ತಾ ..... ಪ್ರವಾದಿಯ ಧ್ವನಿಯಲ್ಲಿ ಹೀಗೆ ಹೇಳಿದರು.

"ನಾವು ಈವರೆಗೆ ಪ್ರಾಂತೀಯವಾಗಿ ಮಾಡಿರುವ ಹೋರಾಟವನ್ನು ಡಾಃ ಅಂಬೇಡ್ಕರ್ ದೇಶಾದ್ಯಂತ ಕೊಂಡೊಯ್ಯಲಿದ್ದಾರೆ. ಅವರು ನಿಮ್ಮ ವಿಮೋಚನೆಯನ್ನು ಮಾಡಲಿದ್ದಾರೆ. ನಿಮ್ಮ ಕೈಗೆ ತೊಡಿಸಲಾಗಿರುವ ಬೇಡಿಯನ್ನು ಅವರು ಕಳಚುತ್ತಾರೆ. ಹಾಗೆಯೇ ನನ್ನ ಅಂತರಂಗ ನುಡಿಯುತ್ತಿದೆ ...... ನೀವೆಲ್ಲಾ ಅವರನ್ನು ಹಿಂಬಾಲಿಸಿ" ...... ಅಂದಿನಿಂದ ಡಾಃ ಬಿ.ಆರ್.ಅಂಬೇಡ್ಕರರು ಭಾರತದ ಶೋಷಿತರ ವಿಮೋಚನಾ ಚಳುವಳಿಯ ಸಾರಥ್ಯ ವಹಿಸಿದರು."[೧]

ಇದಾದ ನಂತರ ಅನೇಕ ಸುಧಾರಣೆಗಳು ಕಂಡುಬಂದವಾದರೂ, ರಾಜಕೀಯದ ಮೂಲಕ ತುಳಿಯಲು ಪ್ರಾರಂಭಿಸಿದರು. ಅಂಬೇಡ್ಕರರನ್ನು ದಲಿತ ನಾಯಕರೆಂದು ಕಾಂಗ್ರೆಸ್ಸಿಗರೇ ಪ್ರಚುರಪಡಿಸಿದರು. ವ್ಯವಸ್ಥಿತವಾಗಿ ೧೯೫೨ರಲ್ಲಿ ನಡೆದ ಚುನಾವಣೆಯಲ್ಲಿ ಅಂಬೇಡ್ಕರರನ್ನು ಸೋಲಿಸಿದರು. ಇದೆಲ್ಲದರ ನಡುವೆಯೂ ವಿಚಲಿತರಾಗದ ಡಾಃಅಂಬೇಡ್ಕರ್ ರವರು ಮೂಲಭೂತವಾದಿಗಳ ಎಲ್ಲಾ ಸಂಚುಗಳನ್ನು ಬಯಲು ಮಾಡುತ್ತಾ, ಅಸ್ಪೃಶ್ಯರ ಕಲ್ಯಾಣದ ಮಾರ್ಗದಲ್ಲಿ ಒಂದು ಅಖಂಡ ನೈತಿಕ

೧. ಸಾಪ್ತಾಹಿಕ ಪುರವಣಿ, ಪ್ರಜಾವಾಣಿ ಪತ್ರಿಕೆ ದಿನಾಂಕ ೦೯.೦೮.೨೦೦೯

ಶಕ್ತಿಯೊಂದಿಗೆ ಮುನ್ನಡೆಸಿದರು. ದುಂಡು ಮೇಜಿನ ಸಭೆಗಳಲ್ಲಿ ಭಾಗವಹಿಸಿ, ಅಸ್ಪೃಶ್ಯರಿಗೆ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಮೀಸಲಾತಿ, ಸಾಮಾಜಿಕ ಬಹಿಷ್ಕಾರ ಪದ್ಧತಿ, ನಿಷೇಧ, ಜಾತಿ ದೌರ್ಜನ್ಯಗಳಿಗೆ ತಡೆ ಮೊದಲಾದ ಹಕ್ಕುಗಳನ್ನು ಪಡೆದುಕೊಂಡು, ಅಲ್ಲದೆ ಬ್ರಿಟಿಷರಿಂದ ೧೯೩೨, ಆಗಸ್ಟ್ ೧೭ರಂದು ಅಸ್ಪೃಶ್ಯರಿಗೆ ಎರಡು ಮತಗಳ ವಿಶೇಷ ಚುನಾಯಿಕಗಳನ್ನು ಪಡೆದುಕೊಂಡರು. ಆದರೆ, ಗಾಂಧೀಜಿಯವರ ಉಪವಾಸ ಸತ್ಯಾಗ್ರಹದಿಂದ ಇದನ್ನು ಹಿಂದಕ್ಕೆ ಪಡೆಯಬೇಕಾಯಿತು. ಆಗ ಅಂಬೇಡ್ಕರ್ ರವರು ಅನುಭವಿಸಿದ ಸಂಕಟ ಮಾತುಗಳಲ್ಲಿ ಮಡುಗಟ್ಟಿದೆ. ಮುಂದೆ ಅವರು "ಸ್ವತಂತ್ರ ಕಾರ್ಮಿಕ ಪಕ್ಷ"ವನ್ನು ೧೯೩೬ರಲ್ಲಿ ಸ್ಥಾಪಿಸಿ, ೧೯೩೭ರಲ್ಲಿ ನಡೆದ ಚುನಾವಣೆಯಲ್ಲಿ ೧೫ ಜನ ಶಾಸಕರನ್ನು ಗೆಲ್ಲಿಸಿದರು. ೧೯೪೬ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ತಮ್ಮದೇ ಪಕ್ಷದಿಂದ ಗೆದ್ದು ಸಂವಿಧಾನ ರಚನಾ ಸಮಿತಿಯ 'ಕರಡು ಸಭೆ'ಗೆ ಅಧ್ಯಕ್ಷರೂ ಆದರು. ಸ್ವತಂತ್ರ್ಯ ಭಾರತದ 'ಸಂವಿಧಾನ ರಚನೆ'ಗಾಗಿ ತಮ್ಮ ಅಂತಃಶಕ್ತಿಯನ್ನೆಲ್ಲಾ ಧಾರೆಯೆರೆದರು. ಅವರ ನಿಧನದ ನಂತರ ಈ ಶೋಷಿತರ ಚಳುವಳಿ ದೇಶಾದ್ಯಂತ ದಿಕ್ಕೆಟ್ಟುಹೋಯಿತು.

ಡಾಃ ಅಂಬೇಡ್ಕರರ ಪರಿನಿಬ್ಬಾಣರಾದ ೧೫ ವರ್ಷಗಳ ನಂತರ ಅಂದರೆ, ಸುಮಾರು ೧೯೭೦ರ ದಶಕದಲ್ಲಿ ಇಡೀ ದೇಶಾದ್ಯಂತ ಅಲ್ಲಲ್ಲಿ ಈ ಶೋಷಿತರ ಚಳುವಳಿ ಮತ್ತೆ ತಲೆ ಎತ್ತಿತು. ಅವುಗಳಲ್ಲಿ ಉತ್ತರ ಪ್ರದೇಶದ 'ಬಹುಜನ ಚಳುವಳಿ', ಮಹಾರಾಷ್ಟ್ರದ 'ದಲಿತ ಚಳುವಳಿ' ಮತ್ತು ಕರ್ನಾಟಕದ 'ದಲಿತ ಚಳುವಳಿ'ಗಳು ಅತ್ಯಂತ ಪ್ರಮುಖವಾದವುಗಳು.

ಕನ್ನಡ ದಲಿತ ಸಾಹಿತ್ಯ ಚಳುವಳಿಯ ಬೇರುಗಳು ಈ ಹಿಂದೆ ವಿಶ್ಲೇಷಿಸಿರುವಂತೆ ಪ್ರಾಚೀನವಾದವುಗಳಾದರೂ, ೭೦ರ ದಶಕದಲ್ಲಿ 'ಬೂಸಾ ಪ್ರಕರಣ'ದಿಂದಾಗಿ ಒಮ್ಮೆಲೆ ಅದು ಸ್ಫೋಟಗೊಂಡಿತು. ತಾಃ ೧೮.೧೧.೧೯೭೩ರಲ್ಲಿ ಬಿ.ಬಸವಲಿಂಗಪ್ಪ ನವರು ಮೈಸೂರು ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಮಾತನಾಡುತ್ತಾ, 'ಕನ್ನಡ ಸಾಹಿತ್ಯದಲ್ಲಿ ಬಹುಪಾಲು ಬೂಸಾ' ಇದೆ ಎಂದು ಹೇಳಿದ್ದು, ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ ವಲಯದಲ್ಲಿ ಬಹು ದೊಡ್ಡ ಬಿರುಗಾಳಿಯನ್ನೆಬ್ಬಿಸಿತು. ಇದರಿಂದ ಅವರು ಮಂತ್ರಿ ಪದವಿಯನ್ನು ಕಳೆದುಕೊಂಡರು. ಈ ಸಂದರ್ಭದಲ್ಲಿ ಕರ್ನಾಟಕದಾದ್ಯಂತ ಜಾತಿ ಗಲಭೆಗಳೂ ಕೂಡ ನಡೆದವು. ಇದರಿಂದ ರೊಚ್ಚಿಗೆದ್ದ ದಲಿತರು ೧೯೭೪ರಲ್ಲಿ 'ದಲಿತ ಸಂಘರ್ಷ ಸಮಿತಿ'ಯನ್ನು ಸ್ಥಾಪಿಸಿದರು. ಭದ್ರಾವತಿಯಲ್ಲಿ ಪ್ರೊ. ಬಿ.ಕೃಷ್ಣಪ್ಪ ನವರಿಂದ ಚಿಕ್ಕದಾಗಿ ಆರಂಭವಾದ 'ದಲಿತ ಸಂಘರ್ಷ ಸಮಿತಿ' ಮುಂದೆ ಶರವೇಗದಲ್ಲಿ ಕರ್ನಾಟಕದಾದ್ಯಂತ ಪಸರಿಸಿ 'ಕರ್ನಾಟಕ

ದಲಿತ ಸಂಘರ್ಷ ಸಮಿತಿ' ಯಾಯಿತು. ಇಲ್ಲಿಂದ ಕರ್ನಾಟಕದ ದಲಿತ ಚಳುವಳಿಯು ಆರಂಭವಾಯಿತು.

ಕಾಳ್ಗಿಚ್ಚಿನಂತೆ ಹರಡಿದ ಈ ಚಳುವಳಿಯಲ್ಲಿ ದಲಿತ ಹಾಗೂ ಹಿಂದುಳಿದ ವರ್ಗಗಳ ಅದೆಷ್ಟೋ ಸಾವಿರ ಯುವಕರು ಧುಮುಕಿದರು. ಜೀವ ಭಾವಗಳಿಗೆ ಬೆಲೆಯಿಲ್ಲದ ಈ ಶಿಕ್ಷಣ ಯಾರಿಗೆ ಬೇಕು ಎಂಬ ಕ್ಷಣ ಭಂಗುರದ ಆವೇಶಭರಿತವಾದ ಯುವಕರು, ಈ ಚಳುವಳಿಯಲ್ಲಿ ತೊಡಗಿದವರೆಷ್ಟೋ; ತಮ್ಮ ಆತ್ಮ ಜಾಗೃತಿ ಈಗ ಮಾತ್ರ ಸಾಧ್ಯವೆಂಬ ಸತ್ಯವನ್ನು ಮನಗಂಡವರೆಷ್ಟೋ; ಸಾಹಿತ್ಯದ ನೆಲೆಗಳಲ್ಲಿ ನಿಂತು ಕವಿತೆಯಲ್ಲಿ ತಮ್ಮ ದನಿಯೆತ್ತಲು ಯತ್ನಿಸುತ್ತಾ ನಡೆದ ಈ ಯುವಕರು ಅಸ್ಪೃಶ್ಯರ ಮೇಲಿನ ನಗರ ಪ್ರದೇಶದ ಅವಮಾನಗಳನ್ನು ಗ್ರಾಮೀಣ ಪ್ರದೇಶದ ಹತ್ಯೆಗಳನ್ನು ಈಗಲ್ಲದಿದ್ದರೆ ಇನ್ನೆಂದಿಗೂ ತಡೆಗಟ್ಟಲು ಸಾಧ್ಯವಿಲ್ಲವೆಂಬುದನ್ನು ಈ ಘಟ್ಟದಲ್ಲಿ ಸ್ವಯಂ ಸಾಕ್ಷಾತ್ಕರಿಸಿಕೊಂಡರು ಮತ್ತು ನಾಡಿನಾದ್ಯಂತ ತಮ್ಮ ಚಳುವಳಿಯ ಮೂಲಕ ಆ ಸತ್ಯ ಸಂಗತಿಯನ್ನು ಜಗಜ್ಜಾಹೀರುಪಡಿಸ ಲಾರಂಭಿಸಿದರು. ದಲಿತರು ಮತ್ತು ದುರ್ಬಲರ ಮೇಲಿನ ಸಾಮೂಹಿಕ ಕೊಲೆ, ಸುಲಿಗೆಗಳನ್ನು ಅಂಕಿ–ಅಂಶಗಳ ಸಹಿತ ಈ ಅವಧಿಯಲ್ಲಿ ಬೀದಿ ನಾಟಕಗಳ ಮೂಲಕ ಬೀದಿಗೆ ತರಲಾಯಿತು. ಈ ಚಳುವಳಿಗೆ ಕೂಲಿ ಕಾರ್ಮಿಕರೂ ಸೇರಿದರು. ಸಾಮಾಜಿಕ ಜೀತಗಾರಿಕೆಯಿಂದ, ಸರ್ಕಾರಿ ಜೀತಗಾರಿಕೆಯಲ್ಲಿ ಅನುಚಿತ ಅವಮಾನಗಳಿಂದ ತಲೆತಗ್ಗಿಸಿದ್ದ, ದಲಿತ ವರ್ಗದ ಸರ್ಕಾರಿ ನೌಕರರು, ಈ ಅವಧಿಯಲ್ಲಿ ಮೊದಲ ಬಾರಿಗೆ ತಲೆಯೆತ್ತುವ ಧೈರ್ಯ ಮಾಡಿದರು. ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳಲ್ಲಿ ದಲಿತ–ದುರ್ಬಲ ವರ್ಗಗಳ ವಿದ್ಯಾರ್ಥಿಗಳು ಗುಂಪು ಕಟ್ಟಿದರು. ಅಂಕಪಟ್ಟಿಗಳ ಮೇಲೆ ಜಾತಿ ಬೇಧ ಕಂಡು ಕಂಗಾಲಾದರು. ಲಿಂಗಬೇಧ ಕಂಡು ದಿಕ್ಕೆಟ್ಟರು. ಆವರೆಗೂ ಕೇವಲ ಅವರ ಕಣ್ಣುಗಳಲ್ಲಿ ಮಾತ್ರ ಅಡಗಿದ್ದ ಅವರ ಮಾತುಗಳು ನಾಲಿಗೆಗಳ ಮೇಲೆ ಸಿಡಿಯತೊಡಗಿದವರು, ಮಾತುಗಳು ಮಾರ್ಧನಿಸಿದವು, ಜಾತಿ ನಿಂದೆಗಳು ವಿಜೃಂಭಿಸಿದವು, ಅವಮಾನಿತರಾದವರು ಗೋಷ್ಠಿ ಮಾಡಿದರು, ಘೋಷಣೆ ಕೂಗಿದರು, ಉಳ್ಳವರಿಗೆ ಮಾತ್ರ ಉಚ್ಚ ಶಿಕ್ಷಣ ಎಂಬ ಉಚ್ಚರ ಅಘೋಷಿತ ಗುಂಡಿಗೆಯನ್ನು ಒಮ್ಮೆ ನಿಜಕ್ಕೂ ಅಳ್ಳಾಡಿಸಿದರು".[೧]

ಹೀಗೆ ದಲಿತ ಸಂಘರ್ಷ ಸಮಿತಿಯು ದಲಿತರ ಮೇಲೆ ಮೇಲು ಜಾತಿಗಳಿಂದ ಆಗುತ್ತಿದ್ದ ಹಲ್ಲೆ, ದೌರ್ಜನ್ಯಗಳನ್ನು ಖಂಡಿಸುವ, ಅಪರಾಧಿಗಳನ್ನು ಶಿಕ್ಷಿಸುವಂತೆ ಒತ್ತಾಯಿಸುವ ಬೃಹತ್ ಬಲಶಾಲಿ ಸಂಘಟನೆಯಾಗಿ ಬೆಳೆಯಿತು. ದಲಿತ ಸಂಘರ್ಷ ಸಮಿತಿಯು ಬೀದಿ ಚಳುವಳಿಯ ಮೂಲಕ ತನ್ನ ಬೃಹತ್ ಶಕ್ತಿಯನ್ನು ಪ್ರದರ್ಶಿಸಿ

---

೧. ಕನ್ನಡ ಸಾಹಿತ್ಯದಲ್ಲಿ ಶಿವ, ರಾಮ, ಕೃಷ್ಣ ಮತ್ತು ಅಂಬೇಡ್ಕರ್ – ಡಾಃ ಮ.ನ.ಜವರಯ್ಯ, ಪುಟ. ೨೯೪.

ಆಳುವ ಸರ್ಕಾರಗಳ ಗದ್ದುಗೆಯನ್ನು ನಡುಗಿಸುತ್ತಿತ್ತು. ದಲಿತ ಸಂಘರ್ಷ ಸಮಿತಿ ಅನೇಕ ದೌರ್ಜನ್ಯಗಳ ವಿರುದ್ಧ ಗಮನಹರಿಸಿದಂತೆಯೇ ಹಲವು ಪ್ರಮುಖ ಹೋರಾಟಗಳನ್ನು ಮಾಡಿತು. ದಲಿತ ಚಳುವಳಿಯು ಯೋಧರ ಪಡೆಯಂತೆ ಮುನ್ನುಗ್ಗುವಂತೆ ಮಾಡುವಲ್ಲಿ ೧೯೭೭ರಲ್ಲಿ ಅಸ್ತಿತ್ವಕ್ಕೆ ಬಂದ 'ದಲಿತ ಕಲಾ ಮಂಡಳಿ'ಯ ಕೊಡುಗೆಯೂ ಗಣನೀಯವಾದುದು. ಕರ್ನಲ್ ನಾರಾಯಣಸ್ವಾಮಿ, ಮುನಿಸ್ವಾಮಿ, ಪಿಚ್ಚಳ್ಳಿ ಶ್ರೀನಿವಾಸ್, ಬಾನಂದೂರು ಕೆಂಪಯ್ಯ, ಮುನಿಯಲ್ಲಪ್ಪ, ಜನಾರ್ಧನ, ಈ ಮುಂತಾದವರು ಈ ಚಳುವಳಿ ಜನಪರವಾಗಲು ಕಾರಣವೆನಿಸಿದರು.

ದಲಿತ ಸಂಘರ್ಷ ಸಮಿತಿಯು, ದಲಿತ ಸಮಸ್ಯೆಗಳಿಗೆ ಸಂಬಂಧಿಸಿದವರಿಂದ ಪರಿಹಾರ ಕೊಡಿಸುವುದು, ದೌರ್ಜನ್ಯಕ್ಕೊಳಗಾದವರ ಪರವಾಗಿ ನಿಲ್ಲುವುದು, ಸರಳ ವಿವಾಹ ಕಾರ್ಯಕ್ರಮ ಏರ್ಪಡಿಸುವುದು, ದಲಿತ ವಿದ್ಯಾರ್ಥಿ ನಿಲಯಗಳು ಹಾಗೂ ವಿದ್ಯಾರ್ಥಿ ವೇತನವನ್ನು ಹೆಚ್ಚಿಸುವುದು ಇಂತಹ ಹಲವಾರು ಕಾರ್ಯಕ್ರಮಗಳನ್ನು ವಿದ್ಯಾರ್ಥಿ ಒಕ್ಕೂಟ ಕೈಗೆತ್ತಿಕೊಂಡಿತು.

ಉದಾಃ ದಲಿತ, ರೈತ, ಕಾರ್ಮಿಕರ ಹೋರಾಟದ ತೀವ್ರತೆಯನ್ನು ಕಟ್ಟಿಕೊಡುವ ಇವರ ಕವಿತೆಗಳು, ಅದರೊಟ್ಟಿಗೆ ಶೋಷಿತರನ್ನು, ಶೋಷಕ ವ್ಯವಸ್ಥೆಯ ವಿರುದ್ಧ ಪ್ರತಿಭಟನೆಗೆ ಅಣಿಗೊಳಿಸುವ ಸತ್ವವುಳ್ಳವು. ಉದಾಹರಣೆಗೆ

"ಗುಡಿಸಲುಗಳು ಗುಡುಗುತಿವೆ ಬಂಗಲೆಗಳು ನಡುಗುತಿವೆ
ಎಲ್ಲೆಲ್ಲಿಯೂ ಮೊಳಗುತ್ತಿದೆ ನವಕ್ರಾಂತಿಯ ಗಾನ
ಮತಗಳು ಹತವಾಗುತಿವೆ ಜನಪಥಗಳು ಮೂಡುತಿವೆ
ಅಸಮಾನತೆ ಆಗುತ್ತಿದೆ ಕ್ರಾಂತಿಗೆ ಸೋಪಾನ
ರೈಲು ನಿಲುವ ತಾಣದಲ್ಲಿ ಭಾರ ಹೊತ್ತ ರಟ್ಟೆಯಲಿ
ತೊಟ್ಟಿಕ್ಕಿದ ಬೆವರಿನ ಹನಿ ಬೆಂಕಿಯಾಗಿ ಸಿಡಿದ
ಬಡಜನಗಳ ಕಣ್ತೆರೆಸಿ ಶೋಷಕರನು ಕಂಗೆಡಿಸಿ
ಕೆಂಗಿಡಗಳ ಕಾರುತ್ತಿದೆ ಘೋರಾರ್ಭಟವಾಗಿ".[೧]

– ಸಿದ್ದಲಿಂಗಯ್ಯ

ಇಷ್ಟೊಂದು ಸತ್ವಯುತ, ಸಾಂಸ್ಕೃತಿಕ ಪರಂಪರೆಯನ್ನು ಬೆನ್ನಿಗಿಟ್ಟುಕೊಂಡಿರುವ ದಲಿತ ಸಂಘರ್ಷ ಸಮಿತಿ ಬೆಳೆಯುತ್ತಾ ತಾತ್ವಿಕವಾಗಿ ಹೆಚ್ಚು ಗಟ್ಟಿಯಾಗತೊಡಗಿತು. ಪ್ರಾರಂಭದ ದಿನಗಳಲ್ಲಿ ಕಾರ್ಯಕರ್ತರಾಗಿ ದುಡಿಯುತ್ತಿದ್ದವರಿಗೆ ಕಾನೂನು, ಆಡಳಿತ ಹಾಗೂ ತತ್ವದ ಲವಲೇಶ ಪರಿಚಯವೂ ಇರುತ್ತಿರಲಿಲ್ಲ. ಆದರೂ "ಇದು ಅನ್ಯಾಯ,

೧. ಸಾವಿರಾರು ನದಿಗಳು, ಪುಟ. ೨೮–೨೯.

ಇದನ್ನು ಸರಿಪಡಿಸಿ" ಎಂಬುದಷ್ಟೇ ಸಂಘಟನೆಯ ಮೊದಲ ಹಠವಾಗಿರುತ್ತಿತ್ತು. "ಅಸಮಾನತೆಯ ದೈತ್ಯ ವ್ಯವಸ್ಥೆಯ ವಿರುದ್ಧದ ಅಲ್ಪಸಂಖ್ಯಾತರ ಹೋರಾಟವೇ ಅದಾಗಿದ್ದರೂ, ಆ ಹೋರಾಟದ ಹಿಂದಿನ ಮಾನವ ಕಾಳಜಿಗಳ ನೈತಿಕತೆ ಕಾರ್ಯಕರ್ತರ ಅನುಕ್ಷಣದ ಆತ್ಮವಿಶ್ವಾಸವನ್ನು ಇಮ್ಮಡಿಸುತ್ತಿತ್ತು. ದಲಿತರ ಮೇಲಿನ ಎಲ್ಲಾ ರೀತಿಯ ದಬ್ಬಾಳಿಕೆಗಳ ವಿರುದ್ಧವೂ ಸಂಘರ್ಷ ಸಮಿತಿ ಹೋರಾಟ ನಡೆಸಿದೆ. ಕೊಲೆಗಳು, ಅತ್ಯಾಚಾರ, ಸಾಮಾಜಿಕ ಬಹಿಷ್ಕಾರ, ಅಸ್ಪೃಶ್ಯತೆ ಯಂತಹ, ಕೊಲೆಗಡುಕ ಸಂಸ್ಕೃತಿಯ ವಿರುದ್ಧ ನಿರಂತರ ಸಮರವನ್ನು ನಡೆಸುತ್ತಾ ಬಂದಿದೆ. ಇಡೀ ಸಮಾಜದ ಕುಹಕ, ಪ್ರತಿ ಹಲ್ಲೆಯ ಭೀತಿ, ಹಣಕಾಸಿನ ತೀವ್ರ ರೀತಿಯ ಬಿಕ್ಕಟ್ಟು, ವ್ಯಕ್ತಿಗತವಾದ ನೋವು, ಸಮಸ್ಯೆಗಳ ನಡುವೆಯೂ ಹೋರಾಟದ ಚೈತನ್ಯ ಕಿಂಚಿತ್ತೂ ಕಡಿಮೆಯಾಗಿರಲಿಲ್ಲ. ಪರಸ್ಪರ ನಂಬಿಕೆಯೊಂದೇ ಆಗ ಹೋರಾಟದ ಜೀವಾಳವಾಗಿತ್ತು. ಆಗಿನ ಆತ್ಮವಿಶ್ವಾಸ, ಚೈತನ್ಯ ಆಯಾ ಸಂದರ್ಭದ ಒತ್ತಡವಾಗಿ ಮೂಡಿ ಬಂದ ಭಾವವೋ ಅಥವಾ ಚಳುವಳಿಯೊಂದರ ಪ್ರಾರಂಭದ ದಿನಗಳಲ್ಲಿ ನಡೆದ ಹೋರಾಟಗಳ ಸರಪಳಿ, ದಲಿತರ ಬದುಕದ ಭೂಮಿಗಾಗಿ ಒಂದರ ಹಿಂದೊಂದರಂತೆ ನಡೆದ ಹೋರಾಟಗಳ ಸರಪಳಿ ದಲಿತ ಸಂಘರ್ಷ ಸಮಿತಿ ಹಳ್ಳಿಹಳ್ಳಿಯಲ್ಲೂ ಬೇರು ಬಿಡುವಂತೆ ಮಾಡಿತು. ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದ ಬುದ್ಧಿಜೀವಿ ವರ್ಗದ ತೀವ್ರ ಗಮನ ಹಾಗೂ ಪ್ರೀತಿಯನ್ನು ಕ್ರಮೇಣ ದಲಿತ ಸಂಘರ್ಷ ಸಮಿತಿ ಪಡೆದುಕೊಂಡಿತು."[೧]

ಬೂಸಾ ಪ್ರಕರಣಕ್ಕೆ ತತ್‌ಕ್ಷಣದ ಪ್ರತಿಕ್ರಿಯೆಯಾಗಿ ಹುಟ್ಟಿಕೊಂಡ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಾವಿರಾರು ತ್ಯಾಗಶೀಲ ಕಾರ್ಯಕರ್ತರ ಬೆವರಿನ ನೀರು ಕುಡಿದು ಬಲಿಷ್ಟ ಮರವಾಗಿ ಬೆಳೆಯಿತು. ದಲಿತ ಚಳುವಳಿಯ ಬಹುಪಾಲು ನಾಯಕರು, ಲೇಖಕರು, ಕವಿ, ಸಾಹಿತಿಗಳೂ ಆಗಿದ್ದರು. "ದಲಿತ ಸಂಘರ್ಷ ಸಮಿತಿ" ಕರ್ನಾಟಕ ದಲಿತ ಬರಹಗಾರರ ಚಿಂತಕರ ಕೈಗೂಸು. ಇಂಥ ಸಮಯದಲ್ಲಿ ಅನೇಕ ದಲಿತ ಲೇಖಕರು ಹೋರಾಟ ನಡೆಸಿದರು. ಅವರಲ್ಲಿ ದೇವನೂರು ಮಹಾದೇವ, ದೇವಯ್ಯ ಹರವೆ, ಮುಳ್ಳೂರು ನಾಗರಾಜು ಇನ್ನೂ ಅನೇಕ ಲೇಖಕರು ಪ್ರಮುಖರಾಗಿದ್ದರು. ಈ ಸಂದರ್ಭದಲ್ಲಿ ಸ್ವಾಭಿಮಾನ, ಆತ್ಮಸ್ಥೈರ್ಯ ಕಾಣಿಸಿಕೊಂಡವು. ಅಸ್ಪೃಶ್ಯರು ತಮ್ಮ ಜಾತಿಗಳ ಹೆಸರಿನೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವ ಕೆಚ್ಚು ತೋರಿದರು. ದಲಿತರು ಎಂದರೆ ಶತಮಾನಗಳಿಂದ ಜನಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು. ಒಟ್ಟು ಮನುಷ್ಯ ಸಮಾಜದೊಂದಿಗೆ ಬದುಕಲಾಗದೆ, ಊರ ಹೊರಗೆ ವಾಸಿಸಿ ಕೀಳುವೃತ್ತಿಗೆ

೧. ದಲಿತ ಮಾರ್ಗ – ಅ.ಮಾಲಗತ್ತಿ, ಪುಟ ೧೮೧

ಅವಲಂಬಿತರಾಗಿ, ಹೆಸರು ಹೇಳಿಕೊಳ್ಳಲು ನಾಚಿಕೆ ಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆನಿಸಿಕೊಂಡವರೆಲ್ಲರೂ ದಲಿತರೆನಿಸಿಕೊಳ್ಳುತ್ತಾರೆ.

"ದಲಿತ ಸಾಹಿತ್ಯದ ಲಕ್ಷಣಗಳನ್ನು ಕುರಿತು ಬರೆಯುವುದೆಂದರೆ, ಕಡಲನ್ನು ಕನ್ನಡಿಯಲ್ಲಿ ಹಿಡಿದಿಡುವ ಸಾಹಸವನ್ನು ಮಾಡಿದಂತೆ, ಏಕೆಂದರೆ ಕತ್ತಲನಾಡಿನ ಜನತೆ ಈಗ ಮೂಡಿಸಿರುವ ಲೇಖನಿ ಅಲ್ಪವಾದರೂ ಕಾಯಕಲ್ಪವಾಗಿದೆ. ಸಾಹಿತ್ಯದ ಮಜಲುಗಳು ಬೆರಗಾಗಿ ನೋಡುತ್ತಿವೆ. ಬೆರಳೆಣಿಕೆಯ ಲೇಖಕರ ಬರಹಗಳೇ ಬಿರುಗಾಳಿಯನ್ನೆಬ್ಬಿಸಿವೆ. ಸಾಹಿತ್ಯದಲ್ಲಿ ಇನ್ನೂ ಅಲ್ಪ ವಿರಾಮವೇ ಬಿದ್ದಿಲ್ಲ. ಆಗಲೇ ಪ್ರತಿಧ್ವನಿಗಳ ಅಲೆ ಮೊಳಗುತ್ತಿವೆ, ವಿಮರ್ಶೆಯ ಮಾನದಂಡಗಳೂ ಬದಲಾಗಿವೆ."[೧]

ಅರವತ್ತರ ದಶಕದ ಅಂತ್ಯ ಮತ್ತು ಎಪ್ಪತ್ತರ ದಶಕದ ಆರಂಭದ ಕಾಲ ಸಾಂಸ್ಕೃತಿಕವಾಗಿ ತಲ್ಲಣಗೊಂಡ ಕಾಲ. ಯಾವುದೋ ನಿಶ್ಚಿತ ನೆಲೆಯಿಲ್ಲದೆ ಕ್ಷಣದಿಂದ ಕ್ಷಣಕ್ಕೆ ನೀರ ಮೇಲಿನ ಗುಳ್ಳೆಯಂತೆ ಮೂಡುವ ಮುಳುಗುವ ವೈಚಾರಿಕ ಸಂಘರ್ಷಕ್ಕೆ ನಾಂದಿ ಹಾಡಿದ ಕಾಲ. ದಲಿತ ಯುಗದ ದಲಿತೋದಯದ ಕಾಲ. ಹದವಿಲ್ಲದ ಹದಗೊಳ್ಳುವ ಕಾಲದಲ್ಲಿಯೇ ಕಾಣಿಸಿಕೊಂಡಿದ್ದು ದಲಿತ ಎಂಬ ಪದ. ಈ ಪದ ಮಹಾರಾಷ್ಟ್ರದಿಂದಲೇ ವಲಸೆ ಬಂದಂತಿದೆ. ಕನ್ನಡ ಸಾಹಿತ್ಯದಲ್ಲಿ ಈ ಪದವನ್ನು ಅಧಿಕೃತವಾಗಿ ಬಳಸಲು ಆರಂಭವಾದುದು ೧೯೭೨ರಲ್ಲಿ.

೧೯೬೯ರಲ್ಲಿ ಡಾಃ ಅಂಬೇಡ್ಕರ್ ಜಯಂತಿಯಂದು 'ಹಾವನೂರ ಆಯೋಗ'ದ ವರದಿಯನ್ನು ಜಾರಿಯಲ್ಲಿ ತರಬೇಕೆಂದು ದಲಿತ ರಾಜಕೀಯ ನಾಯಕರು ಹೋರಾಟ ಆರಂಭಿಸಿದರು. ಈ ಸಂದರ್ಭದಲ್ಲಿ ಬಿ.ಬಸವಲಿಂಗಪ್ಪ ನವರು ನೇತೃತ್ವವನ್ನು ವಹಿಸಿದ್ದರು. ೧೯೭೩ರಲ್ಲಿ 'ಮಲ ಹೊರುವ ಪದ್ಧತಿ'ಯ ಕುರಿತು ಚರ್ಚೆ ಆರಂಭವಾಯಿತು. ಇಂಥವೆಲ್ಲಾ ಪ್ರಸಂಗಗಳು ದಲಿತರಲ್ಲಿ, ದಲಿತ ಪ್ರಜ್ಞೆ ಜಾಗೃತಿಯನ್ನು ಹೆಚ್ಚಿಸಿದವು. ತುರ್ತು ಪರಿಸ್ಥಿತಿಯ ಸಂದರ್ಭಗಳು ಅಪ್ರತ್ಯಕ್ಷವಾಗಿ ಪ್ರೇರಣೆಯನ್ನಿತ್ತವು.

ದಲಿತರ ಸಂಘಟನೆಯೊಂದಿಗೆ ರೈತ ಸಂಘಟನೆ, ಸಮುದಾಯದ ಸಂಘಟನೆಗಳು ನಿಕಟವಾಗಿದ್ದರೂ ಹೆಚ್ಚು ಕಾಲ ಒಂದಾಗಿ ನಡೆಯಲು ಸಾಧ್ಯವಾಗಲಿಲ್ಲ. ಆದರೆ, ಸಮುದಾಯ ದಲಿತರದ್ದೇ ಅಂಗಳವಾಗಿತ್ತು. ಸಮುದಾಯ ನಡೆಸಿದ ಜಾಥಾ ಇನ್ನೊಂದು ಅರ್ಥದಲ್ಲಿ ದಲಿತ ಜಾಥಾವೇ ಆಗಿತ್ತೆಂದು ಹೇಳಬಹುದು. ಹೀಗೆ ದಲಿತರು ವಿಭಿನ್ನ ಸಂಘಟನೆಗಳ ಜೊತೆಗೆ ಹೆಗಲಿಗೆ ಹೆಗಲು ಕೊಟ್ಟು ಸಾಂಸ್ಕೃತಿಕ ಸಂಘಟಕರಾಗಿ ನೊಗವನ್ನು ಎಳೆದು ತಂದರು.

---

೧. ದಲಿತ ಮಾರ್ಗ – ಅ.ಮಾಲಗತ್ತಿ, ಪುಟ ೨೫.

೧೯೭೯ರಲ್ಲಿ ಮಾರ್ಚ್ ತಿಂಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ೫೧ನೇ ಸಮ್ಮೇಳನದ ಸಿದ್ಧತೆ ನಡೆಸಿದಾಗ, ದಲಿತ ಬರಹಗಾರರು ಸಮ್ಮೇಳನದಲ್ಲಿ ದಲಿತ ಗೋಷ್ಠಿಯನ್ನಿಡಲು ಕೋರಿದರು. ಅದರ ಅಧ್ಯಕ್ಷರು ಈ ಬೇಡಿಕೆಯನ್ನು ತಿರಸ್ಕರಿಸಿದಾಗ, ದಲಿತರು-ದಲಿತೇತರರು ಒಂದೆಡೆ ಸೇರಿ 'ಬಂಡಾಯ ವೇದಿಕೆ' ರೂಪಿಸಿಕೊಂಡರು.

ಭಾರತೀಯ ಮತ್ತು 'ಅನ್ಯಭಾಷಾ ಸಾಹಿತ್ಯದ ಪ್ರಭಾವ' ದಲಿತ ಸಾಹಿತ್ಯಕ್ಕಿದೆ. ಉತ್ತರ ಕರ್ನಾಟಕದ ಲೇಖಕರ ಮೇಲೆ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳುವಳಿಯ ಪ್ರಭಾವ ಅಧಿಕವಾಗಿರುವಂತೆ, ದಕ್ಷಿಣ ಕರ್ನಾಟಕದ ದಲಿತ ಬರಹಗಾರರ ಮೇಲೆ ತೆಲುಗಿನ ದಿಗಂಬರ ಹಾಗೂ ತಿರುಗುಬುಡಲು ಕಾವ್ಯದ ಪ್ರಭಾವ ಅಧಿಕವಾಗಿದೆ. ದಕ್ಷಿಣ ಆಫ್ರಿಕಾದ ಕಪ್ಪು ಸಾಹಿತ್ಯದ ಪ್ರಭಾವ ಗಮನಾರ್ಹವಾದ ರೀತಿಯಲ್ಲಿ ಕಂಡುಬಂದರೂ, ಕಪ್ಪುತನದ ಶ್ರೇಷ್ಠತೆ ಅವರಿಗೆ ಸ್ವಾಭಿಮಾನದ ಸಂಕೇತವಾದಂತೆ, ಇಲ್ಲಿಯ ದಲಿತರಿಗೆ ಸ್ಥಳೀಯ ವಿಚಾರಗಳು ಸ್ವಾಭಿಮಾನದ ಸಂಕೇತಗಳಾದವು.

ಹೀಗೆ ಎಲ್ಲಿಂದಲೋ ಪ್ರಾರಂಭವಾಗಿ ದಲಿತ ಸಾಹಿತ್ಯ ೧೯೭೦ರ ನಂತರ ಒಂದು ನೆಲೆಯನ್ನು ಕಂಡಿತು ಎಂದರೆ ಅತಿಶಯೋಕ್ತಿಯಾಗುವುದಿಲ್ಲ. ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ ಅಕ್ಷರದ ಮೂಲಕ ಅಭಿವ್ಯಕ್ತಿಸಲು ತೊಡಗಿದ, ಅವಮಾನಿತ ಅಕ್ಷರಸ್ಥ ಸಮುದಾಯವೊಂದು ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನು ತಮ್ಮ ಕೇರಿಯ, ಪ್ರದೇಶದ ಭಾಷೆಯನ್ನು ಉಪಯೋಗಿಸಿಕೊಂಡು ತಮ್ಮ ಸಹಜ ಅನುಭವಗಳ, ಅವಮಾನ ದೌರ್ಜನ್ಯಗಳನ್ನು ಸ್ಪಷ್ಟವಾಗಿ ದಾಖಲಿಸತೊಡಗಿದ ಕೂಡಲೇ ಒಂದು ಜನಾಂಗೀಯ ಸಾಹಿತ್ಯ ಸಿದ್ಧವಾಯಿತು. ಅದನ್ನೇ ನಾವು ವಿಶಾಲ ಅರ್ಥದಲ್ಲಿ 'ದಲಿತ ಸಾಹಿತ್ಯ' ಎಂದು ಕರೆಯುತ್ತೇವೆ.

ಇದನ್ನು ನಾವು ಗುರುತಿಸುವುದು ದೇವನೂರು ಮಹಾದೇವರು ಬರೆದ ಏಳು ಕಥೆಗಳ 'ದ್ಯಾವನೂರು' ಸಂಕಲನದಿಂದ ೧೯೭೩ರಲ್ಲಿ ಪ್ರಕಟವಾದ ಈ ಕೃತಿ ಆವರೆಗೂ ಬೇರುಬಿಟ್ಟಿದ್ದ ಸಾಹಿತ್ಯ ಸಿದ್ಧಭಾಷೆ, ನುಡಿಗಟ್ಟು, ವಸ್ತು ಅನುಭವಗಳನ್ನು ಭಂಜಕಗೊಳಿಸಿತು. ದಲಿತ ಬರಹಗಾರರು ಪ್ರತಿಭಟನೆಯ ಮೂಲಕ ತಮ್ಮ ಎಚ್ಚರವನ್ನು ಸ್ವಲ್ಪ ಹೆಚ್ಚಿನಿಂದಲೇ ಹೇಳಬಯಸಿದರು. ದಲಿತ ಸಂಘರ್ಷ ಸಮಿತಿ ಮೂಲಕ ಮೈಸೂರು ವಲಯದಲ್ಲಿ ದೇವನೂರು ಮಹಾದೇವ, ಗೋವಿಂದಯ್ಯ, ಇಂದುಧರ ಹೊನ್ನಾಪುರ, ಶಿವಾಜಿಗಣೇಶನ್, ರಾಮದೇವ ರಾಕ, ದೇವನೂರು ಶಿವಮಲ್ಲು ಅವರುಗಳು ಆರಂಭಿಸಿದ 'ಪಂಚಮ' ಪತ್ರಿಕೆ ದಲಿತ ಸಾಹಿತ್ಯದ ಹೊಸ ಆಲೋಚನೆ, ಅಭಿವ್ಯಕ್ತಿಗೆ ವೇದಿಕೆ ರೂಪಿಸಿಕೊಡುವಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿತು. ಈ ಪತ್ರಿಕೆಯು ನಾಡಿನ ತುಂಬಾ ಹೊಸ ಬರಹಗಾರರನ್ನು ಹುಟ್ಟು ಹಾಕಿತು. ಇವರೆಲ್ಲಾ ಬರೆದ ಕಥೆ, ಕಾದಂಬರಿ ಮುಂತಾದವು ಹೃದಯ ಕಲಕಬಲ್ಲ ಜೀವಂತಿಕೆಯನ್ನು

ಪಡೆದುಕೊಂಡವು. ದಲಿತ ಸಾಹಿತ್ಯದಲ್ಲಿ ಕಲೆಗಾರಿಕೆಗಿಂತಲೂ ವಾಸ್ತವ ಬದುಕಿನ ಬರ್ಬರತೆ ಎದ್ದು ಕಾಣುತ್ತದೆ.

ಇದರಲ್ಲಿ ಸಿದ್ದಲಿಂಗಯ್ಯನವರ ಹೊಲೆ ಮಾದಿಗರ ಹಾಡು, ಮಹಾದೇವರ ಒಡಲಾಳ, ಕುಸುಮಬಾಲೆ ಕಾದಂಬರಿಗಳು, ಮಾಲಗತ್ತಿಯವರ 'ಮೂಕನಿಗೆ ಬಾಯಿ ಬಂದಾಗ' (೧೯೮೧) ಕಪ್ಪು ಕಾವ್ಯ (೧೯೮೫), ಗೌರ್ಮೆಂಟ್ ಬ್ರಾಹ್ಮಣ (ಆತ್ಮಕಥೆ-೧೯೯೪), ಮುಳ್ಳೂರು ನಾಗರಾಜ ರವರ 'ಮರಣ ಮಂಡಲ ಮಧ್ಯದೊಳಗೆ' (೧೯೮೬) ಮನಜ ಅವರ - 'ಕೇಳು ಜಗಮಾದಿಗ ಹೊಲೆಯ' (೧೯೮೧) 'ಅತ್ತೆ ಸೊಸೆ ಆತ್ಮಕಥೆ' (೧೯೮೭), ದೇವಯ್ಯ ಹರವೆ, ಎಲ್.ಹನುಮಂತಯ್ಯ, ಬೋಳಬಂಡೆಪ್ಪ, ಲಕ್ಷ್ಮಣ ಮುನಿ ವೆಂಕಟಪ್ಪ, ಗಂಗಾರಾಮ ಚಂಡಾಳ ಮುಂತಾದ ದಲಿತ ಲೇಖಕರು ತಮ್ಮ ವಿಚಾರ ವಿಮರ್ಶೆ, ಕಾವ್ಯ, ಕಾದಂಬರಿ, ಕಥಾ ಸಾಹಿತ್ಯವನ್ನು ವಿಪುಲವಾಗಿ ಬೆಳೆಸುತ್ತಲೇ ಪ್ರಗತಿಪರ ಸಂಘಟನೆಗಳಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡು ಸಾಹಿತ್ಯ, ಸಂಸ್ಕೃತಿ ಮತ್ತು ರಾಜಕೀಯ ಹಿತಾಸಕ್ತಿಗಳನ್ನು ಬೆಳೆಸುತ್ತಿದ್ದಾರೆ.

ಹೀಗೆ ದಲಿತ ಸಾಹಿತ್ಯ ಚಳುವಳಿಯು ಬೆಳೆದು ಬಂದ ಬಗೆಯನ್ನು ನಾವು ಕಾಣಬಹುದಾಗಿದೆ. ಇದಕ್ಕೆಲ್ಲ ಮೂಲ ಕಾರಣ ಅಂಬೇಡ್ಕರ್ ವಾದ ಎನ್ನುವುದನ್ನು ಮರೆಯುವಂತಿಲ್ಲ.

ಅಧ್ಯಾಯ – ೩

ಮುಳ್ಳೂರು ನಾಗರಾಜರ ಬದುಕು-ಬರಹ

"ನೆಲದ ಜೋಗುಳದಲ್ಲಿ ಕರುಳ ಹಾಡುಗಳ ಪಾಡುವೆ
ನೆಲದ ಕನ್ನಡಿಯಲ್ಲಿ ನಾಳೆಗಳ ನೋಡುವೆ
ಕಾಲದಾಚೆಯ ಕತ್ತಲಲ್ಲಿ ಇತಿಹಾಸವ ಬಗೆಯುವೆ"

ಎಂದು ಶೋಷಿತರ ಪರಂಪರೆಯ "ನೆಲದ ಜೋಗುಳ" ಹಾಡಿದ ಏಕಾಂಗಿ ಏಕಲವ್ಯ ಮುಳ್ಳೂರು ನಾಗರಾಜ. ಬದುಕು, ಬವಣೆಯ ಹೊತ್ತು ಬಯಲ ಬೆಳದಿಂಗಳ ಬಯಸಿದ ಕವಿ, ಬಡತನ, ಹಸಿವು, ನೋವು, ಯಾತನೆ, ಅಪಮಾನ, ಸಂಕಷ್ಟಗಳ ನಡುವೆಯೂ 'ಸ್ವಾಭಿಮಾನ'ವನ್ನು ಬಿಟ್ಟುಕೊಡದೆ, ವ್ಯವಸ್ಥೆಯೊಟ್ಟಿಗೆ ಎಂದೂ ರಾಜಿಯಾಗದೆ, ಸೃಜನಶೀಲತೆಯ ಮೂಲಕ ಬದುಕಿನ ಕಾವ್ಯಕ್ಕಾಗಿ ಹಪಹಪಿಸಿದರು. ಬದುಕಿನೆಲ್ಲಾ ಸಂವೇದನೆಗಳನ್ನು ಹೋರಾಟದ ಮೂಲಕ ಕಂಡುಕೊಂಡ ಮುಳ್ಳೂರರು ಬದುಕು, ಹೋರಾಟ ಹಾಗೂ ಸಾಹಿತ್ಯಕ್ಕೂ ಕರುಳಬಳ್ಳಿಯ ಸಂಬಂಧವಿದೆ ಎಂಬುದನ್ನು ಸಾಬೀತುಪಡಿಸಿದವರು. ಅನ್ಯಾಯಗಳ ವಿರುದ್ಧ ಪ್ರತಿಭಟನೆಗಳನ್ನು ದಾಖಲಿಸುತ್ತಾ, ಸಾಮಾಜಿಕ ಬದುಕಿಗೆ ತೆರೆದುಕೊಂಡು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳತೊಡಗಿದ ಮುಳ್ಳೂರು ನಾಗರಾಜರವರು ಕ್ರಮೇಣ ಸೃಜನಶೀಲ ಸಾಹಿತ್ಯ ಕ್ಷೇತ್ರಕ್ಕೂ ಪ್ರವೇಶಿಸುವುದರೊಂದಿಗೆ ಅದನ್ನು ಇನ್ನಷ್ಟು ವಿಸ್ತರಿಸಿಕೊಂಡರು.

ಸಣ್ಣ ಕಥೆ, ಕಾದಂಬರಿ, ಕಾವ್ಯ ಈ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡುತ್ತಾ ಹೋರಾಟ ಮತ್ತು ಸೃಜನಶೀಲತೆಯನ್ನು ಜೊತೆ ಜೊತೆಯಾಗಿ ಕೊಂಡೊಯ್ದ ಮುಳ್ಳೂರರು ಒಬ್ಬ ಅಪ್ಪಟ ಮಾನವತಾವಾದಿಯಾಗಿದ್ದರು. ಯಾವುದೇ ಒಬ್ಬ ಲೇಖಕ ಸಮಾಜವನ್ನು ಹೊರತುಪಡಿಸಿ, ತನ್ನಷ್ಟಕ್ಕೆ ತಾನೆ ಸೃಜನಶೀಲ ಕ್ರಿಯೆಯಲ್ಲಿ ತೊಡಗಿಸಿ ಕೊಳ್ಳಲಾರ ಮತ್ತು ಹಾಗೆ ಜನದೂರವಾದ ಮನಸ್ಥಿತಿಯ ಲೇಖಕನ ಆಶೋತ್ತರಗಳು ಎಂದೂ ಮಾನವಮುಖಿಯಾಗಲಾರವು. ಈ ಸಂದರ್ಭದಲ್ಲಿ "ರಷ್ಯನ್ ಲೇಖಕ ಝಡ್ ಅಪರೇಷನ್ ಹೇಳುವ ಹಾಗೆ "There is no such thing as artistic creativity isolated from the social environment is which the artist live and works".

"ಕಲೆಗಾರನಾದವನು ಬದುಕಿ, ಕೆಲಸ ಮಾಡುವ ಸಾಮಾಜಿಕ ವಾತಾವರಣದಿಂದ ಬೇರೆಯಾದ ಕಲಾಸೃಷ್ಟಿ ಎಂಬುದು ಯಾವುದೂ ಇಲ್ಲ"[೧]

---

೧. Freedom land the artist, Page. No. 15.

ಮುಳ್ಳೂರು ಕಥೆ, ಕಾದಂಬರಿ, ಕವನಗಳನ್ನು ನಾವು ವಿವಿಧ ಮಜಲುಗಳಲ್ಲಿ ಕಾಣಬಹುದು. ಅವರ ಮೊದಲ ಕಾದಂಬರಿ 'ಮರಣ ಮಂಡಲ ಮಧ್ಯದೊಳಗೆ' ಮುಳ್ಳೂರರ ಹೋರಾಟದ ಹಿನ್ನೆಲೆಯಿಂದ ರಚಿತವಾದುದು ಎಂಬುದಿಲ್ಲಿ ಗುರುತಿಸಬೇಕಾದ ಸಂಗತಿ. "ದಂಡಕಾರಣ್ಯ" ಕೃತಿ ಅದೊಂದು ಅಪ್ಪಟ ಜನಪದ ಕೃತಿಯ ಮಾದರಿಯಲ್ಲೇ ಸಾಗುತ್ತದೆ. ಇವರ ಗದ್ಯಕೃತಿಗಳಲ್ಲಿ ನಂಜನಗೂಡಿನ ಪರಿಸರದ ಆಡುಭಾಷೆಯು ತನ್ನ ಸೊಗಸು-ಸೊಗಡು ಗಳಿಂದ ಮೈ ತುಂಬಿಕೊಂಡಿರುವುದನ್ನು ನಾವು ಕಡೆಗಣಿಸಲಾಗದು. ಆಡುಮಾತಿನ ಮೂಲಕವೇ ಜಾನಪದೀಯ ಬದುಕನ್ನು ಕಟ್ಟಿಕೊಡುವ ಪ್ರಯತ್ನ ನಿಚ್ಚಳವಾಗಿ ಕಾಣುತ್ತದೆ.

ಮುಳ್ಳೂರು ನಾಗರಾಜರು ಕ್ರಿ.ಶ. ೧೯.೦೩.೧೯೫೩ ರಂದು ನಂಜನಗೂಡು ತಾಲ್ಲೂಕು ಮುಳ್ಳೂರು ಗ್ರಾಮದಲ್ಲಿ ಜನಿಸಿದರು. ತಂದೆ ಎಂ.ಎಚ್.ಗಂಗಾಧರಯ್ಯ, ತಾಯಿ ಪುಟ್ಟನಂಜಮ್ಮ. ಇವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಅಜ್ಜಿಯ ಊರಲ್ಲಿ ಮುಗಿಸಿದರು. ನಂತರ ಪ್ರೌಢಶಾಲೆ ವಿದ್ಯಾಭ್ಯಾಸವನ್ನು ನಂಜನಗೂಡಿನಲ್ಲಿ ಮುಗಿಸಿದರು. ಇವರು ಹಾಸ್ಟೆಲ್‌ನಲ್ಲಿ ನಡೆಯುತ್ತಿದ್ದ ದೌರ್ಜನ್ಯಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರನ್ನು ಸಲ್ಲಿಸಿದ್ದರು. ಆಗಲೇ ಚಿಕ್ಕ ಹುಡುಗನ ಧೈರ್ಯವನ್ನು ಮೆಚ್ಚಿ ಶಿಕ್ಷಕರು ಇವರನ್ನು ಪ್ರಶಂಸಿದ್ದರು.

ಮೈಸೂರು ವಿಶ್ವವಿದ್ಯಾಲಯದಲ್ಲಿ ಬಿ.ಎ. ಪದವಿಯನ್ನು ೧೯೭೫ರಲ್ಲಿ ಮುಗಿಸಿದರು. ಇದರ ಜೊತೆಯಲ್ಲಿ ಭಾರತೀಯ ತತ್ವಶಾಸ್ತ್ರದಲ್ಲಿ ಡಿಪ್ಲೊಮೋ ಪದವಿಯನ್ನು ಪಡೆದುಕೊಂಡಿದ್ದರು. ಅವರು ತಮ್ಮ ಉನ್ನತ ವ್ಯಾಸಂಗ ಮತ್ತು ಚಳುವಳಿಯ ಆಯ್ಕೆ ವಿಷಯ ಬಂದಾಗ ಎರಡು ಮಾತಿಲ್ಲದೆ 'ಚಳುವಳಿ'ಯನ್ನು ಆಯ್ದುಕೊಂಡವರು. ತಮ್ಮ ವೈಯುಕ್ತಿಕ ಬದುಕಿಗಿಂತ ದಲಿತರ, ಶೋಷಿತರ, ಅಸಹಾಯಕರ ಪರವಾದ ಹೋರಾಟ ಮುಖ್ಯವೆಂದು ನಂಬಿದ್ದ ಮುಳ್ಳೂರರು ಆ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ನಡೆದುಕೊಂಡವರು. ವೈಯುಕ್ತಿಕ ಬದುಕನ್ನು ಬಲಿಕೊಟ್ಟು, ತಮ್ಮ ಇಡೀ ವ್ಯಕ್ತಿತ್ವವನ್ನು ದಲಿತ ಚಳುವಳಿಗಾಗಿ ಅರ್ಪಿಸಿಕೊಂಡರು.

ಮುಳ್ಳೂರರು ೧೯೮೭ರಲ್ಲಿ ಪ್ರೇಮಲತಾರನ್ನು ಸರಳವಾಗಿ ಎಲ್ಲರಿಗೂ ಟೀ, ಬಿಸ್ಕೆಟ್ ಕೊಡುವುದರ ಮೂಲಕ ವಿವಾಹ ಮಾಡಿಕೊಂಡು, ಯುವಕರಿಗೆ ಮಾದರಿಯಾದರು. ಇವರಿಗೆ ಒಂದು ಗಂಡು ಮತ್ತು ಹೆಣ್ಣು ಮಗು ಇದ್ದಾರೆ.

ಕರ್ನಾಟಕದಲ್ಲಿ ದಲಿತ ಚಳುವಳಿಯನ್ನು ಕಟ್ಟಿದ ಪ್ರಮುಖರಲ್ಲಿ ಮುಳ್ಳೂರು ಒಬ್ಬರು. ಬಿ.ಕೃಷ್ಣಪ್ಪ, ದೇವಯ್ಯ ಹರವೆ, ಚಂದ್ರಪ್ರಸಾದ್ ತ್ಯಾಗಿ, ದೇವನೂರ ಮಹಾದೇವ, ಸಿದ್ದಲಿಂಗಯ್ಯ, ಎನ್.ವೆಂಕಟೇಶ್ ಮುಂತಾದವರೊಟ್ಟಿಗೆ ಹೆಗಲೆಣೆಯಾಗಿ ನಿಂತು ಹಲವು ಹೋರಾಟಗಳನ್ನು ರೂಪಿಸಿದರು.

- ಹಾಸನ ಜಿಲ್ಲೆಯ ಬುಳ್ಳುಪೇಟೆ ಕಾಫಿ ತೋಟದ ಕೂಲಿ ಕಾರ್ಮಿಕರ ಪರವಾದ ಹೋರಾಟ ಅದಕ್ಕೊಂದು ಸಾಕ್ಷಿ.
- ೧೯೮೦ರ ದಶಕದಲ್ಲಿ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನದ ಹೆಚ್ಚಳಕ್ಕೆ ಸಂಬಂಧಿಸಿದ ಚಳುವಳಿ ಕಟ್ಟಿದ ಮುಳ್ಳೂರರು ಸರ್ಕಾರದಿಂದ ೧೦೦ ಕೋಟಿ ರೂ. ಅನುದಾನ ಬಿಡುಗಡೆಯಾಗಲು ಕಾರಣರಾಗಿದ್ದಾರೆ.
- ಕರ್ನಾಟಕದಾದ್ಯಂತ 'ದಲಿತ ಸಂಘರ್ಷ ಸಮಿತಿ' ರೂಪಿಸಿದ ಹಲವು ಭೂ ಹೋರಾಟ, ದಲಿತರ ಮೇಲಿನ ಹಲ್ಲೆ, ಹತ್ಯೆ, ಅತ್ಯಾಚಾರ ಹಾಗೂ ಅಪಮಾನದ ವಿರುದ್ಧ ಧರಣಿ, ಸತ್ಯಾಗ್ರಹ, ಜಾಥಾಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು.
- ಹಸಿವು-ಬಡತನವನ್ನು ಸಾಯುವ ಕೊನೆಗಾಲದವರೆಗೂ ತಮ್ಮ ಬೆನ್ನಿಗೆ ಕಟ್ಟಿಕೊಂಡು ಕರ್ನಾಟಕದಾದ್ಯಂತ ತಿರುಗಾಡಿದ 'ಜಂಗಮ'.
- ತುರ್ತುಪರಿಸ್ಥಿತಿಯನ್ನು ಜಾರಿಗೊಳಿಸಿದ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯನ್ನು ವಿರೋಧಿಸಿ ಇವರು ಬರೆದ ಕವಿತೆಯು ಇಂಗ್ಲೀಷ್‌ಗೆ ಅನುವಾದಗೊಂಡಿದೆ. ಅಮೇರಿಕದ 'ಜಾನ್ ಆಲಿವರ್ ಪೆರ್ರಿ' ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡ 'ವಾಯ್ಸ್ ಆಫ್ ಎಮರ್ಜೆನ್ಸಿ' ಕೃತಿಯಲ್ಲಿ ದಾಖಲಾಗಿದೆ.
- ೧೯೭೮ರಲ್ಲಿ ನಂಜನಗೂಡು ತಾಲ್ಲೂಕು ದಲಿತ ಸಂಘರ್ಷ ಸಮಿತಿ ಸಂಚಾಲಕರಾಗಿಯೂ, ೧೯೮೨ರಲ್ಲಿ ಮೈಸೂರು ಜಿಲ್ಲಾ ದಲಿತ ಸಂಘರ್ಷ ಸಮಿತಿ ಸಂಚಾಲಕರಾಗಿಯೂ ನೇಮಕಗೊಂಡು ಅನೇಕ ಹೋರಾಟಗಳನ್ನು ರೂಪಿಸಿದ್ದಾರೆ.
- ಮುಳ್ಳೂರರ ನಾಯಕತ್ವದಲ್ಲಿ ೧೯೭೯ರಲ್ಲಿ ಸುಮಾರು ೧೦ ತಿಂಗಳ ಕಾಲ ತಗಡೂರು ದಲಿತರ ನಿವೇಶನಕ್ಕಾಗಿ ನಡೆದ ಹೋರಾಟ. 'ತಗಡೂರು ಭೂ ಹೋರಾಟ' ಎಂದೇ ಚರಿತ್ರೆಯಲ್ಲಿ ದಾಖಲಾಗಿದೆ. ವಾಸ್ತವವಾಗಿ ತಗಡೂರು ಭೂ ಹೋರಾಟ' ಈ ಹೋರಾಟ ಮುಳ್ಳೂರು ಹುಟ್ಟಿರುವುದಕ್ಕಿಂತ ಮುಂಚೆಯೇ ಪ್ರಾರಂಭವಾಗಿದೆ. ತಗಡೂರಿನ ದಲಿತರು ೧೯೪೦ರಲ್ಲಿ ದಲಿತರಿಗೆ ಮನೆಯಿಲ್ಲ, ಮನೆಗಳನ್ನು ಕೊಡಿಸಿ ಎಂದು ಮೈಸೂರು ಸಂಸ್ಥಾನಕ್ಕೆ ಅರ್ಜಿ ಕೊಡುತ್ತಾರೆ. ಆದರೆ, ಇಲ್ಲಿ ಯಾವ ಸ್ಪಂದನ ದೊರೆಯುವುದಿಲ್ಲ. ಸುಮಾರು ವರ್ಷಗಳು ಕಾಡಿ ಬೇಡಿದರೂ ಮೈಸೂರು ಸಂಸ್ಥಾನದಿಂದ ಯಾವುದೇ ಪ್ರಯೋಜನವಾಗುವುದಿಲ್ಲ.

- ೧೯೭೦ರಲ್ಲಿ ರಾಚಯ್ಯನವರನ್ನು ಮುಳ್ಳೂರು ನಾಗರಾಜರವರ ನಾಯಕತ್ವದಲ್ಲಿ ಕೇಳಿಕೊಂಡಾಗ ಅವರು ತಗಡೂರಿನ 'ಕಂಬದ ಮೊಳ' ಕಡೆ ೧೦ ಎಕರೆ ಭೂಮಿ ಕೊಡಿಸುತ್ತಾರೆ. ಆದರೆ, ಅಲ್ಲಿಗೆ ಯಾರೂ ಹೋಗುವುದಿಲ್ಲ, ಕಾರಣ ವಾಸ ಮಾಡಲು ಯೋಗ್ಯವಾಗಿರಲಿಲ್ಲ.

  ಇದೆಲ್ಲದರ ನಂತರ ತಗಡೂರಿನ 'ದಲಿತ ಸಂಘರ್ಷ ಸಮಿತಿ' ೧೯೭೮ರಲ್ಲಿ ಪೌರಾಡಳಿತ ಸಚಿವರಾಗಿದ್ದ ಬಿ.ಬಸವಲಿಂಗಪ್ಪನವರಿಗೆ ತಗಡೂರಿನವರು ಅರ್ಜಿ ಸಲ್ಲಿಸುತ್ತಾರೆ. ಈ ಪ್ರಕರಣವನ್ನು ಕೈಗೆತ್ತಿಕೊಂಡು ಕ್ರಮ ಕೈಗೊಳ್ಳಲು ಮುಂದಾಗುತ್ತಾರೆ. ಆದರೆ, ಬೂಸಾ ಪ್ರಕರಣದಿಂದಾಗಿ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟ ಕಾರಣಕ್ಕಾಗಿ ಆ ಕೇಸ್ ಅಲ್ಲಿಗೆ ನಿಲ್ಲುತ್ತದೆ.

  ೧೯೭೯ ಅಕ್ಟೋಬರ್ ೧೫-೧೬ರಲ್ಲಿ ತಗಡೂರಿನವರು ದೇವನೂರ ಮಹಾದೇವರ ಬಳಿಗೆ ಈ ವಿಚಾರವನ್ನು ಹೇಳುತ್ತಾರೆ. ಈ ಸಂಬಂಧವಾಗಿ ದೇವನೂರು ಮಹಾದೇವ ರವರು, ಮುಳ್ಳೂರು ನಾಗರಾಜರಿಗೆ ಪತ್ರ ಬರೆದು ಮೈಸೂರಿಗೆ ಕರೆಸಿಕೊಂಡು ದಲಿತ ಸಂಘರ್ಷ ಸಮಿತಿ ಹೆಸರಲ್ಲಿ ಕರಪತ್ರ ಅಚ್ಚು ಹಾಕಿಸಿ, ಜನರನ್ನು ಸಂಘಟಿಸಲು ಮುಳ್ಳೂರರಿಗೆ ಹುರಿದುಂಬಿಸುತ್ತಾರೆ.

  ಈ ಕಾರ್ಯಾಚರಣೆ ೧೯೭೯ರ ಅಕ್ಟೋಬರ್ ೧೭ರಂದು ದೇವನೂರ ಮಹಾದೇವರು ಮತ್ತು ಮುಳ್ಳೂರು ನಾಗರಾಜ ನೇತೃತ್ವದಲ್ಲಿ ಜನರನ್ನು ಸಂಘಟಿಸಿ ನಂಜನಗೂಡಿನ ದೇವಸ್ಥಾನದಿಂದ ಮೆರವಣಿಗೆ ಹೊರಡಿಸಿದರು.

  ಸೋಸಲೆ ಸಿದ್ದಪ್ಪನವರು ನಮ್ಮ ದರ್ಶನ ಭಾಗ್ಯ ನಂಜುಂಡನಿಗೂ ಇಲ್ಲ ಎಂದು ಹೇಳುತ್ತಾರೆ. ಹುಲ್ಲಹಳ್ಳಿ ಸರ್ಕಲ್ ಮೂಲಕ ಎ.ಸಿ.ಆಫೀಸ್‌ಗೆ ಬರುತ್ತಾರೆ. ಆಗಿನ ಎ.ಸಿ. ನಜೀರ್ ಸಾಬ್ ಸಾದಿಕ್, ಬಿ.ಡಿ.ಓ. ನೊ.ನ.ರಂಗಪ್ಪ, ತಹಸೀಲ್ದಾರ್ ಸಂಗಯ್ಯರಾಗಿದ್ದರು.

- ಈ ಮೆರವಣಿಗೆ ತಗಡೂರು, ಅಳಗಂಜಿ, ಕುಂಬರಹಳ್ಳಿ, ನೇರಳೆ, ಕಾಮಳ್ಳಿ, ಚಿನ್ನಂಬಳ್ಳಿ, ಕವಲಂದೆ, ಕಲ್ಮಳ್ಳಿ, ಸೂಳ್ಯ ಮುಂತಾದ ಗ್ರಾಮಗಳಿಂದ ೧,೦೦೦ ಕ್ಕಿಂತ ಹೆಚ್ಚಿನ ಜನ ದಲಿತರು ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

- ತಗಡೂರಿನ ದಲಿತರು ತಗಡೂರಿನಿಂದ ನಂಜನಗೂಡಿಗೆ ಕಾಲುನಡಿಗೆಯಲ್ಲೇ ಬರುತ್ತಾರೆ. ಇವರೊಂದಿಗೆ ತಗಡೂರಿನ ಯಜಮಾನರು ಕರಿಸಿದ್ದಯ್ಯ, ಬಿ.ಎಸ್.ಸಿದ್ದಲಿಂಗಯ್ಯ (ಮೇಷ್ಟ್ರು) ಹೊಟ್ಟೆ ಶಿವಯ್ಯ (ಮೇಷ್ಟ್ರು) ಮುದ್ದುಮಾದಯ್ಯ, ನಾರಾಯಣ ಮುಂತಾದವರೂ ಸಹ ಭಾಗವಹಿಸಿದ್ದರು.

- ಇವರ ಜೊತೆ ತಗಡೂರಿನ ಭೂ ಹೋರಾಟಕ್ಕೆ ಬಿ.ಕೃಷ್ಣಪ್ಪ, ದೇವಯ್ಯ ಹರವೆ, ಎಚ್. ಗೋವಿಂದಯ್ಯ, ಹರಿಹರ ಆನಂದಸ್ವಾಮಿ, ಕೋಲಾರದ ಎನ್.ವೆಂಕಟೇಶ್, ಆರ್.ಎಸ್.ದೊಡ್ಡಣ್ಣ, ಹೆಗ್ಗೋಡಿ ನಿಂಗರಾಜು, ದೇವನೂರ ಕೃಷ್ಣ ಮುಂತಾದವರು ಈ ಹೋರಾಟಕ್ಕೆ ಬೆಂಬಲ ನೀಡಿದರು. ಇದು ಶ್ಲಾಘನೀಯ ವಿಚಾರ ಎನ್ನಬಹುದು.

  ಇಷ್ಟಾದರೂ ತಗಡೂರಿನ ಜನಕ್ಕೆ ನ್ಯಾಯ ಸಿಗಲಿಲ್ಲ. ಮುಂದಿನ ಹೆಜ್ಜೆಯಾಗಿ ಅವರು ನಂಜನಗೂಡಿನ ಪುರಸಭೆ ಗಾಂಧಿ ಪ್ರತಿಮೆ ಎದುರು ಧರಣಿ ಕುಳಿತರು. ಇದರಲ್ಲಿ ಹಲವಾರು ಜನರು ಭಾಗವಹಿಸಿದ್ದರು.

  'ಯಾವ ಕಾರಣಕ್ಕೂ ನ್ಯಾಯ ಸಿಗುವವರೆಗೆ ಹೋರಾಟ ನಿಲ್ಲಿಸಬೇಡಿ' ಎಂದು ಬಿ.ಕೃಷ್ಣಪ್ಪ ಹೇಳಿದರು. ಈ ಹೋರಾಟ ನಂಜನಗೂಡಿನ ದಲಿತ ಸಂಘರ್ಷ ಸಮಿತಿಯ ಮೊದಲ ಹೋರಾಟವಾಗಿದೆ. ಇದೆಲ್ಲದರ ನಡುವೆ ನಂಜನಗೂಡಿನ ಅಶೋಕಪುರಂ ಮಾದಿಗ ಬಾಂಧವರು ತಮ್ಮ ಮನೆಯ ಮುಂದಿನ ತೆಂಗಿನ ಮರದಿಂದ ಎರಡೆರಡು ಗರಿ ತಂದು ಚಪ್ಪರ ಹಾಕಿದರು. ಆ ಚಪ್ಪರದ ಕೆಳಗೆ ಧರಣಿ ಪ್ರಾರಂಭವಾಯಿತು. ಇವತ್ತಿನ ಎಡ-ಬಲ ಸಮಸ್ಯೆ ಅಂದು ಅಷ್ಟಾಗಿ ಕಾಣಿಸಿರಲಿಲ್ಲ. ಮೇಲ್ಜಾತಿಯವರು ತಮ್ಮ ಉಪಯೋಗಕ್ಕಾಗಿ ಒಡೆದು ಆಳುವ ನೀತಿಯನ್ನು ಅನುಸರಿಸಿದರು.

ಆ ಕಾಲದಲ್ಲಿ ದೇವರಾಜ ಅರಸರು ಮುಖ್ಯಮಂತ್ರಿಯಾಗಿದ್ದರು. ಪಿ.ವೆಂಕಟರಮಣ (ದಲಿತ) ಸ್ಪೀಕರ್‌ರಾಗಿ ಕೆಲಸ ನಿರ್ವಹಿಸಿದರು. ಈ ಧರಣಿಯಲ್ಲಿ ಎಲ್ಲಾ ಕಾರ್ಯಕರ್ತರು ೨-೩ ದಿನ ಉಪವಾಸ ಮಾಡಿದರು. ಇಲ್ಲಿ ಇನ್ನೊಂದು ಘಟನೆಯನ್ನು ನಾವು ಗಮನಿಸಲೇಬೇಕು. ಸ್ವಂತಂತ್ರ ಹೋರಾಟದ ಸಂದರ್ಭದಲ್ಲಿ ತಗಡೂರಿನ ದಲಿತರು ಪಂಚೆ ತೊಡುವ ಹಾಗಿಲ್ಲ, ಹೆಗಲು ಮತ್ತು ತಲೆ ಮೇಲೆ ಟವೆಲ್ ಹಾಕೋ ಹಾಗಿರಲಿಲ್ಲ ಎಂದು, ಹಾಕಿದರೆ ಮೇಲ್ಜಾತಿಯವರಿಂದ ಹೊಡೆತ ಬೀಳುತ್ತದೆ, ಎಂತಹ ಹೀನಾಯ ಸ್ಥಿತಿ, ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಈ ರೀತಿ ಎಲ್ಲಾ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಧರಣಿ ನಡೆಸಿದರು. ಈ ಧರಣಿಯಿಂದ ಅಲ್ಪಸ್ವಲ್ಪವಾದರೂ ಪರಿಹಾರ ದೊರಕಿತೆನ್ನಬಹುದು.

ಇದಾದ ನಂತರ ಬಿಜಾಪುರದಲ್ಲಿ ನಡೆದ 'ಅಖಿಲ ಕರ್ನಾಟಕ ಪ್ರಥಮ ದಲಿತ ಸಾಹಿತ್ಯ' ಸಮ್ಮೇಳನದಲ್ಲಿ ಗೌರವ ಪ್ರಶಸ್ತಿ ಸ್ವೀಕರಿಸಿ ಹೇಳಿದ ಮಾತು ಇಂತಿದೆ.

"ಪ್ರಪಂಚದಲ್ಲಿ ನಿಜವಾದ ಅಸ್ಪೃಶ್ಯ 'ಸೂರ್ಯ' ಅವನನ್ನು ಮುಟ್ಟಿದರೆ ಎಲ್ಲರೂ ಸುಟ್ಟು ಹೋಗುತ್ತಾರೆ. ಅದೇ ತರಹ ನಾವೆಲ್ಲಾ ದಲಿತ ಸೂರ್ಯರು" ಎಂದರು.

ಇವರ ಜೀವನಘಟ್ಟದಲ್ಲಿ ನಡೆದ ಮತ್ತೊಂದು ಪ್ರಮುಖ ಘಟನೆ. ೧೯೬೩ರಲ್ಲಿ ನಡೆದ ಬದನವಾಳು ದುರಂತ. ಮೇಲ್ಜಾತಿ-ಕೀಳುಜಾತಿಯವರ ನಡುವೆ ಉಂಟಾದ ಭಾರೀ ಕೋಲಾಹಲ. ಮೇಲ್ಜಾತಿಯವರು ೩ ಜನ ದಲಿತರ ಕಗ್ಗೊಲೆ ಮಾಡಿದರು. ಇದರ ವಿರುದ್ಧ ಹೋರಾಟದಲ್ಲಿ ಮುಳ್ಳೂರು ಪ್ರಮುಖ ಪಾತ್ರ ವಹಿಸಿದ್ದರು. ಈ ಹೋರಾಟದ ತೀವ್ರಗತಿಯನ್ನು ನೋಡಿ ಮೇಲ್ಜಾತಿಯವರು ಮುಳ್ಳೂರರನ್ನು ಕೊಲೆ ಮಾಡಲು ಸಂಚು ರೂಪಿಸಿದರು. ೧೯೬೪ರಲ್ಲಿ ಪ್ರಕಟವಾದ ಮುಳ್ಳೂರರ 'ಬದನವಾಳು ದುರಂತ' ಈ ಕೃತಿ ಇಡೀ ದುರಂತವನ್ನು ಕಟ್ಟಿಕೊಡುತ್ತದೆ.

ಕೃತಿಯ ಮುಖಪುಟದಲ್ಲಿ "ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿ ರಸ್ತವಿದೆಕೋ, ಚಂಡವ್ಯಾಘ್ರನೆ ನೀನಿದೆಲ್ಲವನುಂಡು ಸಂತಸದಿಂದಿರು" ಈ ಮುಖಪುಟವೇ ಈ ಕೃತಿಯನ್ನು ಆಕರ್ಷಿಸುತ್ತದೆ. ಮೊಗಳ್ಳಿ ಗಣೇಶ್‌ರವರು ಗೋವಿನ ಹಾಡನ್ನು ಪುನರ್ ವ್ಯಾಖ್ಯಾನಿಸಿದ ರೀತಿ ಎಂದು ಹೇಳಿದ್ದಾರೆ.

ಮುಳ್ಳೂರು ನಾಗರಾಜರು ದಲಿತ ಚಳುವಳಿಯೊಟ್ಟಿಗೆ ಸಮಾಜವಾದಿ ಯುವಜನ ಸಭಾ ಹಾಗೂ ಜೆ.ಪಿ. ಚಳುವಳಿಗಳಲ್ಲಿ ತೊಡಗಿಸಿಕೊಂಡು, ಒಂದು ದಿನ ಸೆರೆಮನೆ ವಾಸವನ್ನು ಮಾಡಿದ್ದಾರೆ.

ದಲಿತರ ಶತಮಾನದ ಸಂಕಟಗಳಿಗೆ ಕಾವ್ಯಾಭಿವ್ಯಕ್ತಿ ನೀಡಿದ ಮುಳ್ಳೂರರು, ದಲಿತರ ಶೋಷಣೆ ಹಾಗೂ ನೋವಿನ ಪರಂಪರೆಯನ್ನು ಪುರಾಣದ ಶಂಭೋಕ, ಏಕಲವ್ಯರ ಮೂಲಕ ಹುಡುಕ ಹೊರಟರು.

ರಾಮಾಯಣ, ಮಹಾಭಾರತಗಳಲ್ಲಿನ ಪ್ರತಿಮೆ ಪಾತ್ರಗಳನ್ನು ತಮ್ಮ ದಲಿತತ್ವ ಪ್ರಜ್ಞೆಗೆ ಮುಖಾಮುಖಿಯಾಗಿಸಿಕೊಳ್ಳುತ್ತಾ, ಪ್ರಶ್ನಿಸಿ, ಪ್ರತಿಭಟಿಸಿ ಮುರಿದು ಕಟ್ಟುವಲ್ಲಿ ಸದಾ ಹಾತೊರೆಯುವ ಕವಿ. ಮುಳ್ಳೂರರು ಒಟ್ಟು ಸಾಹಿತ್ಯದ ಕೇಂದ್ರ ಬಿಂದು "ದಲಿತತ್ತ್ವ". ಪ್ರಜ್ಞಾವಂತ ಶೋಷಿತನೊಬ್ಬ ದೇಶದ ಚರಿತ್ರೆ, ಪುರಾಣ, ಮಹಾಕಾವ್ಯಗಳನ್ನು ನೋಡುವ ರೀತಿ ಬೇರೆ, ಅದಕ್ಕೆ ಮುಳ್ಳೂರರೇ ಸಾಕ್ಷಿ ಎನ್ನಬಹುದು.

ಮುಳ್ಳೂರರು ಪುರಾಣದ ಓದು, ವಿಮರ್ಶೆ, ವ್ಯಾಖ್ಯಾನ, ವಿಶ್ಲೇಷಣೆಯ ಜೊತೆಗೆ ಬುದ್ಧ, ಅಂಬೇಡ್ಕರ್, ಆಧುನಿಕೋತ್ತರ ಪೌರ್ವಾತ್ಯ, ಪಾಶ್ಚಾತ್ಯ, ದಲಿತ ಮತ್ತು ದಲಿತೇತರರ ಸಾಹಿತ್ಯದ ಜ್ಞಾನ ಶಾಖೆಗಳ ಹೊಸ ಓದಿಗೆ ತೆರೆದುಕೊಂಡಿದ್ದು, ಇದರಿಂದ ಮೌಲಿಕ ಬರಹ ಸಾಧ್ಯವಾಗುತ್ತಿತ್ತು.

ಇಷ್ಟಲ್ಲದೆ, ಮಹಾಕಾವ್ಯ, ವಚನ, ಕಥೆ, ಕಾದಂಬರಿ, ನಾಟಕ, ಕವನ, ಆತ್ಮಕಥೆ ಪ್ರಕಾರದಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ.

ಮುಳ್ಳೂರು ನಾಗರಾಜ ಗ್ರಂಥಗಳ ಪಟ್ಟಿ :

ಮಹಾಕಾವ್ಯ	:	ನೆಲದ ಜೋಗುಳ (೧೯೯೩)
		ಏಕಾಂಗಿ ಏಕಲವ್ಯ (೨೦೦೭)
ಕಾದಂಬರಿಗಳು	:	ಮರಣ ಮಂಡಲ ಮಧ್ಯದೊಳಗೆ (೧೯೮೬)
		ದಂಡಕಾರಣ್ಯ (೨೦೦೦)
ಕವನ ಸಂಕಲನಗಳು	:	ದಾಖಲೆ (೧೯೮೭)
		ಕಾಲು ಶತಮಾನದ ಕವಿತೆಗಳು (೨೦೦೧)
		ನೀರು ನೆರಳಿನ ದಾರಿ (೨೦೦೨)
ಕಥಾ ಸಂಕಲನ	:	ಸಿಂಗಳೀಕ (೨೦೦೦)
ನಾಟಕಗಳು	:	ಕೆಸರರಾಟ
		ಕತ್ತಲೂರು
ವಚನ	:	ಮುಳ್ಳೂರರ ವಚನಗಳು (ಮುದ್ರಣದಲ್ಲಿದೆ)
ಸಂಕೀರ್ಣ	:	ಬದನವಾಳು ದುರಂತ (೧೯೯೩)
		ದಲಿತ ಚಳುವಳಿಯ ಚರಿತ್ರೆ (ಮುದ್ರಣದಲ್ಲಿದೆ)
ಆತ್ಮಕಥೆ	:	ಮಾಮರದ ಮೇಲೊಂದು ಕೋಗಿಲೆ

ವಯಸ್ಕರ ಶಿಕ್ಷಣ ಸಮಿತಿಗೆ ಬರೆದ ಪುಸ್ತಕಗಳು

ಜಾತಿವಿಷ ಮನುಷ್ಯತ್ವ ನಾಶ (೧೯೯೫)

ಸತ್ಯ ತಿಳಿದಾಗ ಜಾತಿ ಕಳಚಿತು (೧೯೯೩)

ದೇವರು ದೆವ್ವ-ಮಾನವ ಸೃಷ್ಟಿ (೧೯೯೫)

ನೀರಿನ ಹಕ್ಕು ಯಾರದು? (೧೯೯೫)

ಕಾನೂನು ಇರುವುದು ನಮ್ಮೆಲ್ಲರ ರಕ್ಷಣೆಗಾಗಿ (೧೯೯೯)

ರಾಹುಕಾಲ, ಯಮಗಂಡಕಾಲ (೨೦೦೧)

ಸಿಡಿ (೧೯೮೯)

'ಪಂಚಮರು', 'ಮುಳ್ಳೂರು' – ಪತ್ರಿಕೆಗಳ ಸಂಪಾದಕರಾಗಿ 'ಭುವನ ಸಂಗಾತಿ' ಪತ್ರಿಕೆ ವರದಿಗಾರರಾಗಿ ಕೆಲಸ ಮಾಡಿದ್ದಾರೆ. ೧೯೯೪ರಲ್ಲಿ ಮುಳ್ಳೂರು ಪತ್ರಿಕೆಯನ್ನು ಪ್ರಾರಂಭಿಸಿದರು.

ಮುಳ್ಳೂರರಿಗೆ ಸಂದಿರುವ ಪ್ರಶಸ್ತಿಗಳು

- ಡಾಃ ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ (೨೦೦೭)
- ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ (೨೦೦೮)
- ಅಖಿಲ ಕರ್ನಾಟಕ ದಲಿತ ಸಾಹಿತ್ಯ ಪರಿಷತ್ ಗೌರವ ಪ್ರಶಸ್ತಿ (೨೦೦೯)

ಮುಳ್ಳೂರು ಅವರ ಹುಟ್ಟೂರು ಹೌದು, ಅವರ ಬದುಕಿನ ಅನ್ವರ್ಥವೂ ಹೌದು.

ಇಂತಹ ಮೇರು ಪ್ರತಿಭೆ ಏಪ್ರಿಲ್ ೧೧, ೨೦೦೯ ರಂದು ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ಮರಣ ಹೊಂದಿತು.

ಹಾಗೇ ನೋಡಿದರೆ, ಅದು ಸಾಯುವ ವಯಸ್ಸಲ್ಲ. ಇನ್ನೂ ಹತ್ತಾರು ವರ್ಷ ಅವರು ಬದುಕಿರಬಹುದಾಗಿತ್ತು. ಆದರೆ, ತಮ್ಮ ಜೀವಿತದ ಬಹುಪಾಲು ಸಮಯವನ್ನು ಚಳುವಳಿ ಹೋರಾಟ, ಜನಜಾಗೃತಿ, ಧರಣೀ, ಬರವಣಿಗೆಗೆ ಮೀಸಲಿರಿಸಿ, ಆರೋಗ್ಯವನ್ನೂ ನಿರ್ಲ್ಯಕ್ಷಿಸಿದರು. ಇದರಿಂದಾಗಿ ಅವರ ಆರೋಗ್ಯ ಸುಧಾರಣೆಯಾಗದೆ ಕಾಲವಶವಾಗುವುದು ಅನಿವಾರ್ಯವಾಯಿತು. ಇದೊಂದು ದುರಂತ. ಸಮುದಾಯದ ಏಳಿಗೆಗೆ ತಮ್ಮ ಇಡೀ ಬದುಕನ್ನು ಮುಡಿಪಾಗಿರಿಸಿದ ಮುಳ್ಳುರವರು, ಆರೋಗ್ಯವನ್ನು ಕಾಪಾಡಿಕೊಂಡು ಬಂದಿದ್ದರೆ, ಈ ಸಮುದಾಯಕ್ಕೆ ಕೊನೆಪಕ್ಷ ಅವರ ಸೃಜನಶೀಲತೆಯ ನೆಲೆಯಿಂದಾದಲಾದರೂ, ಗಮನಾರ್ಹ ಕೊಡುಗೆ ಸಂದಾಯವಾಗುತ್ತಿತ್ತು. ಅದೇನೆ ಇರಲಿ ಮುಳ್ಳೂರರ ಬದುಕು ಮತ್ತು ಬರಹ ಬೇರೆ ಬೇರೆ ಮಾಧ್ಯಮಗಳಲ್ಲಿ, ಭಾಷೆಗಳಲ್ಲಿ ಪ್ರಕಟವಾಗಬೇಕು. ಅವರ ಕೃತಿಗಳ ಬಗೆಗೆ ಗಂಭೀರವಾದ ಚರ್ಚೆ ನಡೆಸಬೇಕು. ಹೀಗಾದಾಗ ಮಾತ್ರವೇ ಸಮುದಾಯ ಮತ್ತು ನಾಡು ಅವರಿಗೆ ನೈಜವಾದ ಗೌರವ ತೋರಿಸಿದಂತೆ ಆಗುತ್ತದೆ.

ಬದುಕು-ಬರೆಹದಲ್ಲಿ ಹೆಚ್ಚೇನು ವ್ಯತ್ಯಾಸವಿರದ, ಮುಳ್ಳೂರರು, ವೈಯಕ್ತಿಕ ಜೀವನಕ್ಕಿಂತ ಸಮಾಜಸೇವೆಯೆ ದೊಡ್ಡದೆಂದು ತಿಳಿದಿದ್ದು, ಎಲ್ಲರಿಗೂ ಗೊತ್ತಿರುವ ಸಂಗತಿ. ಸ್ವಲ್ಪ ಉದಾಸೀನವನ್ನು ಎಲ್ಲ ರೀತಿಯ ವಿಷಯದಲ್ಲೂ ತೋರುತ್ತಿದ್ದು, ಅವರ ಸ್ವಭಾವ ಮುಳ್ಳೂರು ಅವರ ಬಾಲ್ಯವನ್ನು ಅವರ ಅಜ್ಜಿಯ ಊರಿನಲ್ಲಿಯೇ ಕಳೆದರು. ಅಪ್ಪ ವಿದ್ಯಾವಂತರಾದ್ದರಿಂದ ಮಗನನ್ನು ಶಾಲೆಗೆ ಕಳುಹಿಸಿ, ವಿದ್ಯಾಭ್ಯಾಸ ಕೊಡಿಸಿದರು. ಮುಳ್ಳೂರರ ಅಜ್ಜ ಒಂದು ಕಾಲದಲಿ ರೌಡಿಯಾಗಿದ್ದರೂ, ಅವರ ಗುಣ ಮಗನಿಗೆ

ಬಂದಿರಲಿಲ್ಲ. ಮುಳ್ಳೂರಿಗೆ ಅಜ್ಜಿಯ ಮನೆಯೆಂದರೆ ಬಲುಪ್ರೀತಿ. ಹಳೆಕಾಲದ ಅಜ್ಜಿಯ ಮನೆಯಲ್ಲಿ ಎಲ್ಲರೂ ವಾಸವಿದ್ದರೂ, ಕಡುಬತಡನವಿದ್ದರೂ ಮೈಸೂರು ಮಹಾರಾಜರ ಬೋರ್ಡಿಂಗ್ ಸ್ಕೂಲಿಗೆ ಸೇರಿದ ಪ್ರಯುಕ್ತ ಅವರ ತಂದೆ ಹಸಿವಿನಿಂದ ತಪ್ಪಿಸಿಕೊಂಡಿದ್ದರು. ಹೇಗೊ ಓದಿ ಗುಮಾಸ್ತ ಕೆಲಸವನ್ನು ಹಿಡಿದು, ಎಲ್ಲರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಮುಳ್ಳೂರರಿಗೆ ಚಿಕ್ಕಂದಿನಿಂದಲೂ ಅಕ್ಷರಭ್ಯಾಸ ಮಾಡಲು ಇಷ್ಟವಿರಲಿಲ್ಲ. "ಅಕ್ಷರ ವೈರಿಯಾಗಿದ್ದ ನಾನು ಅಕ್ಷರಲೋಕವನ್ನು ಅಪ್ಪಿಕೊಂಡಿದ್ದು, ಅದರೊಡನೆ ಕರಗಿದ್ದು, ವಿಪರ್ಯಾಸದಿಂದ ಕೂಡಿದ ಇತಿಹಾಸದಂತಿದೆ" ಎಂದಿದ್ದಾರೆ.

ಅಜ್ಜಿಯ ಮನೆಯು ಹೇಗಿತ್ತೇಂಬುದನ್ನು ವಿವರಿಸುತ್ತಾ, ಮಣ್ಣಿನ ಗೋಡೆಗಳು ಜೀರ್ಣವಾದ ಮನೆ, ಸಗಣಿಯ ವಾಸನೆ, ಗಬ್ಬೆದ್ದು ನಾರುವ ಪರಿಸರ, ಕೊಳುಕುತನಕ್ಕೆ ಅದಕ್ಕಿಂತಾ ಬೇರೊಂದು ಉದಾಹರಣೆ ಇರದು. ಅಂತಹ ಮನೆ ಎಂದೂ ಪ್ರೀತಿವಾತ್ಸಲ್ಯಗಳು ತುಂಬಿದ್ದ ಪ್ರೀತಿಯ ಗೂಡೆಂದು ಲೇಖಕರು ಹೇಳಿದ್ದಾರೆ. ಸದಾ ಸ್ವಾವಲಂಬಿ ಬದುಕನ್ನು, ಕಲಿಸಲು ಅಜ್ಜಿ ಶತಪ್ರಯತ್ನ ಮಾಡಿದ್ದಳೆಂದು, ಅಜ್ಜಿಯ ಗುಣಗಾನ ಮಾಡಿದ್ದಾರೆ. ಅಮ್ಮನ ಲೋಕನಿಷ್ಠುರ ಪ್ರಖರತೆ, ಅಪ್ಪಮ್ಮರ ಅಮಿತವಾದ ಜೀವನ ಪ್ರೇಮ ನನ್ನೊಳಗೆ ಮೇಳೈಸಿವೆ ಎಂದು ಸ್ವತಃ ಲೇಖಕರೆ ಹೇಳಿಕೊಂಡಿದ್ದಾರೆ. ಲೋಕ ಜೀವನದ ಎಲ್ಲ ಅಲ್ಪತೆಗಲನ್ನು ತೊಡೆದು ಹಾಕಲು ಅಮ್ಮನ ಪ್ರತಿಭಟನೆ ಮತ್ತು ಕನಸುಗಾರಿಕೆ ನನಗೆ ನೆರವಾಗಿವೆ. ಹಾಗೆಯೇ ಅಪ್ಪನ ಸರಳತೆ ಮತ್ತು ಸತ್ಯಪ್ರೇಮಗಳು ನನ್ನನ್ನು ಅತ್ಯಂತ ವಿನಯಪೂರ್ವಕ ಕವಿಯನ್ನಾಗಿ ಮಾಡಿವೆ ಎಂದು ತಂದೆ-ತಾಯಿರ ಗುಣವನ್ನು ಸ್ಮರಿಸಿದ್ದಾರೆ. ಬಾಲ್ಯದಲ್ಲಿ ಆದ ಕೆಲವು ಘಟನೆಗಳನ್ನು ಅವರು ಮರೆಯದೆ ಹೇಳಿದ್ದಾರೆ. ಒಂದು ದಿನ ಸೂಜಿ-ದಾರ ಆಟವಾಡುತ್ತ ಸೂಜಿಯನ್ನು ಹುಲ್ಲಿನ ಮೆದೆಗೆ ಹಾಕಿದ್ದು, ಇದರಿಂದ ಕೋಪಗೊಂಡ ಅವರ ಮಾವ ಮುಳ್ಳೂರು ನಾಗರಾಜರಿಗೆ ಬಾಸುಂಡೆ ಬರುವಂತೆ ಹೊಡೆದಿದ್ದು, ಈ ತಪ್ಪನ್ನು ತಿದ್ದಿಕೊಂಡು, ಮುಂದೆ ತಪ್ಪಾಗದಂತೆ ನಡೆದುಕೊಂಡಿದ್ದು ಮೆಚ್ಚುಗೆಗೆ ಅರ್ಹವಾಗಿದೆ. ಹರಕೆಯ ನೆಪಹೇಳಿ ತಲೆಗೂದಲನ್ನು ಒಪ್ಪಿಸಬೇಕಾದ ಸಂಗತಿಯನ್ನು ಹೇಳಿದ್ದಾರೆ. ಅಜ್ಜಿಯು ಯಾವ ಕೆಲಸವಾದರೂ ಆಗಬೇಕಾದರೆ, ಯಾರೂ ತಲೆಗೂದಲನ್ನು ಕೊಡುವ ಸ್ವಾತಂತ್ರ್ಯ ಹೊಂದಿರುತ್ತಾಳೆಂದು ಹೇಳಿದ್ದಾರೆ. ಇಲ್ಲಿ ದೇವರ ಬಗ್ಗೆ ಅಜ್ಜಿ ಅಪಾರ ಭಕ್ತಿ ಹೊಂದಿದ್ದರೂ, ಯಾರಾದ್ರೂ ದೇವರು ನಿನಗೆ ಸರಿಯಾದ ಸಾಸ್ತಿ ಮಾಡುತ್ತೇನೆಂದಾಗ, ಅಜ್ಜಿ "ಯಾವ ದೇವರು ಅದು? ಕಲ್ದು ನನ್ನದ್ರುಗಾ ನಿಲ್ಲುಸ್ಬುಡು, ಅದರ ಮೊಕ್ಕಾ ಮುಗ್ಗಲ ಧೂಪ ಹಾಕ್ಬುಡ್ತೀನಿ. ಅದ್ಯಾರಿದ್ದರುಡಾ ನನ್ನಷ್ಟೇ ಭಕ್ತಿಯಾಗಿ ಕ್ರಿಯಾವಾಗಿ ಆತ್ಮಶುದ್ಧವಾಗಿ ದೇವರ ಮಾಡವ್ರು. ಕರೀ ಅದೇವರನೀಗೆ" ಎಂದು ಘರ್ಜಿಸಿದಳು. ಈ ಅಜ್ಜಿಯ ಮಾತಿಗೆ ಎಲ್ಲರೂ ಬಿದ್ದೋಡುತ್ತಿದ್ದರು. ಈ ಆರ್ಭಟಕ್ಕೆ ಮುಳ್ಳೂರು ಹೆದರಿದಾಗ, ಆ ಅಜ್ಜಿಯೇ ತಲೆಸವರಿ,

ಮೈಸವರಿ ಸುಮ್ಮನಿರಿಸುತ್ತಿದ್ದಳು. ಅಜ್ಜಿಯ ಸಾಂತ್ವನ ಗ್ರಾಮೀನ ಸೊಗಡಿನ ಭಾಷೆಯಲ್ಲಿ ಸ್ವಾರಸ್ಯಕರವಾಗಿದೆ.

"ಸುಮ್ನಿರು ಪ್ವೊಆಳ್ಬೇಡ
ನನ್ನ ಕಂಡ್ರಾ ಹೆದ್ರುಕಂದಯ ಕಂದಯ್ಯ
ನಾನಿನ್ನ ಸಾಕಕ ವಸಿಕಷ್ಟಪಟ್ಟಿದ್ದೀನ ಪೋ
ನೀ ಹುಟ್ಟುದ ಕಾಲ್ದಲ್ಲಿ ಗ್ಯಾನಿಲ್ಲದೆದ ಬಿದ್ದಿದ್ದಾ
ಆಗಲೀಗ ಕೀರಸೊಪ್ಪಲಿ ನಿನ್ನ ತೊಳದೀನಿ
ಕತ್ತಹಾಲ ಕುಡಿಸೀನಿ ಆನೇಲಜ್ಜಿ ತಿನ್ನಸೀನಿ
ಕಣ್ಣರೆಪ್ಪ ತರೆದಲಿ ನಿನ್ನ ಜೋಪಾನ ಮಾಡೀನಿ
ನೀ ಗ್ಯಾನಿಲ್ದೆ ಬಿದ್ದಿದ್ದಾಗ ನಿಟ್ರಸೋಮ್ಗಳ
ತವು ಅಂತ್ರಾ ಕಟ್ಟಸ್ಗಾಬಂದೀನಿ
ನೀ ಗ್ಯಾನಿಲ್ದೆ ಬಿದ್ದಿದ್ದಾಗ ಬಿಲ್ಲೆರ
ಕೆಂಪಪ್ಪನತವು ಧೂಳತ ತಂದು ಇಕ್ಕೀನಿ
ತೋರ್‍ಸಪ್ಪ ಅದ್ಯಾವ ಮುದ್ಕಿ
ಅದ್ಯಾವ ಮೊಮ್ಮಗನಿಗಾಗಿ
ಇಷ್ಟೊಂದು ಕಷ್ಟವ ಮಾಡಿದ್ದಳು
ನೀನೇ ತೋರ್‍ಸಪ್ಪ ಅದೆಲ್ಲಿದ್ದಳು?"[೧]

ಹೀಗೆ ಅಜ್ಜಿ ಲಯಬದ್ದ, ರಾಗಬದ್ಧವಾಗಿ ಹಾಡುವುದನ್ನು ಕೇಳಿ, ಲೇಖಕರು ಸಮಾಧಾನವಾಗಿ ಬಿಡುತ್ತಿದ್ದರು. ಅನಕ್ಷರಸ್ಥರಾದರೂ ಹಳ್ಳಿಯ ಜನ, ಎಷ್ಟು ಸೊಗಸಾಗಿ ಪದಗಳನ್ನು ಜೋಡಿಸಿರುವುದನ್ನು ನೋಡಿದರೆ, ಆಶ್ಚರ್ಯವಾಗುವುದಂತು ನಿಜ. ಇದನ್ನೆ ಮರೆಯದೇ ಲೇಖಕರು, ಹೇಳಿರುವುದು ಅಚ್ಚರಿ. ಗ್ರಾಮೀಣ ಜನ ಅವರ ಪರಿಸರವೇ ಅಂತಹದು. ಎಲ್ಲರನ್ನು ಆಕರ್ಷಿಸುವಂತಹದ್ದು.

ಉಪಾಯದಿಂದ ಕಳ್ಳರ ಕೈಯ್ಯಲ್ಲಿ ತಪ್ಪಿಸಿಕೊಂಡ ಕಥೆಯನ್ನು, ಹಾಗೆಯೆ ಹೇಳಿದ್ದಾರೆ. ಒಂದು ಬಾರಿ ಅವರ ಮಾವನ ಹೆಗಲಮೇಲೆ ಕುಳಿತು ಯಾವುದು ಊರಿಗೆ ಹೋಗುವ ಸಂದರ್ಭ, ಮಾವನ ಎರಡು ಕಿವಿಗಳಲ್ಲೂ ಫಳಫಳ ಹೊಳೆಯುವ ಎರಡು ಕುಂಡಲಗಳಿದ್ದವು. ಅವನ್ನು ಹಾಗೆಯೇ ಸವರುತ್ತಾ ಮುಂದೆ ಸಾಗುತ್ತಿದ್ದರು. ಅವರ ಮಾವ ಇದ್ಯಾಕ ಕೂಸು, ನನ್ನ ಕಿವಿಯ ಮುಟ್ಟುತ್ತೀಯೆ, ಅಂದಾಗ ಮಾವ ಯಾರಾದ್ರು ಕಳ್ಳರು ನಿನ್ನ ವಾಲೆ ಕಿತ್ತುಕೊಂಡರೆ, ಏನು ಮಾಡಿತ್ತೀಯಾ ಅಂದಾಗ,

---

೧. ಮಾಮರದ ಮೇಲೊಂದು ಕೋಗಿಲೆ, ಪುಟ. ೬–೭.

ಮಾವ ಕಕ್ಕಾಬಿಕ್ಕಿಯಾಗಿ ಏನು ಮಾಡೋದಪ್ಪ, ನನಗೆ ತಿಳಿಯಲೊಲ್ಲದು, ಎಂದಾಗ ಪುಟ್ಟ ಬಾಲಕ ಅದನ್ನು ಬೆಚ್ಚಿ ನನ್ನ ಜೇಬಿನಲ್ಲಿಡು ಎಂದೂ, ಮುಂದೆ ಸಾಗಿದರು ಅಷ್ಟರಲ್ಲಿ ಯಾರೋ ಕಳ್ಳರು ಬಂದು, ಎದುರಿಸಿದಾಗ, ನಮ್ಮತ್ರ ಏನೂ ಎಲ್ಲ ಎಂದು ಹೇಳಿ, ಬಾಲಕ ಅಳತೊಡಗಿದ. ಇದನ್ನು ನೋಡಿ ಕಳ್ಳರು ಹೊರಟು ಹೋದರು. ಲೇಖಕರು ತೋರಿಸಿದ ಸಮಯಪ್ರಜ್ಞೆಯಿಂದ ನನ್ನ ಕರ್ಣಕುಂಡಲ ಉಳಿಯಿತ್ತೆಂದು ಅವರ ಮನೆಯವರೆಲ್ಲರ ಪ್ರೀತಿಗೆ ಪಾತ್ರರಾದರು. ಈ ರೀತಿಯ ಎಷ್ಟು ಸಂಗತಿಗಳನ್ನು ಲೇಖಕರು ಹೇಳಿದ್ದಾರೆ. ತಾತನ ಜೊತೆ ಯಾವುದೋ ಸಾಬರ ಹಬ್ಬಕ್ಕೆ ಹೋದಾಗ ಹೊಟ್ಟೆ ತುಂಬ ಬಿರಿಯಾನಿ ತಿಂದೂ, ಅವರು ಕೂತಿದ್ದ ಜಾಗವನ್ನು ನೆನೆಸಿಕೊಂಡು, ಜಾತಿಯ ಬಗ್ಗೆ ಅಸೂಯೆ ಉಂಟಾದ್ದು ನಿಜ, ಎಂದೂ ಹೇಳಿದ್ದಾರೆ. ಊಟಕ್ಕೋಸ್ಕರ ಜನ ಎಷ್ಟು ಕಷ್ಟಪಡ್ತಾರೆ. ಎನ್ನುವುದನ್ನೂ ಬಾಲ್ಯದಲ್ಲಿ ಅವರು ಗುರುತಿಸಿದ್ದಾರೆ. ಕಡುಬಡತನ, ಒಂದು ಹೊತ್ತಿನ ಊಟಕ್ಕೂ ಗತಿಯಿಲ್ಲದವರು ಯಾವ ರೀತಿ ಕಷ್ಟಪಡುತ್ತಾರೆಂಬುದನ್ನು ಸಹ ಅವರೂ ಹೇಳಿದ್ದಾರೆ.

ಮುಳ್ಳೂರರು ತಮ್ಮ ಕಾದಮಬರಿಗಳಲ್ಲಿ ಇದನ್ನು ವ್ಯಕ್ತಪಡಿಸಿದ್ದಾರೆ. "ಮರಣ ಮಂಡಲ ಮಧ್ಯದೊಳಗೆ" ಕಾದಂಬರಿಯಲ್ಲಿ ಸಂಪೂರ್ಣವಾಗಿ ಹಿಂದುಳಿದವರ ಜಾತಿಗಳ ಮೇಲಾಗುವ ದೌರ್ಜನ್ಯಗಳನ್ನು ಎತ್ತಿಹಿಡಿದರೂ, ಅದಕ್ಕೆ ಸಹಕಾರವಾಗಿ ಸವರ್ಣಿಯರು ಹಿಂದುಳಿದವರಿಗೆ ಸಹಾಯಾಸ್ತ ನೀಡಿದ್ದಾರೆ. ಮಾಳುಗಮ್ಮ ರಾಕಾಸಿ, ಹೊಲಾರ ಸಂಗರ ಒಂದು ರೀತಿ ಪ್ರೀತಿಯಾದರೆ, ತದನಂತರ ಬರುವ ಬಸವರಾಜು ಒಬ್ಬ ಮೇಲ್ಜಾತಿ ಹುಡುಗನಿಂದ ಬದಲಾಗುತ್ತಾನೆ.

ಎಲ್ಲಾ ಕಡೆ ಹಿಂದುಳಿದವರ ಮೇಲೆ ದೌರ್ಜನ್ಯ ನಡೆದರೂ, ಕೆಲ ಮೇಲ್ಜಾತಿಯವರು ಇದನ್ನು ವಿರೋಧಿಸಿದ ರೀತಿ, ಜಾತ್ಯಾತೀತತೆಯನ್ನು ಸಾರುತ್ತದೆ. ಇಲ್ಲಿ ಲೇಖಕರು ಹೆಚ್ಚು ಅಂತರ್ಜಾತಿ ವಿವಾಹದ ಬಗ್ಗೆ ಉಲ್ಲೇಖಿಸಿದ್ದಾರೆ. ಪ್ರಸನ್ನಕುಮಾರ್ ಹೊಲಾರ್, ಸಿವುಣ್ಣ, ಕಪ್ಪಮ್ಮ, ಉಂಬಳ ಶಂಕರ ಕಥೆಗಳು ಇವೆಲ್ಲಕ್ಕೂ ಉದಾಹರಣೆಗಳಾಗಿವೆ. ಹೀಗೆ ಆ ಪೂರ್ವಿಕರ ಪೂರ್ವಕಾಲದಿಂದಲೂ ನಡೆದು ಬಂದಿರುವ ಈ ಜೀವನಕ್ರಮದಲ್ಲಿ ಜಾತ್ರಾ ಹಿಂದಲ ಆ ಪುರಾತನ ಕತಾವು ಈ ನೆಲದ ಬದುಕಿನ ಜೊತೆಲಿ ಕರುಳಬಳ್ಳಿ ಸಂಬಂಧ್ಗಳನ್ನು ಇರಿಸಿಕೊಂಡಿದೆ. ಆ ಪುರಾತನ ಕತೆಗಳು ಈ ಪೂರ್ವಿಕರ ತಲೆಯಲಿ ಹುಟ್ಟಿ, ಆ ನೆಲುಕು ನಲವಾಗಿರುತ, ಆಕಾಸದಗಲಕೂ ತುಂಬಿಹಬ್ಬುತ, ಆದಿಮಾನವರಂತಿದ್ದ ಈ ಊರು ಆಧುನಿಕರ ಬಾಯಲ್ಲಿ ಹಾಗೇಯೆ ಉಳದೂ, ಜನರು ಹೇಳುತ್ತಾ, ಹಳೆಯದಾಗ ಕಾಲಾನುಕಾಲಕ್ಕೆ ಥರಾವರಯಾಗಿ ಆಕಾರ ಪಡೆದಿದೆ. ಪ್ರಾಚೀನ ಕಾಲದಿಂದ ಮಾನವ ಹಂತ-

ಹಂತವಾಗಿ ಹೇಗೆ ಪರಿವರ್ತನೆಯಾಗುತ್ತದೆಂಬುದನ್ನು ನಾವು ಈ ಮರಣ ಮಂಡಲ ಮಧ್ಯದೊಳಗೆ ಕಾದಂಬರಿಯಲ್ಲಿ ಕಾಣಬಹುದಾಗಿದೆ.

ದಂಡಕಾರಣ್ಯ ಕಾದಂಬರಿಯಲ್ಲಿ ಜಾತ್ಯಾತೀತ ವಿಷಯವನ್ನು ಪ್ರಕೃತಿಯ ಮೂಲಕ ಲೇಖಕರು ನಮಗೆ ತಿಳಿಸಿದ್ದಾರೆ. ಪ್ರಕೃತಿಯು ನಮಗೆ ಅಂದರೆ ಮಾನವರನ್ನು ತಮ್ಮಮಕ್ಕಳಂತೆ ನೋಡಿಕೊಳ್ಳುತ್ತದೆ. ಪ್ರಕೃತಿಯ ಸಿಹಿಯನ್ನೆಲ್ಲಾ ಮಾನವ ಅನುಭವಿಸುತ್ತಾನೆ. ಆದರೆ, ಮಾನವ ಪ್ರಕೃತಿಗೆ ನೀಡುವುದೆಲ್ಲ ಹಿಂಸೆಯೇ. ದಂಡಕಾರಣ್ಯ ಕಾದಂಬರಿಯಲ್ಲಿ ಬರುವ ಗೌರಮ್ಮ ಭಿಕ್ಷುಕನ ಪಾತ್ರೆಗಳಲ್ಲಿ ನಾವು ಮೇಲ್ಜಾತಿ ಪಂಥದ ಪೌರುಷವನ್ನು ಕಾಣಬಹುದು. ಗೌರಮ್ಮ ರಾಜಕುಮಾರಿ, ಭಿಕ್ಷುಕನನ್ನು ಇಷ್ಟಪಟ್ಟು, ಅವನ ಬಲಿಯನ್ನು ತೆಗೆದುಕೊಳ್ಳುತ್ತಾಳೆ. ಭಿಕ್ಷುಕ ಒಬ್ಬ ಮಹಾನ್ ವ್ಯಕ್ತಿಯಾಗಿ, ಕೇಳುದ್ದನ್ನು ಕೊಡುವ ಜೋಗಿಯಾಗ ಬಂದರೂ ಸಹ ಜಾತಿಯ ಕಾರಣದಿಂದ ಜನರು ಅವನನ್ನು ತಿರಸ್ಕರಿಸುತ್ತಾರೆ. ಮುಂದೆ ಲಂಗೋಟಿ ಸ್ವಾಮಿಗಳಿಗೆ ಇದರ ಪರಿಣಾಮ ತಟ್ಟುತ್ತದೆ. ರಾಜಕುಮಾರನ ಕತೆಯ ನಂತರ, ಆಧುನಿಕ ಕಾಲದ ಬರುವ ಅನೇಕ ಪ್ರಣಯ ಪ್ರಸಂಗಗಳು, ಸ್ವತಃ ಲೇಖಕರು ಆತ್ಮಚರಿತ್ರೆಯನ್ನು ಹೇಳಿಕೊಂಡಿರುವ ಪ್ರಣಯ ಪ್ರಸಂಗಗಳು ಜಾತ್ಯಾತೀತತೆಯನ್ನು ಸಾರುತ್ತವೆ. ಸಿಂಗಳೀಕ ಕಥಾಸಂಕಲನದಲ್ಲಿ ಇಂತಹ ಅನೇಕ ಪ್ರಸಂಗಗಳನ್ನು ಕಾಣಬಹುದು. ಇನ್ನೊಂದು ಪ್ರಮುಖ ಪ್ರಸಂಗವೆಂದರೆ, ದಲಿತ ಹಾಸ್ಟೆಲ್‌ನ ವಿದ್ಯಾರ್ಥಿಗಳಿಗೆ ಮೇಲ್ಜಾತಿಯವರು ಪಾಠಪ್ರವಚನಮಾಡಿ ಹಿಂದುಳಿದ ಮಕ್ಕಳು ಮುಂದೆ ಬರಲು ಎಂದು ಆಶಿಸಿರುವುದು ಶ್ಲಾಘನೀಯವಾಗಿದೆ. ಲೇಖಕರು ಇಲ್ಲಿ ಅನೇಕ ಅಂತರ್ಜಾತಿ ಪ್ರೇಮಪ್ರಸಂಗಗಳನ್ನು, ಅದರಿಂದ ಆದ ಅನಾಹುತಗಳನ್ನು ಚಿತ್ರಿಸಿದ್ದಾರೆ. ಈ ರೀತಿ ಜಾತ್ಯಾತೀತೆಯ ನೆಲೆಗಳನ್ನು ಕಾಣಬಹುದಾಗಿದೆ.

ಪ್ರಾಥಮಿಕ ವಿದ್ಯಾಭ್ಯಾಸವನ್ನು ಅಜ್ಜಿಯ ಊರಿನಲ್ಲಿ ಮುಗಿಸಿ, ಕೆ.ಆರ್.ನಗರಕ್ಕೆ ತಂದೆಯ ವರ್ಗಾವಣೆಯ ನಂತರ ನಗರ ಜೀವನ ಪ್ರಾರಂಭವಾಯಿತು. ಆಗ ಅವರಿಗೆ ಜಾತಿಯ ಬಗ್ಗೆ ಅರಿವಿರಲಿಲ್ಲ. ಎಲ್ಲಾರಿಗೂ ಸಹಾಯ ಮಾಡುವ ಪ್ರವೃತ್ತಿ ಲೇಖಕರದ್ದಾಗಿತ್ತು. ಪಕ್ಕದ್ಮನೆ ಬ್ರಾಹ್ಮಣರಿಗೆ ಯಾವಾಗಲೂ ಕಾಯಿಚೂರು, ಉರಗಡಲೆ ತಂದುಕೊಡುತ್ತಿದ್ದರು. ಒಂದುದಿನ ಒಂದು ಕಾಯಿಚೂರಿನ ಸ್ವಲ್ಪಭಾಗವನ್ನು ಕಚ್ಚಿ ತಿಂದು, ಆಗ ಏನೋ ಮಹಾತ್ಕಾರ್ಯ ಸಾಧಿಸಿದಂತೆ ಸಂತೋಷವೆನಿಸಿತು. ಆದರೆ, ಪೂರ್ತಿಯಾಗಿ ಆ ಕಾಯಿಚೂರನ್ನು ತಿನ್ನುವುದು ತಪ್ಪೆಂದರೂ, ಆ ಕೆಲಸಮಾಡಿ, ಆ ಹೆಂಗಸಿನ ಮುಂದೆ ತಪ್ಪೊಪ್ಪಿಕೊಂಡಿದ್ದರು. ಈ ಕಾಯಿಚೂರಿನ ಪ್ರಸಂಗವನ್ನು ನಾವು ಕಾದಂಬರಿ, ಕತೆಗಳಲ್ಲೂ ಕಾಣಬಹುದಾಗಿದೆ. ಇನ್ನು ಮುಂದೆ ಕಾಯಿಚೂರನ್ನು ತಿನ್ನಬಾರದೆಂದೂ, ನಿರ್ಧರಿಸಿ, ಎಲ್ಲ ಕಾಯಿಚೂರುಗಳನ್ನು ನಾಲಿಗೆಯಿಂದ ನೆಕ್ಕಿ,

ಎಂಜಲು ಮಾಡಿಕೊಡುತ್ತಿದ್ದರು. ಎಂದಿನಂತೆ ಆ ಹೆಂಗಸರು ಕಾಯಿಚೂರುಗಳನ್ನು ತೊಳೆದು ಉಪಯೋಗಿಸುತ್ತಿದ್ದಳು. ಲೇಖಕರಿಗೆ ಇದೊಂದು ಮೋಜಿನ ಸಂಗತಿಯಾಗಿತ್ತು. ಇದೆಲ್ಲದರ ಜೊತೆ ಲಾಲೋಜಿ ಕುಟುಂಬದ ಮೇಲೆ ಅನುಕಂಪ, ಕೋಪ ಎಲ್ಲವು ಇತ್ತು. ಲಾಲೋಜಿ ಒಳ್ಳೆಯ ಮನುಷ್ಯ, ಹೆಂಡ್ತಿ ಗಯ್ಯಾಳಿ, ಪೋಷಕರಂತು ಗಲಾಟೆ ಮನುಷ್ಯರು, ಇವರೆಲ್ಲ ಸೇರಿ ಲಾಲೋಜಿಯ ಮಾನಮರ್ಯಾದೆಯನ್ನು ಹರಾಜು ಹಾಕುತ್ತಿದ್ದರು. ಒಂದು ದಿನ ಲಾಲೋಜಿಯನ್ನು ಬೀದಿಯಲ್ಲಿ ನಿಲ್ಲಿಸಿ, ಹೆಂಡ್ತಿ ಹೀನಾಯಾವಾಗಿ ಬೈದದ್ದು, ಲೇಖಕರು ಮರೆಯಲಾಗದ ಘಟನೆ. ಲಾಲೋಜಿ ಇದನ್ನೆಲ್ಲ ಮರೆತು, ಮಗನಿಗೋಸ್ಕರ ತನ್ನ ಹೆಂಡ್ತಿಯ ಜೊತೆ ಬಾಳುತ್ತಿದ್ದ. ಲೇಖಕರಿಗೆ ಬಾಲ್ಯದ ಭೂತದ ಭಯ. ಕತ್ತಲಲ್ಲಿ ದೆವ್ವ, ಭೂತಗಳು ಇರುತ್ತವೆಂದು, ಅಜ್ಜಿ ಹೇಳುವ ಕತೆಯಿಂದ ನಂಬಿಕೊಂಡಿದ್ದರು. ಅಪ್ಪ ನಾಟಕ ನೋಡಲು, ರಾತ್ರಿ ಕಳುಹಿಸಿದ್ದರೆ, ಭಯದಿಂದ ನಾಟಕವನ್ನು ನೋಡದ ಅಪ್ಪನ ಬರುವಿಕೆಗಾಗಿ ಕಾಯುತ್ತಾ ಇರುತ್ತಿದ್ದರು. ಕವಿಗಳಿಗೆ ಬಾಲ್ಯದಲ್ಲಿ ತುಂಬಾ ಪ್ರಿಯವಾದವುಗಳೆಂದರೆ ಒಂದು ಮಾಮರ ಬಿಟ್ಟರೆ ಸ್ಕೂಲು. ಶಾಲೆಗೆ ಹೋಗುವ ದಾರಿಯಲ್ಲಿ ಮೂರುಕಾಸಿನ ಬೊಂಡವನ್ನು ಚಡ್ಡಿ ಜೋಬಿನಲ್ಲಿಟ್ಟುಕೊಂಡು ಅದೆಲ್ಲಿ ಮುಗಿದುಹೋಗುತ್ತದೋ ಎಂಬ ಭಯದಿಂದ ಸ್ವಲ್ಪಸ್ವಲ್ಪವೇ ತಿಂದು ಸಾಗುತ್ತಿದ್ದದ್ದು ವಿಶೇಷ. ಬೀದಿಯಲ್ಲಿ ಬೊಂಡ, ಸ್ಕೂಲಿನಲ್ಲಿ ಪಾಠ ಇದು ಅವರ ನಿತ್ಯದ ದಿನಚರಿಯಾಗಿತ್ತು. ಜೊತೆಗೆ ಇದು ಅತ್ಯಂತ ರೋಮಾಂಚನಕಾರಿಯಾಗಿತ್ತು. ಇವರ ಸ್ಕೂಲಿನ ಜಗತ್ತು ಅತ್ಯಂತ ಸಂಕುಚಿತವಾದದ್ದು ಹಾಗೂ ಬೀದಿಯ ಲೋಕ ಅದ್ಭುತವಾದದ್ದು. ಬೀದಿಯನ್ನು ನೋಡುತ್ತಾ, ಶಾಲೆಯಲ್ಲಿ ಗುರುಗಳು ಹೇಳಿದ ಪಾಠವನ್ನು ಗ್ರಹಿಸುತ್ತಾ ಬೆಳೆದ ಇವರ ಪರ ವಿಸ್ಮಯವಾದದ್ದು. ಇವರೇ ಆ ಶಾಲೆಯಲ್ಲಿದ್ದ ಒಬ್ಬರೇ ದಲಿತ ಹುಡುಗ. ಆಗ ದಲಿತ ಎಂಬ ಪದವೂ ಸಹ ಬಳಕೆಯಲ್ಲಿರಲಿಲ್ಲ. ಆದರೆ ಈ ಪದ ಇಂದು ರಕ್ಷಣಾತ್ಮಕ ಪದವಾಗಿದೆ. ಹರಿಜನ-ಗಿರಿಜನ ಎಂಬ ಪದ ಹೆಚ್ಚು ಬಳಕೆಯಲ್ಲಿತ್ತು. ಇವರಿಗೆ ಈ ಪದಗಳು ನನಗೆ ಸಂಬಂಧಿಸಿದವುಗಳು ಎಂದು ತಿಳಿದಿರಲಿಲ್ಲ. ಮನೆಯಲ್ಲಾಗಲಿ, ಸ್ಕೂಲಿನಲ್ಲಾಗಲಿ ಯಾರೂ ಜಾತಿಗಳನ್ನು ಕುರಿತು ಚರ್ಚಿಸುತ್ತಿರಲಿಲ್ಲ. ಹಾಗಾಗಿ ಇವರಿಗೆ ಜಾತಿಗಳ ಬಗೆಗಿನ ಜ್ಞಾನ ಶೂನ್ಯವಾಗಿತ್ತು.

ಒಂದು ದಿನ ಇವರು ಹೇರ್‌ಕಟ್ಟಿಂಗ್ ಮಾಡಿಸಿಕೊಂಡಿದ್ದರು. ಸ್ನಾನವನ್ನು ಆತುರಾತುರವಾಗಿ ಮಾಡಿಕೊಂಡು ಸ್ಕೂಲಿಗೆ ಹೋಗಿದ್ರು. ಇವರ ಕಿವಿಯ ಹಿಂಬದಿಯಲ್ಲಿ ಒಂದು ಚೂರು ಕೂದಲು ಅಂಟಿಕೊಂಡಿದ್ದನ್ನು ಕಂಡು ಇವರ ಮೇಷ್ಟ್ರು ಕೆಂಪಯ್ಯ, ಏನೋ ಕೂದಲು ಕತ್ತರಿಸಿದ ಮೇಲೆ ನಿಮ್ಮ ಜಾತಿಯವರು ಸ್ನಾನ

ಮಾಡುವುದಿಲ್ಲವೇ? ಎಂದು ಕೇಳಿದರು. ಇದರಿಂದ ಕವಿಗಳು ಕಕ್ಕಾಬಿಕ್ಕಿಯಾದರು. ತಕ್ಷಣವೇ ಅವರು ಜಾತಿಯ ಬಗ್ಗೆ ಅವರ ಮೇಷ್ಟ್ರಿಗೆ ಜಾತಿ ಎಂದರೇನು? ಎಂದು ಪ್ರಶ್ನಿಸಿದರು. ಹಾಗೆಯೇ ತಕ್ಷಣವೇ "ಅಧಿಕ ಪ್ರಸಂಗಿ" ಎಂದು ಬೈದರು. ಇವರ ಈ ಪ್ರಶ್ನೆಯಿಂದ ಮೇಷ್ಟ್ರು ಅತ್ಯಂತ ಕಸಿವಿಸಿಗೊಂಡಿದ್ದರು.

ಸ್ಕೂಲಿನಲ್ಲಿ ಇವರನ್ನು ಬಹುವಾಗಿ ಆಕರ್ಷಿಸಿದ ಮೇಷ್ಟ್ರೆಂದರೆ ಚಂದ್ರಶೇಖರ ಶಾಸ್ತ್ರಿ ಇವರು ವಯೋವೃದ್ಧರು. ಇವರು ಆ ಶಾಲೆಯ ಹೆಡ್‌ಮೆಷ್ಟ್ರರು. ವರ ಸರಳವಾದ ವೇಷಭೂಷಣವು ಅತ್ಯಂತ ಸರಳವಾಗಿದ್ದು ಇದೇ ಅವರ ಆಕರ್ಷಣೀಯವಾಗಿತ್ತು.

ಈ ಗುರುಗಳಿಂದಲೇ ಕವಿಗಳು ಸಮಾನತೆಯನ್ನು ಕಲಿತದ್ದು ತಾರತಮ್ಯ ರಹಿತ ಮನಸ್ಥಿತಿಯನ್ನು ಪಡೆದುಕೊಂಡಿದ್ದು. ಇವರಿಗೆ ಎಲ್ಲಾ ಮಕ್ಕಳ ಬಗ್ಗೆ ಸಮಾನವಾದ ಭಾವವಿತ್ತು. ಇವರ ಜೊತೆಯಲ್ಲಿದ್ದ ನಾಗರಬೆತ್ತಕ್ಕೆ ಎಲ್ಲಾ ಮಕ್ಕಳು ತುಂಬಾ ಹೆದರುತ್ತಿದ್ದದ್ದು ಉಂಟು. ತಪ್ಪು ಮಾಡಿದಾಗ ಎಲ್ಲರಿಗೂ ಶಿಕ್ಷೆಯನ್ನು ನೀಡುತ್ತಿದ್ದರು. ಇವರು ಹೈಸ್ಕೂಲು ಜೀವನಕ್ಕೆ ಕಾಲಿಟ್ಟ ಸಂದರ್ಭದಲ್ಲಿ ನಡೆದ ಕಥೆ ಇವರ ತಾಯಿಗೆ ಹೇಳಿಕೊಳ್ಳುವಂತಹ ಯಾವುದೇ ಬಟ್ಟೆಗಳಿರಲಿಲ್ಲ. ಒಡವೆಗಳೂ ಇರಲಿಲ್ಲ. ಇವನು ಹುಟ್ಟಿ ಎಷ್ಟೋ ವರ್ಷಗಳ ನಂತರ ಅವರ ತಂದೆ ಅವರ ತಾಯಿಗೆ ಒಂದು ಸೀರೆಯನ್ನು ತಂದುಕೊಟ್ಟಿದ್ದರು. ಹಬ್ಬ ಹರಿದಿನಗಳಲ್ಲಿ ಮಾತ್ರ ಅದನ್ನು ಉಡುತ್ತಿದ್ದರು. ಅಲ್ಲದೇ ಅದನ್ನು ನುಸಿಗುಳಿಗೆ ಹಾಕಿ ಹಾಳಾಗದಂತೆ ಕಾಪಾಡಿದ್ದರು.

ಇವರ ತಾಯಿಗೆ ಆತ್ಮೀಯ ಗೆಳತಿಯೊಬ್ಬಳಿದ್ದು ಅವಳು ಹತ್ತಿರದ ಬಂಧುವಿನಂತೆಯೇ ಇದ್ದಳು. ಅವಳನ್ನು ಕಂಡರೆ ನಮ್ಮ ಅಮ್ಮನಿಗೆ ತುಂಬಾ ಸಲಿಗೆ. ಇವಳು ಯಾರದೋ ಬಂಧುವಿನ ಮದುವೆಗೆ ಹೋಗಬೇಕಾದ ಸಂದರ್ಭ ಬಂದೋದಗಿ ಅವಳು ಇವರ ತಾಯಿಯ ಬಳಿಯಿದ್ದ ಸೀರೆಯನ್ನು ತೆಗೆದುಕೊಂಡು ಹೋಗಿ ಅಲ್ಲಿ ಅದನ್ನು ಯಾರಿಗೂ ಮಾರಾಟಮಾಡಿದಳು. ಇದರಿಂದ ಇವರೆಲ್ಲರಿಗೂ ತುಂಬಾ ನೋವಾಯಿತು. ಇದರಿಂದ ಇವರ ತಾಯಿಯ ಗೆಳತಿಗೆ ಟಿ.ಬಿ.ಕಾಯಿಲೆ ಬಂದೊದಗಿ ಹಾಸಿಗೆಯನ್ನು ಹಿಡಿದಿದ್ದಳು. ಇದರಿಂದ ತಿಳಿಯುತ್ತದೆ 'ಪಾಪಿಯ ಧನ ಪ್ರಾಯಶ್ಚಿತಕ್ಕಲ್ಲವೇ?'.

ಇವರ ಸ್ನೇಹಿತರೊಬ್ಬರು ಮನೆಗೆ ಇವರನ್ನು ಕರೆತಂದರು. ಒಂದು ವರ್ಷದ ನಂತರ ಇವರ ಗೆಳೆಯನಿಗೆ ವರ್ಗಾವಣೆಯಾಗಿ ಆ ಮನೆ ಖಾಲಿಯಾಯಿತು. ಖಾಲಿಯಾದ ಆ ಮನೆಗೆ ಒಬ್ಬ ಸುಂದರವಾದ ನರ್ಸ್ ಬಂದಳು. ಅವಳು ವಯಸ್ಸಿನಲ್ಲಿ ಕೊಂಚ ಹಿರಿಯವಳಾಗಿದ್ದಳು. ಇವಳನ್ನು ಕಂಡು ಲೇಖಕರಿಗೆ ಮೋಹವುಂಟಾಗಿ ಅವಳನ್ನು ಆರಾಧಿಸತೊಡಗಿದರು. ಒಮ್ಮೆ ಆ ನರ್ಸ್ ಮನೆಯಲ್ಲಿ

ಕಳ್ಳತನವಾಯಿತು. ಆ ಕಳ್ಳತನದಲ್ಲಿ ಲೇಖಕರು ಪಾಲುದಾರರೆಂದು ಕಂಪ್ಲೆಂಟಿನಲ್ಲಿ ದಾಖಲಿಸಲಾಗಿತ್ತು. ಇದರಿಂದ ಲೇಖಕರಿಗೆ ಅವಳ ಬಗೆಗಿದ್ದ ಮೋಹ ಕರಗಿಹೋಯಿತು.

ಇವರಿಗೆ ಗಣಿತದ ಬಗ್ಗೆ ತುಂಬಾ ಅನಾಸಕ್ತಿಯಿತ್ತು. ಲೆಕ್ಕವನ್ನು ತಪ್ಪಾಗಿ ಮಾಡಿ ಮೇಷ್ಟ್ರು ಕೈಯಿಂದ ಹೊದೆ ತಿಂದದ್ದು ಉಂಟು. ಇದರಿಂದ ಅವರಿಗೆ ತಮ್ಮ ತಪ್ಪಿನ ಅರಿವಾಗಿ ಲೆಕ್ಕಗಳನ್ನು ತಪ್ಪು ಮಾಡಿದ ಉದಾಹರಣೆಗಳಿಲ್ಲ.

ಇವರ ಸಹಪಾಠಿಗಳ ದಂಡು ಯಾವಾಗಲೂ ಸುತ್ತುವರಿದಿರುತ್ತಿತ್ತು. ಇವರು ಅವರಿಗೆ ನೂರಾರು ಕತೆಗಳನ್ನು ಹೇಳುತ್ತಿದ್ದರು. ಹೀಗಾಗಿ ಗೆಳೆಯರು ಯಾವಾಗಲೂ ಇವರನ್ನು ಸುತ್ತುವರೆದಿರುತ್ತಿದ್ದರು.

ಇವರಿಗೆ ಕಥೆ ಹೇಳುವುದೆಂದರೆ ಬಹು ಅಚ್ಚುಮೆಚ್ಚು. ಇವರು ಕಥೆಗಳ ಹುಚ್ಚನ್ನೆ ಹಿಡಿಸಿದ್ದರು. ಸಾವಿರಾರು ಕಥೆಗಳಿರುವ ಪುಸ್ತಕ ತನ್ನ ಬಳಿಯಿದೆ ಎಂದು, ಅದರಿಂದಲೇ ಕಥೆಗಳನ್ನು ಓದಿಬರುತ್ತೇನೆಂದು ಯಾವಾಗಲೂ ರೀಲು ಬಿಡುತ್ತಿದ್ದರು.

ಇವರ ಗೆಳೆಯರ ಗುಂಪಿನಲ್ಲಿ ಭಾಸ್ಕರ ಬಲಭೀಮನಂತಿದ್ದು ಮೇಲ್ಜಾತಿಯ ಹುಡುಗನಾಗಿದ್ದನು. ಇವರ ತಂದೆ ವೃತ್ತಿಯಲ್ಲಿ ಖಾಸಗ ಡಾಕ್ಟರು. ಇವನು ಆಟವಾಡುತ್ತಿದ್ದಾಗ ಸೈಕಲ್ ಗುಂಡುಗಳನ್ನು ನುಂಗಿಬಿಟ್ಟಿದ್ದನು. ಇವನು ಹತ್ತಾರು ಗುಂಡುಗಳನ್ನು ನುಂಗಿದ ಮೇಲೆಯೇ ಮೇಷ್ಟ್ರಿಗೆ ಗೊತ್ತಾದದ್ದು. ಈ ವಿಷಯದಿಂದ ಗುರುಗಳು ಕಂಗಾಲಾದರು. ಭಾಸ್ಕರ ತಂದೆಗೆ ವಿಷಯ ಗೊತ್ತಾಗಿ ಅವರು ತಮ್ಮ ಮಗನಿಗೆ ತುರ್ತುಚಿಕಿತ್ಸೆಯನ್ನು ನೀಡಿದರು. ಅವನು ಸಾವನ್ನೇ ಗೆದ್ದು ಬಂದವನಾಗಿದ್ದನು. ಅವನು ಮತ್ತೆ ಮೊದಲಿನಂತಾದನು.

ಅಲ್ಲಿಯವರೆಗೂ ಅವರಿಗೆ ಸಾವಿನ ಬಗ್ಗೆ ಯಾವುದೇ ಕಲ್ಪನೆಗಳಿರಲಿಲ್ಲ. ದೇಹದ ಎಲ್ಲಾ ಭಾಗಗಳ ಕೆಲಸ ನಿಂತುಹೋಗುತ್ತದೆ ಎಂದು ಗೊತ್ತಾಗಿದ್ದೇ ಅವಾಗ. ಕಣ್ಣುಗಳು ನೋಡುವುದಿಲ್ಲ, ಕಿವಿಗಳು ಕೇಳಿಸುವುದಿಲ್ಲ. ಹೃದಯ ಕ್ರಿಯೆ ನಿಲ್ಲುವುದು ಮಿದುಳು ಯೋಚಿಸುವ ಸಾಮರ್ಥ್ಯ ಕಳೆದುಕೊಳ್ಳುವುದೇ ಸಾವೆಂದು ಗೊತ್ತಾಯ್ತು.

ಒಂದು ಸಾರಿ ಲೇಖಕರ ಅತ್ತೆಯವರು ಟಿ.ವಿ.ಯನ್ನು ಕೊಡಿಸೆಂದು ಲೇಖಕರಿಗೆ ಎರಡುಸಾವಿರ ರೂಪಾಯಿಗಳನ್ನು ಕೊಟ್ಟಿದ್ದರು. ಹಣ ಜೇಬಿನಲ್ಲಿದ್ದರೆ ತೊಂದರೆ ಬಾ ಎಂದು ಭಾವಿಸಿ ಬ್ಯಾಂಕಿನಲ್ಲಿಟ್ಟರು. ಇವರಿಗೆ ಒಬ್ಬ ಸ್ನೇಹಿತನ ಪರಿಚಯವಾಯಿತು. ಅವನು ಸದಾ ವಿನಯನಂತೆ ಕಾಣುತ್ತಿದ್ದ. ಯಾವಾಗಲೂ ನಯವಾಗಿಯೇ ಮಾತಾನಾಡುತ್ತಿದ್ದ. ಅವನೊಂದಿಗೆ ಇವರು ಟಿ.ವಿ.ಕೊಳ್ಳುವ ಪ್ರಸ್ತಾಪ ಮುಂದಿಟ್ಟರು. ಮರುದಿನವೇ ಲೇಖಕರ ಆ ವಿನಯಶಾಲಿ ಗೆಳೆಯನು ಯಾರೋ ಒಬ್ಬ ಅಪರಿಚಿತ–

ನೊಬ್ಬನನ್ನು ಕರೆದುಕೊಂಡು ಬಂದು ಅವನೊಬ್ಬ ಟಿ.ವಿ.ಡೀಲರ್ ಎಂದು ಹೊಸ ಟಿ.ವಿ.ಗಳನ್ನು ಅರ್ಧಬೆಲೆಗೆ ಮಾರುತ್ತಾನೆ ಎಂದು ತಿಳಿಸಿದನು. ಮರುದಿನವೇ ಟಿ.ವಿ.ಕೊಡಿಸುವುದಾಗಿ ಮಾತುಕೊಟ್ಟನು. ಇವರಿಬ್ಬರೂ ಬಂದು "ಒಂದು ಟಿ.ವಿ. ಖರೀದಿಗೆ ಬಂದಿದೆ ನೀವು ನೋಡಿ ಬನ್ನಿ ಎಂದು ಕರೆತಂದರು.

ಅವರಿಬ್ಬರೂ ಸೇರಿ ಬಲವಂತವಾಗಿ ಸವರ್ಣಿಯರೊಬ್ಬರ ಮನೆಗೆ ಕರೆದೊಯ್ದರು. ಹೊಸ ಟಿ.ವಿ.ಪ್ಯಾಕ್ ಆಗಿತ್ತು. ಬೆಲೆ ನಾಲ್ಕು ಸಾವಿರ ಹೇಳಿದ. ಲೇಖಕರು ಮೂರುವರೆ ಸಾವಿರ ರೂಪಾಯಿಗಳಿಗೆ ಅದನ್ನು ಖರೀದಿ ಮಾಡಿ ಸದ್ಯಕ್ಕೆ ಎರಡುಸಾವರ ರೂಪಾಯಿಗಳನ್ನು ಕೊಡುವುದಾಗಿ ಉಳಿದ ಹಣವನ್ನು ಮುಂದಿನ ವಾರವೇ ಕೊಡುತ್ತೇನೆಂದು ಹೇಳಿಬಂದರು.

ಮರುದಿನ ಟಿ.ವಿ. ಡೀಲರ್ ಬಂದು ಹಣವನ್ನು ಪಡೆದರು. ಇವರು ಅವನಿಗೆ ಹಣವನ್ನು ಕೊಟ್ಟು ಕಳುಹಿಸಿದರು. ಇವರೇನು ಯೋಚಿಸದೇ ಅವನಿಗೆ ಹಣ ನೀಡಿ ಕಳುಹಿಸಿದರು. ಇವರ ಮನುಷ್ಯತ್ವವೇ ಅವರಿಗೆ ಮುಳುವಾಯಿತು. ಇವರು ಈ ರೀತಿ ಮೋಸಹೋದರು. ಅಲ್ಲದೇ ಹಣವನ್ನು ಕಳೆದುಕೊಂಡರು. ನಂತರ ಇವರು ಬೇರೊಬ್ಬ ಸ್ನೇಹಿತರಿಂದ ಸಾಲಮಾಡಿ ಅತ್ತೆಯವರಿಗೆ ಸಾಲವನ್ನು ತೀರಿಸಿದರು. ಇವರು ಹಣದುರುಪಯೋಗದ ಅಪವಾದದಿಂದ ತಪ್ಪಿಸಿಕೊಂಡರು. ಯಾರೋ ದುಡಿದ ಹಣವನ್ನು ಯಾರೋ ಅಪಹರಿಸುವುದು ಒಂದು ಜೀವನ ಕ್ರಮವಾಗಿದೆ ಎಂದು ಬೇಸರಿಸಿಕೊಂಡರು.

ಇವರೊಬ್ಬ ಸ್ನೇಹಿತನು ಇವರು ಒಂದೆ ಪ್ರಾಣ ಎರಡು ದೇಹದಂತಿದ್ದರು. ಅವನು ಬ್ಯಾಂಕೊಂದರ ನೌಕರ. ಅಲ್ಲದೇ ಅವನು ಪತ್ರಿಕೆಯೊಂದರ ಪ್ರಕಾಶಕ್ಕೂ ಆಗಿದ್ದ. ಪತ್ರಿಕೆ ನಡೆಸಲು ಇವರ (ಲೇಖಕರ) ಹೆಸರಿನಲ್ಲಿ ಐದು ಸಾವಿರ ರೂ.ಗಳನ್ನು ಸಾಲ ತೆಗೆದುಕೊಂಡರು. ಅಷ್ಟೆ ಅಲ್ಲ ಅವನು ಲೇಖಕರ ವಲಯದಲ್ಲೂ ಸಹ ಲಕ್ಷಾಂತರ ರೂಪಾಯಿಗಳ ಸಾಲವನ್ನು ತೆಗೆದುಕೊಂಡರು. ಅವನು ನಡೆಸುತ್ತಿದ್ದ ಪತ್ರಿಕೆಯೇ ನಿಂತುಹೋಯಿತು. ಅವನು ಈಗಲೂ ಸುಲಿಗೆಯನ್ನೇ ಉದ್ಯೋಗೇತರ ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾನೆ.

ಈತನ ಇನ್ನೊಬ್ಬ ಸ್ನೇಹಿತ ನಿರ್ಗತಿಕನೊಬ್ಬನ ಮಗ. ಈತ ಕಂಡ ಕಂಡ ಹೆಂಗಸರ ಹತ್ತಿರ ಸುಖಕ್ಕಾಗಿ ಹಲ್ಲುಗಿಂಜುವ ಬೀದಿನಾಯಿಯಂತವ. ಇವನು ವಿಕೃತಕಾಮಿ ಹಾಗೂ ಮನೋರೋಗಿಯಾಗಿದ್ದ ಒಳ್ಳೆಯ ಹೆಂಡತಿ ಹಾಗೂ ಮಕ್ಕಳಿದ್ದರೂ ಸಹ ಹೆಂಗಸರ ಸಹವಾಸದಲ್ಲಿದ್ದ. ಕಂಡ ಕಂಡವರ ಕಾಲುಹಿಡಿದು ಶಾಸಕನಾಗಿದ್ದನು. ಅಲ್ಲದೇ ಜೀವನದುದ್ದಕ್ಕೂ ಅಪಾರ ಹಣ ಮಾಡಿದ. ಸಂಪಾದಿಸಿದ ಹಣವನ್ನೆಲ್ಲಾ ಹೆಂಗಸರಿಗೆಲ್ಲಾ ಸುರಿದು ಚುನಾವಣೆಯಲ್ಲಿ ಸೋತನು. ಇದರಿಂದ

ಅವನು ಖಿನ್ನನಾದನು. ಲಕ್ಷಗಳನ್ನು ಲೂಟಿ ಮಾಡಿದ ಕೈ ಭಿಕ್ಷಾಪಾತ್ರೆಯನ್ನು ಹಿಡಿಯುವಂತಾಯಿತು. ಇದರಿಂದ ಇವನಿಗೆ ಒಂದು ವ್ಯಕ್ತಿತ್ವವೇ ಕಳೆಗುಂದಿತು.

ಅಧಿಕಾರ ಕಳೆದುಕೊಂಡು ಕೊಂಚ ಬದಲಾಗಿ ಲೇಖಕರ ಕಾಲುಹಿಡಿದು ಅದರಿಂದ ಪ್ರಚಾರವನ್ನು ಗಿಟ್ಟಿಸಿಕೊಂಡು ಮತ್ತೆ ಚುನಾವಣೆಯಲ್ಲಿ ಜಯಗಳಿಸಿ ಅವರ ಹಳೆಯ ಚಾಳಿಗಳನ್ನೇ ಮುಂದುವರೆಸಿದನು.

ಈ ರೀತಿಯಾಗಿ ಇವರು ಸಮಾಜದಲ್ಲಿ ಹಲವಾರು ಮಜಲುಗಳಲ್ಲಿ ಮೋಸವನ್ನು ಅನುಭವಿಸಿದರು. ಇದೊಂದು ಅವರಿಗೆ ಪಾಠವಾಯಿತು.

'ಪಾಪಿಯ ಧನ ಪ್ರಾಯಶ್ಚಿತಕ್ಕಲ್ಲದೆ ಪರಾರ್ಥಕ್ಕೆ ಸಲ್ಲದಯ್ಯಾ' ಎಂಬ ಈ ಸಾಲು ನೀಚನೊಬ್ಬನಿಗೆ ದೊರೆತ ಪದವಿ – ಅಧಿಕಾರಗಳನ್ನು ವ್ಯಾಪಕವಾಗಿ ವಿಡಂಬಿಸುತ್ತದೆ.

ಲೇಖಕರು ತಮ್ಮ ಹದಿಹರೆಯದ ಸಮಯದಲ್ಲಿ ಪ್ರೇಮದ ಬಲೆಯಲ್ಲಿ ಸಿಲುಕಿದ್ದರು. ಇವರು ಅವಳ ಚೆಲುವಿಗೆ ಅತ್ಯಂತ ಆಕರ್ಷಕರಾಗಿದ್ದರು. ಇವಳು ಅವರನ್ನು ತನ್ನ ಚೆಲುವಿನಿಂದಲೇ ಆಕರ್ಷಿಸಿದ್ದಳು. ಇವರು ಕೆಳಜಾತಿಯವರು. ಇವರಿಗೆ ಅರಿವಿಲ್ಲದಂತೆಯೇ ಬೇರೆಯಾದ ಊರಲ್ಲಿ ತಿಳಿಯದ ಜನರಿದ್ದ ಊರಲ್ಲಿ ಅವಳ ಪ್ರೇಮದ ಸೆಳೆತಕ್ಕೆ ಬಲಿಯಾಗಿದ್ದರು.

ಜನಜಾತ್ರೆಯಲ್ಲಿ ಕರಗಿಹೋದ ಆ ಹುಡುಗಿ ಎತ್ತಹೋದಳೋ ಲೇಖಕರಿಗೆ ತಿಳಿಯದಾಯಿತು. ಜನರು ದೇವರು ಬಂತು ದೇವರು ಎಂದು ಕೂಗಾಡುತ್ತಿದ್ದರು. ಆ ಗೆದ್ದಲ ಗೌಜಿನಲ್ಲಿ ಸಮಾಧಾನದ ಒಂದು ಎಳೆಯೂ ಇರಲಿಲ್ಲ. ಇವರು ಭಾರವಾದ ಹೆಜ್ಜೆಗಳನ್ನು ಹಾಕುತ್ತಾ ಮನೆಯ ಕಡೆ ಹಿಂದಿರುಗಿದರು. ಆದರೆ ಇವರಿಗೆ ಆ ಹುಡುಗಿಯ ಮುಖವನ್ನು ಮರೆಯಲಾಗಲಿಲ್ಲ.

ಈ ನಡುವೆ ಅವರ ತಂದೆಯವರಿಗೆ ಬೇರೊಂದು ಊರಿಗೆ ವರ್ಗವಾಯಿತು. ಇವರು ಕುಟುಂಬ ಸಮೇತವಾಗಿ ಹೊಸ ಊರಿಗೆ ಬಂದು ನೆಲೆಸಿದರು. ಇವರು ಒಂದು ದಿನ ಕನಸು ಕಾಣುತ್ತಿರುವಾಗ ಒಂದು ದಿನ ಅವರ ಕನಸಿನ ಕನ್ಯೆಯನ್ನು ಬಸ್ಸಿನಲ್ಲಿ ಕಂಡರು. ಇವರಲ್ಲಿನ ಭಾವನೆಗಳು ಚಿಗುರೊಡೆದವು. ಅವಳ ಬಗ್ಗೆ ಇವರಲ್ಲಿ ವಿಶೇಷವಾದ ಪ್ರೇಮವಿತ್ತು. ಅವಳ ನೋಟಕ್ಕೆ ಇವರು ಬೆರಗಾಗಿ, ಇವರ ನೋಟಕ್ಕೆ ಅವಳು ಇಬ್ಬರು ಆಕರ್ಷಿತರಾದರು.

ಕಾಲೇಜಿನಲ್ಲಿ, ಕ್ಲಾಸಿರೂಮಿನಲ್ಲಿ, ಗೆಳೆಯರ ಬಳಗದಲ್ಲಿ ಎಲ್ಲೆಂದರಲ್ಲಿ ಅವಳು ಇವರನ್ನು ಕಾಡತೊಡಗಿದಳು. ಒಂದು ವರ್ಷವು ಹೀಗೆ ಕಳೆದುಹೋಯಿತು. ಇಬ್ಬರು ಪರಸ್ಪರ ಪ್ರೀತಿಸತೊಡಗಿದರು. ಸರಸ ಸಲ್ಲಾಪದಲ್ಲಿ ತೊಡಗಿ ಅವರ ಮಾತು ಕತೆಗಳು ಮುಂದುವರೆದವು. ಆಗ ಹುಡುಗಿಯು ಜಾತಿ ಯಾವುದೆಂದು ಪ್ರಶ್ನಿಸಿದಳು. ಆಗ

ಅವನು 'ನಾನು ಹೊಲೆಯ' ಎಂದು ಹೇಳಿದಾಗ ಅವಳು ಮೇಲಿನಿಂದ ಕೆಳಕ್ಕೆ ಕುಸಿದು ಬೀಳತೊಡಗಿದಳು. ಆಗ ಅವಳು ಲೇಖಕರ ಕಣ್ಣಿಗೆ ವಿಷಸರ್ಪದಂತೆ ಕಾಣಿಸತೊಡಗಿದಳು. ಅವಳ ರೂಪವು ಅತ್ಯಂತ ಕುರೂಪವಾಗಿ ಕಾಣಿಸತೊಡಗಿತು.

ಲೋಕವೆ ಜಾತಿಯಿಂದ ತುಂಬಿರುವಾಗ ನಾನೇನು ಮಾಡಲು ಸಾಧ್ಯ ಎಂದು ಯೋಚಿಸತೊಡಗಿದರು. ಪ್ರತಿಯೊಬ್ಬರು ಯೋಚಿಸುವುದು ಅವರವರ ಜಾತಿಯ ನಿಯಮಗಳಿಗನುಗುಣವಾಗಿ, ಇದರಿಂದ ಅವರು ಜರ್ಝರಿತರಾಗಿ ಪ್ರೀತಿಯ ಬಲೆಯಲ್ಲಿ ಸಿಲುಕಿ ನಲುಗಿದರು. ಈ ರೀತಿ ಅವರ ಬಾಳನ್ನು ದುಃಖಿತವನ್ನಾಗಿ ಮಾಡಿತು. ಅವರ ಮೊದಲ ಪ್ರೇಮ ಪ್ರಸಂಗ ಈ ರೀತಿಯಾಗಿ ಅಂತ್ಯವನ್ನು ಕಂಡಿತು.

ಇದಾದ ಕೆಲವು ದಿನಗಳ ನಂತರ ಲೇಖಕರಿಗೆ ಅನಾರೋಗ್ಯ ಕಾಡತೊಡಗಿತು. ಅವರನ್ನು ಅವರ ತಂದೆಯವರು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಹೆಣವೊಂದು ಎದುರಾಯಿತು. ಇದರಿಂದ ಲೇಖಕರು ಭಯಭೀತರಾಗಿ ಇಲ್ಲಿಗೆ ಬಂದವರೆಲ್ಲಾ ಸಾಯುತ್ತಾರೆ ಎಂದು ಚಿಂತಿಸುತ್ತಿರುವಾಗ ಅವರ ತಂದೆ ಹಾಗೇನೂ ಆಗುವುದಿಲ್ಲ ಎಂದು ಸಂತೈಸಿ ಆಸ್ಪತ್ರೆಯಲ್ಲಿ ಸುಮಾರು ದಿನಗಳ ಕಾಲ ಕಳೆದರು. ನಂತರ ಲೇಖಕರಿಗೆ ಆಸ್ಪತ್ರೆಯಲ್ಲಿದ್ದ ಟಿಬೇಟಿಯನ್ ರೋಗಿ ಮತ್ತು ಒಬ್ಬ ವಯೋವೃದ್ಧರ ಪರಿಚಯವಾಯಿತು. ಲೇಖಕರು ಕಂಡಂತೆ ಟಿಬೇಟಿಯನ್ ವ್ಯಕ್ತಿ ತುಂಬಾ ಶ್ರಮಜೀವಿಯಾಗಿದ್ದನು. ಆ ವಯೋವೃದ್ದರು ಇವರಿಗೆ ಚೆನ್ನಾಗಿ ಪರಿಚಯವಾಗಿದ್ದು ಇವರ ಹತ್ತಿರ ಬೇಕಾದಗೆಲ್ಲಾ ಹಣವನ್ನು ಪಡೆದುಕೊಳ್ಳುತ್ತಿದ್ದರು. ಗುಣಮುಖರಾದ ಮೇಲೆ ಇವರಿಗೆ ಒಂದು ಮಾತನ್ನು ಹೇಳದೇ ಇವರ ಕಡೆಗೆ ತಿರುಗಿ ನೋಡದ ಹಾಗೇ ಅಲ್ಲಿಂದ ಹೊರಟುಹೋದನು. ಇದರಿಂದ ಲೇಖಕರಿಗೆ ತುಂಬಾ ಬೇಸರವಾಯಿತು. ಅಲ್ಲದೇ ಇಬ್ಬರು ರೋಗಿಗಳು ಪರಸ್ಪರ ಹರಟುತ್ತಿದ್ದರು. ಕಾಲ ಬದಲಾಗಿದೆ ಎಂದು ಅಂದಿನ ಕಾಲ ಹೀಗಿರಲಿಲ್ಲ ಎಂದು ಪರಸ್ಪರ ಮಾತನಾಡಿಕೊಳ್ಳುತ್ತಿದ್ದರು. ಅಲ್ಲಿನ ದಾದಿಯರು, ಡಾಕ್ಟರುಗಳು ಕೆಲವೊಮ್ಮೆ ದೇವರಂತೆ ಕಂಡುಬಂದರೆ ಕೆಲವೊಮ್ಮೆ ರಾಕ್ಷಸರಂತೆ ಕಾಣತೊಡಗಿದರು.

ಲೇಖಕರು ಆಸ್ಪತ್ರೆಯಲ್ಲಿ ಬೇರೆ ಬೇರೆ ಜಾತಿಯ ಜನರನ್ನು ಬೇರೆ ಬೇರೆ ರೀತಿಯ ರೋಗಗಳನ್ನು ಒಳಗೊಂಡ ಜನರನ್ನು, ಸ್ವಾತಂತ್ರ ವೀರರನ್ನು, ಬ್ರಿಟಿಷರ ಪರವಿರುದ್ದದವರನ್ನು ಎಲ್ಲರನ್ನು ಕಂಡರು. ಹೀಗೆ ಲೇಖಕರು ಆಸ್ಪತ್ರೆಯೂ ಸಾವಿನ ಜೊತೆಗೆ ಸುದೀರ್ಘವಾದ ಯುದ್ದವನ್ನು ಮಾಡಿಗೆದ್ದಿದ್ದರು. ಕವಿಗಳು ಸುಮಾರು ವರ್ಷಗಳ ನಂತರ ಅವರ ಊರಿಗೆ ಹೋಗಿದ್ದರು. ಊರಿನ ಹಾದಿ-ಬೀದಿಗಳೆಲ್ಲಾ ಮರೆತು ಹೋದದ್ದರಿಂದ ಅವರ ಅಪ್ಪಾಜಿಯವರು ಊರಿನ ನಕ್ಷೆಯನ್ನು ತಯಾರಿಸಿಕೊಟ್ಟರು. ಊರಿನ ನಕ್ಷೆಯನ್ನು ಹಿಡಿದು ಊರೆಲ್ಲಾ ಸುತ್ತಿ, ಬಂಧುಗಳ

ಮನೆಯಲ್ಲಿ ಚೆನ್ನಾಗಿ ಊಟಮಾಡಿ ತೇಗಿ, ಇದ್ದ ಹಣವನ್ನು ಖರ್ಚುಮಾಡಿಕೊಂಡರು. ಊರಿಗೆ ಹೋಗುವ ಸಂದರ್ಭ ಒದಗಿಬಂತು. ಅನಿವಾರ್ಯವಾಗಿ ಅವರು ಮಾಲಂಗಿಯಿಂದ ತಾವಿರುವ ಊರಿಗೆ ಕಾಲುನಡಿಗೆಯಲ್ಲಿ ನಡೆಯಬೇಕಾಯಿತು. ಹಾಗೇ ನಡೆದುಹೋಗುವಾಗ ಅವರಿಗೆ ಸುಸ್ತಾಗಿ ಊಟವಿಲ್ಲದೇ ಹೋಗುವಾಗ ಇಬ್ಬರು ವ್ಯಕ್ತಿಗಳನ್ನು ಭೇಟಿಮಾಡಿದರು. ಅವರಿಗೆ ಅನಾಮಿಕರಾಗಿ, ಗಂಭೀರ ವದನರಾಗಿ, ಕೈಯಲ್ಲಿ ವಾಕಿಂಗ್ ಸ್ಟಿಕನ್ನು ಹಿಡಿದು ಎದುರಾದರು. ಲೇಖಕರು ಮತ್ತು ವ್ಯಕ್ತಿಗಳು ಪರಸ್ಪರ ಎದುರಾಗಿ ಒಬ್ಬರನ್ನೊಬ್ಬರು ದುರುಗಟ್ಟಿ ನೋಡಿಕೊಂಡು ಹೋದರು. ಲೇಖಕರಿಗೆ ತುಂಬಾ ಭಯವೂ ಆಯಿತು. ಏಕೆಂದರೆ ಅವರ್ಯಾರೋ ಕಳ್ಳರಿರಬಹುದು. ತನ್ನ ಕೈಯಲ್ಲಿರುವ ಕಾಳಿನ ಚೀಲಗಳನ್ನು ಕಿತ್ತುಕೊಂಡು ಹೋಗಬಹುದು ಎಂದು ತಲೆಯಲ್ಲಿ ನೂರಾರು ಆಲೋಚನೆಗಳು ಅವರ ತಲೆಯಲ್ಲಿ ಸುಳಿದು ಹೋದವು.

ಹಾಗೇ ಸಾಗುತ್ತಿರುವಾಗ ಅವರನ್ನು ಯಾರೋ ಒಬ್ಬ ವ್ಯಕ್ತಿ ಊರಿನಿಂದಲೂ ಹಿಂಬಾಲಿಸುತ್ತಾ ಬರುತ್ತಿರುವುದನ್ನು ಲೇಖಕರು ಕಂಡರು. ಆ ಅನಾಮಿಕ ವ್ಯಕ್ತಿಯು ಲೇಖಕರಿಗೆ ಪ್ರಶ್ನೆಯನ್ನು ಕೇಳಿದರು. ಆಗ ಲೇಖಕರು ಜಾತಿಯ ವಿಷಯವನ್ನು ಕೇಳಿದಾಗ ಅವರು ತಾನು ದಲಿತ ವರ್ಗದವನೆಂದು ಹೇಳದೇ ನಾನು ಒಕ್ಕಲಿಗ ಹುಡುಗನೆಂದು ಸುಳ್ಳುಹೇಳಿದಾಗ ಆ ಅನಾಮಿಕ ವ್ಯಕ್ತಿ ಲೇಖಕರನ್ನು ತನ್ನ ಸೈಕಲ್ ಮೇಲೆ ಕೂರಿಸಿಕೊಂಡು ಕರೆದುಕೊಂಡು ಹೋದರು. ಅಲ್ಲದೇ ಆ ಅನಾಮಿಕ ವ್ಯಕ್ತಿ ಕೈಯ್ಯಲ್ಲಿರುವ ಕಾಳುಗಳನ್ನು ಮಾರಿ ನೀನು ಊರಿಗೆ ಹೋಗಬಹುದಲ್ಲಾ ಎಂದು ಐಡಿಯ ಕೊಟ್ಟು, ಆ ಅನಾಮಿಕನೇ ಲೇಖಕರನ್ನು ಕರೆದುಕೊಂಡು ಹೋಗಿ ಲಿಂಗಾಯ್ತರ ಕೇರಿಯಲ್ಲಿ ಮಾರಿ ಕಾಸನ್ನು ತೆಗೆದುಕೊಂಡು ಊರಿಗೆ ಹೋದರು.

ಕೆಲವು ದಿನಗಳ ತರುವಾಯ ಇವರು ಲೈಬ್ರರಿಯಲ್ಲಿ ಓದುತ್ತಿರುವಾಗ ಕುಕ್ಕರಹಳ್ಳಿಯ ಕೆರೆಯ ಏರಿಯ ಮೇಲೆ ನೋಡಿದ ಮುದುಕನ ಪೋಟೋ ಪೇಪರಿನಲ್ಲಿ ಬಂದಿತ್ತು. ಅದನ್ನು ನೋಡಿ ಲೇಖಕರಿಗೆ ಆಶ್ಚರ್ಯವಾಯಿತು. ಅವರ ಹೆಸರು ಕುವೆಂಪು ಅಂತ ಆಗ ಗೊತ್ತಾಗಿದ್ದು ಲೇಖಕರಿಗೆ.

ಲೇಖಕರು ಒಂಬತ್ತನೆಯ ತರಗತಿಯಲ್ಲಿ ಓದುತ್ತಿದ್ದಾಗ ಇವರ ಸ್ಕೂಲಿನ ಪಕ್ಕದ ಸ್ಕೂಲಿನಲ್ಲಿ ಕನ್ನಡ ಬೋಧಿಸುತ್ತಿದ್ದ ಶಿಕ್ಷಕರ ಪರಿಚಯವಾಯಿತು. ಆ ಶಿಕ್ಷಕರು ತುಂಬಾ ಗಂಭೀರವದನರಾಗಿದ್ದರು. ಅವರನ್ನು ಮಾತನಾಡಿಸಬೇಕೆಂದು ಇವರೆಲ್ಲರ ಹಂಬಲವಾಗಿತ್ತು. ಹಾಗೇ ಮಾತನಾಡಿಸುತ್ತಾ ಅವರ ಸ್ನೇಹವನ್ನು ಸಂಪಾದಿಸಿದರು. ಆಗ ಲೇಖಕರಿಗೆ ಇವರು ಹುಡುಗಿಯ ಪ್ರೇಮಪಾಶದಲ್ಲಿ ಸಿಲುಕಿದರು. ಹಾಗೇನೇ ಇವರಿಬ್ಬರೂ ಪರಸ್ಪರ ಪ್ರೀತಿಸತೊಡಗಿದರು. ಅಷ್ಟರಲ್ಲಿ ಆ ಹುಡುಗಿಯ ತಂದೆ-ತಾಯಿಯರು ಅವಳಿಗೆ ಬೇರೊಬ್ಬ ಹುಡುಗನೊಬ್ಬನೊಂದಿಗೆ ಮದುವೆ ನಿಶ್ಚಯಿಸಿದರು.

ಈ ವಿಷಯ ತಿಳಿದ ಅವರಿಬ್ಬರು ಅಲ್ಲಿಂದ ಪಲಾಯನವಾಗಿ ಬೇರೆ ಊರಿಗೆ ಹೋಗಿ ಮದುವೆಯಾಗಿ ಸಂಸಾರ ಹೂಡಿದರು.

ಆ ಹುಡುಗಿಯ ತಂದೆ-ತಾಯಿಯವರು ಹೇಗೋ ಅವರಿರುವ ಜಾಗವನ್ನು ಪತ್ತೆಮಾಡಿ ಅವಳನ್ನು ಅಲ್ಲಿಂದ ಊರಿಗೆ ಕರೆದುಕೊಂಡು ಹೊದರು. ಅವಳಿಗೆ ಅವರ ಜಾತಿಯ ಬೇರೊಬ್ಬ ಹುಡುಗನೊಂದಿಗೆ ಮದುವೆ ಮಾಡಿ ಕಳುಹಿಸಿದರು. ಅವಳ ಕರುಳ ಬಳ್ಳಿಯನ್ನು ಸಹ ಕಿತ್ತಾಕಿಸಿದ್ದರು. ಇದನ್ನು ಲೇಖಕರು ತಮ್ಮ ಕಣ್ಣಾರೆ ಕಂಡಿದ್ದರು.

ಅಲ್ಲದೇ ಅವರ ಕಣ್ಣೆದುರಿಗೆ ಇಂಥಹುದೇ ಧಾರುಣ ಪ್ರಸಂಗವೂ ನಡೆದುಹೋಯಿತು. ದಲಿತ ಹುಡುಗನೊಬ್ಬ ಜೀತದಾಳಾಗಿದ್ದ ಸಾಹುಕಾರನ ಮನೆಯಲ್ಲಿರುವಾಗ ಆ ಮನೆಯಲ್ಲಿನ ಜಮೀನ್ದಾರನ ಮಗಳೊಂದಿಗೆ ಪ್ರೇಮವು ಅಂಕುರಿಸಿತು. ಇಬ್ಬರು ಪರಸ್ಪರ ಪ್ರೀತಿಸಿ ಮದುವೆಯಾಗಬೇಕೆಂದು ಬೇರೊಂದು ಊರಿಗೆ ಹೋಗಿ ಗಂಡಹೆಂಡಿರಾಗ ಜೀವನ ನಡೆಸತೊಡಗಿದರು. ಆಗ ಅವರನ್ನು ಆ ಹುಡುಗಿಯ ತಂದೆ ಹೇಗೋ ಪತ್ತೆ ಮಾಡಿ ತನ್ನ ಜೀತದಾಳುಗಳಿಂದ ಅವಳ ಗಂಡನಿಲ್ಲದ ಸಮಯದಲ್ಲಿ ಅವಳನ್ನು ಕರೆದುಕೊಂಡು ಬಂದು ಕಾಡಿನಲ್ಲಿ ಕೊಚ್ಚಿಹಾಕಿದರು. ಇದರಿಂದ ಆ ಹುಡುಗನಿಗೆ ಆ ಹುಡುಗಿಯ ನೆನಪಿನಿಂದ ಹೊರಬರಲಾಗಲಿಲ್ಲ. ಇಂತಹ ಪ್ರಸಂಗವನ್ನು ಲೇಖಕರು ಕಣ್ಣಾರೆ ಕಂಡು ತಮ್ಮ ಲೇಖನದಲ್ಲಿ ಚಿತ್ರಿಸಿದ್ದಾರೆ.

ಲೇಖಕರೂ ತಮ್ಮ ಬಿ.ಎ. ವ್ಯಾಸಂಗದ ಅನುಭವಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅವರು ಯಾವ ವಿಷಯಗಳನ್ನು ತುಂಬಾ ಇಷ್ಟಪಡ್ತಿದ್ದರೂ ಎಂಬುದನ್ನು ಹಾಗು ಹಾಸ್ಟೆಲಿನ ಜೀವನ ಹೇಗಿತ್ತು ಎಂಬುದನ್ನು ನಾವು ಅವರ ಲೇಖನದಿಂದ ತಿಳಿಯಬಹುದು.

ಲೇಖಕರು ಹಾಸ್ಟೆಲಿನಲ್ಲಿ ತಾವು ಕೇಳಿದಂತಹ ಸಂದರ್ಭಗಳನ್ನು ಇಲ್ಲಿ ವಿವರಿಸಿದ್ದರೆ. ಇವರು ಹಾಸ್ಟೆಲಿನಲ್ಲದ್ದಾಗ ಯಾವ ದೇವರುಗಳನ್ನು ನಂಬದೇ ನಾಸ್ತಿಕರಾಗಿದ್ದರು. ಅಲ್ಲಿ ಇವರಿಗೂ ಮತ್ತು ಇವರ ಹಾಸ್ಟೆಲ್ ವಾರ್ಡನ್‌ಗೂ ಅಷ್ಟಕ್ಕಷ್ಟೇ. ಅಷ್ಟೊಂದು ಆತ್ಮೀಯವಾದಂತಹ ಸಂಬಂಧಗಳು ಯಾವುವು ಇರಲಿಲ್ಲ. ಹಾಸ್ಟೆಲ್ ವಾರ್ಡನನ್ನು ಕಂಡರೆ ಇವರಿಗೂ ಅಷ್ಟಕಷ್ಟೇ. ಇವರಿಗೆ ವಿದ್ಯಾರ್ಥಿಗಳ ಬಗ್ಗೆ ಮತ್ತು ಅವರ ಸಮಸ್ಯೆಗಳಿಗೂ ಯಾವ ರೀತಿಯಿಂದಲೂ ಸ್ಪಂದಿಸುತ್ತಿರಲಿಲ್ಲ. ಇದರಿಂದ ಬೇಸತ್ತ ಯಾರೋ ಒಬ್ಬರು ಹಾಸ್ಟೆಲ್‌ನ ಬೋರ್ಡಿನ ಮೇಲೆ ವಾರ್ಡನ್ ಸತ್ತು ಹೋದ ಎಂದು ಬರೆದರು. ಇದನ್ನು ನೋಡಿ ವಾರ್ಡನ್‌ಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಅವರು ಹಾಸ್ಟೆಲಿನಲ್ಲಿರುವ ಎಲ್ಲಾ ಹುಡುಗರನ್ನು ಕರೆದು ಬೋರ್ಡಿನ ಮೇಲೆ

ಬರೆಸಿದರು. ಯಾರ ಅಕ್ಷರವೂ ಅಲ್ಲಿ ಬರೆದಿರುವ ಅಕ್ಷರಕ್ಕೆ ಹೊಂದಿಕೆಯಾಗಲಿಲ್ಲ. ಅದನ್ನು ಬರೆದವರು ಯಾರೆಂದು ಗೊತ್ತಾಗಲಿಲ್ಲ. ಆ ಹಾಸ್ಟೆಲಿನ ವಾರ್ಡನ್ ಕೇಸು ಕೊಟ್ಟರು. ಪೊಲೀಸಿನವರು ಹಾಸ್ಟೆಲಿನಲ್ಲಿರುವ ಎಲ್ಲಾ ಹುಡುಗರನ್ನು ಸಾಕ್ಷಿಹೇಳಲು ಕೇಳಿಕೊಂಡರು. ಯಾರೂ ಸಹ ಸಾಕ್ಷಿ ಹೇಳಲು ತಯಾರಿರಲಿಲ್ಲ. ಆಗ ಪೊಲೀಸಿನವರೆಂದರೆ ಲೇಖಕರಿಗೂ ಸಹ ತುಂಬ ಭಯವಿತ್ತು. ಅವರು ಮುದುರಿಕೊಂಡು ಮೂಲೆಯಲ್ಲಿ ಬಿದ್ದಿದ್ದರು. ಇವರನ್ನು ಸಾಕ್ಷಿ ಹೇಳುವಂತೆ ಒತ್ತಾಯಿಸಿದರೂ ಇವರೂ ಸಹ ಸಿದ್ದರಿರಲಿಲ್ಲ.

ಇದು ಎರಡನೇ ಪ್ರಸಂಗ. ಒಂದು ದಿನ ಹುಡುಗರು ಇದ್ದಕ್ಕಿದ್ದಂತೆ ಹೆದರಿ ಓಡತೊಡಗಿದರು. ಗೆಳೆಯರಲೆಲ್ಲಾ ಲೇಖಕರಿಗೆ ನೀನು ಇಲ್ಲಿಂದ ಓಡಿಹೋಗು ಎಂದು ಕೂಗಿದರು. ಇಡೀ ಹಾಸ್ಟೆಲ್ ಖಾಲಿಯಾಯಿತು. ಆಗ ರೂಮಿನಲ್ಲಿ ಇವರೊಬ್ಬರೇ ಉಳಿದರು. ಆಗ ಸ್ವಲ್ಪ ಹೊತ್ತಿನ ಮೇಲೆ ಆಫೀಸು ರೂಮಿನಿಂದ ಕರೆಬಂತು. ಅವರ ಹೆಸರು ಬಿಳಿಗಿರಿರಂಗಯ್ಯ ಎಂದು. ಅವರು ದೈತ್ಯಾಕಾರದವರಾಗಿದ್ದರು. ಆಗ ಅವರು ಏನು ನಿನ್ನ ಹೆಸರು? ಏನು ಓದುತ್ತಾ ಇದ್ದೀಯಾ ಎಂದು ಪ್ರಶ್ನೆ ಕೇಳಿದರು. ಎಲ್ಲರೂ ಭಯದಿಂದ ತಪ್ಪುತಪ್ಪಾಗಿ ಹೇಳುತ್ತಿದ್ದರು.

ಇದರಿಂದ ತಪ್ಪು ಹೇಳಿದವರಿಗೆ ಏಟುಗಳು ಬೀಳುತ್ತಿದ್ದವು. ಈ ರೀತಿಯಾಗಿ ಅವರು ಪ್ರತಿಬಾರಿ ಹಾಸ್ಟೆಲಿನಲ್ಲಿ ಈ ರೀತಿಯೇ ನಡೆಯುತ್ತಿತ್ತು. ಅವರಿಂದ ಎಷ್ಟೋ ವಿದ್ಯಾರ್ಥಿಗಳು ಏಟುಗಳನ್ನು ತಿಂದವರಿದ್ದರು. ಇದೊಂದು ಅವರ ಜೀವನದಲ್ಲಿ ಮರೆಯಲಾಗದ ಘಟನೆಯಾಗಿತ್ತು.

ಈ ರೀತಿಯಾಗಿ ಲೇಖಕರು ತಮ್ಮ ಸಂಪುಟದುದ್ದಕ್ಕೂ ತಾವು ಕಣ್ಣಾರೆ ಕಂಡು ನೋಡಿದಂತಹ ಘಟನೆಗಳನ್ನು ನೈಜವಾಗಿ ಚಿತ್ರಿಸಿದ್ದಾರೆ. ಅವರ ಕಣ್ಣೆದುರಿಗೆ ನೋಡಿದಂತಹ ಹಲವಾರು ಪ್ರೇಮಪ್ರಸಂಗಗಳನ್ನು ಹಾಗೂ ಕಣ್ಣೆದುರಿಗೆ ನಡೆದಂತಹ ದುರಂತಗಳನ್ನು ತುಂಬಾ ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಉದಾ: ಬದನವಾಳು ದುರಂತ

ಬಾಲ್ಯದಲ್ಲಿ ನಡೆದಂತಹ ಘಟನೆಗಳು, ಹಾಸ್ಟೆಲಿನಲ್ಲಿ ನಡೆದಂತಹ ಘಟನೆಗಳು, ತಮ್ಮ ಊರಿನಲ್ಲಿ ನಡೆದ ಘಟನೆಗಳು ನಡೆದಿರುವುದನ್ನು ಚಿತ್ರಿಸಿರುವುದನ್ನು ನೋಡಿದರೆ ಅತ್ಯಂತ ರಮಣೀಯವಾಗಿದೆ. ಹೀಗೆ ಪ್ರತಿಯೊಂದು ಹಂತದಲ್ಲಿ ನಡೆದ ಘಟನೆಗಳನ್ನು ನೈಜವಾಗಿ ಚಿತ್ರಿಸಿದ್ದಾರೆ.

ಜಾತ್ಯಾತೀತ ನೆಲೆಗಳು:

ಮುಳ್ಳೂರು ನಾಗರಾಜರ ಕಥೆ, ಕಾದಂಬರಿಗಳ ವಿಶೇಷವೇ ಜಾತಿಯ ಅನ್ಯಾಯಗಳ ವಿರುದ್ಧ ಹೋರಾಡಿ, ನೊಂದ ಜನರಿಗೆ ಸಾಂತ್ವನ ಹೇಳುವುದು. ಜಾತಿ ಎಂಬ ಪದ, ಜಾತಿಯಿಂದಾದ ಅನ್ಯಾಯವನ್ನು ನಾವು ಶತಶತಮಾನಗಳಿಂದಲೂ ಕಾಣಬಹುದಾಗಿದೆ. ಜಾತಿ, ಮತಾಂತರ ಹೊಂದಿದ್ದು, ಜಾತಿಗಳ ನಡುವೆ ಕೋಮುಗಲಭೆ ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಜಾತಿಯ ಕಹಿ ಅನುಭವಗಳನ್ನು ಕಾಣಬಹುದಾಗಿದೆ. ಇಂತಹ ಕೆಟ್ಟ ಪರಿಸ್ಥಿತಿಯಲ್ಲಿ ಜಾತಿಯನ್ನು ಮರೆತು ಮನುಷ್ಯರಿಗೋಸ್ಕರ, ಮಾನವೀಯತೆ ಮೆರವರನ್ನು ನೋಡಬಹುದು. ಸಮಾಜದಲ್ಲಿ ಹಲವಾರು ಜಾತಿಯ, ಪಂಗಡದ ಜನರು ವಾಸಿಸುತ್ತಿರುವುದನ್ನು ನಾವು ಹಿಂದಿನ ಕಾಲದಿಂದ, ಈಗಿನ ಕಾಲದವರಿಗೂ ನೋಡುತ್ತಿದ್ದೇವೆ. ಕೆಲವು ಜಾತಿ–ಧರ್ಮಗಳ ನಡುವೆ ಭಿನ್ನಾಭಿಪ್ರಾಯಗಳು ಸಂಘರ್ಷಗಳಿದ್ದರೆ, ಇನ್ನೂ ಕೆಲವು ಜಾತಿ, ಧರ್ಮಗಳ ನಡುವೆ ಅನ್ಯೋನ್ಯವಾದ ಬಂಧಗಳಿರುವುದನ್ನು ಕಾಣುತ್ತೇವೆ. ೧೨ನೇ ಶತಮಾನದಿಂದಲೂ ಜಾತಿ–ಧರ್ಮಗಳ ನಡುವೆ ಸಾಮರಸ್ಯ ತರಲು ಅನೇಕ ಮಹನೀಯರು ಹೋರಾಟ ನಡೆಸಿದ್ದಾರೆ. ಅಂದಿನ ಹೋರಾಟದ ಫಲವಾಗಿ ಇಂದು ನಾವು ೨೧ನೇ ಶತಮಾನದಲ್ಲಿ ಹಲವಾರು ಮಹತ್ತರವಾದ ಬದಲಾವಣೆಗಳು ಆಗಿರುವುದನ್ನು ಅರಿತ್ತಿದ್ದೇವೆ. ಅಂದಿನ ಹೋರಾಟದ ಫಲವೇ ಇಂದಿನ ಯಶಸ್ಸಿನ ಹಂತವಾಗಿದೆ. ಇಂದು ಎಲ್ಲಾ ಜಾತಿಗಳು ಹಾಗು ಧರ್ಮಗಳು ಸಾಮರಸ್ಯದ ನೆಲೆಗಟ್ಟಿನ ಮೇಲೆ ನಿಂತಿದೆ. ಸಾಮರಸ್ಯಸವೇ ಪ್ರತಿಯೊಂದು ಜಾತಿಯ ಧರ್ಮದ ವೇದಮಂತ್ರವಾಗಿದೆ. ಹಿಂದಿನಿಂದಲೂ ಜಾತಿಗಳ ನಡುವೆ ಸಾಮರಸ್ಯ ತರಲು ವಚನಕಾರರು, ದಾಸಶ್ರೇಷ್ಠರು, ವಚನಗಳ ಮೂಲಕ, ಕೀರ್ತನೆಗಳ ಮೂಲಕ ಜನರ ಮನಸ್ಸನ್ನು ತಟ್ಟಲು ಪ್ರಯತ್ನಿಸಿದ್ದಾರೆ. ಇದಕ್ಕಾಗಿ ಅವರು ಹಲವಾರು ಟೀಕೆ, ಅವಮಾನಗಳನ್ನು ಅನುಭವಿಸಿದ್ದಾರೆ. ಜೊತೆಗೆ ಅದರ ವಿರುದ್ಧ ದನಿಯೆತ್ತಿದ್ದಾರೆ. ಜನರಿಗಿರುವ ಮೂಢನಂಬಿಕೆ ಅಂದಾಚರಣೆಗಳ ವಿರುದ್ಧ ಹೋರಾಡಿ, ಯಶಸ್ಸನ್ನೂ ಪಡೆದಿದ್ದಾರೆ. ಹಳ್ಳಿಗಾಡಿನಲ್ಲಿ ಜನರು ಅನುಭವಿಸಿದ್ದ ಬವಣೆಗಳ ಕುರಿತು ಹಲವು ಜನ ಸಾಹಿತಿಗಳು ತಮ್ಮ ಕಾದಂಬರಿ, ಕವಿತೆಗಳ ಮೂಲಕ ನಮ್ಮೆಲ್ಲರ ಮುಂದಿಟ್ಟಿದ್ದಾರೆ. ಹಾಗೇ ಅವರು, ಅಂದರೆ ತುಳಿತಕ್ಕೊಳಗಾದ ಜನರು ಹೇಗೆ ಬದಲಾಗಬೇಕು ಎಂಬುದನ್ನು ಕವಿತೆ ಕಾದಂಬರಿಗಳ ಮೂಲಕ ಅವರನ್ನು ತಲುಪುವ ಮಾರ್ಗಗಳನ್ನು ತಿಳಿಸಿಕೊಟ್ಟಿದ್ದಾರೆ. ಇವರ ಈ ಹಂತ–ಹಂತವಾದ ಪರಿವರ್ತನೆ ಹೊಂದಲು ಎಲ್ಲಾ ರೀತಿಯ ಪ್ರಯತ್ನವನ್ನು ಸಹ ಮಾಡಿದ್ದಾರೆ. ಅಲ್ಲದೇ ತುಳಿತಕ್ಕೆ ಒಳಗಾದಂತಹ ಜನರು ತಮ್ಮಲ್ಲೇ ಸೂಫಿ, ಸಂಸ್ಥೆ ಹಾಗೂ ಸಮಿತಿಗಳನ್ನು ಮಾಡಿಕೊಂಡು ಅಭಿವೃದ್ಧಿಯ

ಪಥದತ್ತ ಸಾಗುತ್ತಿರುವುದನ್ನು ನಾವಿಂದು ನೋಡುತ್ತಿದ್ದೇವೆ. ಎಲ್ಲಾ ಕ್ಷೇತ್ರಗಳಲ್ಲಿ, ಅಂದರೆ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಎಲ್ಲಾ ರಂಗದಲ್ಲೂ ತಮ್ಮ ಪಾದಾರ್ಪಣೆ ಮಾಡಿದ್ದಾರೆ. ಬುದ್ಧಿವಂತರಾಗಿ ತಮ್ಮದೇ ಆದಂತಹ ಸುಂದರವಾದ ಬದುಕನ್ನು ಕಟ್ಟಿಕೊಂಡಿದ್ದಾರೆ. ಗ್ರಾಮೀಣ ಬದುಕಿನ ಜೀವನಶೈಲಿ ಸಾಕಷ್ಟು ಸುಧಾರಣೆಯಾಗಿರುವುದನ್ನು ಕಾಣುತ್ತಿದ್ದೇವೆ. ಈ ರೀತಿಯ ಪ್ರಗತಿಪರ ಬದಲಾವಣೆಗೆ ಅವರು ಪಡೆದಂತಹ ಶಿಕ್ಷಣವೇ ಪ್ರಮುಖ ಕಾರಣವಾಗಿದೆ. ಅದು ಅವರ ಪಾಲಿಗೆ ರಾಮಬಾಣ. ಈ ರೀತಿಯಾಗಿ ಹಿಂದುಳಿದ ವರ್ಗದವರು. ಶಿಕ್ಷಣದ ಮೂಲಕ ತಮ್ಮದೇ ಆದ ಸುಂದರ ಬದುಕನ್ನು ಕಟ್ಟಿಕೊಂಡು ಸಾಮರಸ್ಯದ ನೆಲೆಗಟ್ಟಿನ ಮೇಲೆ ಬದುಕುತ್ತಿದ್ದಾರೆ. ಇದೇ ರೀತಿಯ ಸಾಮರಸ್ಯಗಳನ್ನು ಮುಳ್ಳೂರು ಕೃತಿಗಳಲ್ಲಿ ಗುರುತಿಸಬಹುದು.

ಅಧ್ಯಾಯ – ೪

ಮುಳ್ಳೂರು ನಾಗರಾಜರ ಕಥಾನಕಗಳ ವಿಭಿನ್ನ ನೆಲೆಗಳು

ಆಧುನಿಕ ಸಾಹಿತ್ಯದ ಒಂದು ಮಜಲಾಗಿ ನಿಂತಿರುವ ದಲಿತ ಸಾಹಿತ್ಯ ವಿಶಿಷ್ಟವಾದುದು. ಅದು ಒಂದು ಸ್ಥಿರ ರೂಪ ಕಂಡಿರುವುದು ೧೯೭೦ರ ದಶಕದಲ್ಲಿ. ಇದರಲ್ಲಿ ಹಲವಾರು ದಲಿತ ಲೇಖಕರ ಲೇಖನ ಕೃಷಿಯನ್ನು ಕಾಣಬಹುದು. ದಲಿತ ಸಾಹಿತ್ಯ ಚಳುವಳಿ ಪ್ರಾರಂಭವಾಗಲು ಮೂಲ ಕಾರಣರಾದವರು ಬಿ.ಬಸವಲಿಂಗಪ್ಪ. ೧೯೭೦ರ ದಶಕದಲ್ಲಿ ಈ ಚಳುವಳಿ ಕಾಡ್ಗಿಚ್ಚಿನಂತೆ ಹಬ್ಬಿತ್ತು. ಇದರಲ್ಲಿ ಪ್ರಮುಖವಾಗಿ ರೈತರು, ವಿದ್ಯಾರ್ಥಿಗಳು, ಕಾರ್ಮಿಕರು ಇವರಲ್ಲದೆ ಸಮಾಜದ ಇತರ ಹಿಂದುಳಿದವರೆಲ್ಲರೂ ಪಾಲ್ಗೊಂಡರು. ಆಗಲೇ ದೇವನೂರು ಮಹದೇವ, ಸಿದ್ಧಲಿಂಗಯ್ಯ, ಎಚ್.ಗೋವಿಂದಯ್ಯ, ಮುನಿವೆಂಕಟಪ್ಪ, ದೇವಯ್ಯ, ಹರವೆ ಮುಂತಾದವರು ಈ ಕ್ಷೇತ್ರದಲ್ಲಿ ಪ್ರವೇಶ ಮಾಡಿದರು. ಅವರಲ್ಲಿ ಮುಳ್ಳೂರು ನಾಗರಾಜರು ಪ್ರಮುಖರು.

ಎಪ್ಪತ್ತರ ದಶಕದಿಂದ ಇತ್ತೀಚೆಗೆ ಅವರು ನಿಧನರಾಗುವವರೆಗೂ ದಲಿತ ಚಳುವಳಿ ಮತ್ತು ಸಾಹಿತ್ಯದಲ್ಲಿ ತಮ್ಮನ್ನು ಕ್ರಿಯಾಶೀಲವಾಗಿ ತೊಡಗಿಸಿಕೊಂಡಿದ್ದರು. ಈ ಅವಧಿಯಲ್ಲಿ ಅವರು ಮಾಡಿದ ಬರವಣಿಗೆ ಪ್ರಮಾಣದಲ್ಲಿ ಕಡಿಮೆಯಾದರೂ ವೈವಿಧ್ಯಮಯವಾಗಿದೆ ಮತ್ತು ಗುಣಾತ್ಮಕವಾದುದಾಗಿದೆ. ಕಾವ್ಯ, ಕಾದಂಬರಿ, ಕಥೆ, ಆತ್ಮಕಥೆ – ಹೀಗೆ ಹಲವು ರೂಪಗಳಲ್ಲಿ ಹರಡಿಕೊಂಡಿದೆ. ಪ್ರಸ್ತುತ ಅಧ್ಯಯನಕ್ಕೆ ಅವರು ರಚಿಸಿದ ಕಥನ ಪ್ರಕಾರವನ್ನಷ್ಟೆ ಆಯ್ಕೆ ಮಾಡಿಕೊಂಡಿರುವುದರಿಂದ ಅವರ ಮರಣ ಮಂಡಲ ಮಧ್ಯದೊಳಗೆ, ದಂಡಕಾರಣ್ಯ, ಸಿಂಗಳೀಕ, ಮಾಮರದ ಮೇಲೊಂದು ಕೋಗಿಲೆ ಎಂಬ ನಾಲ್ಕು ಕೃತಿಗಳನ್ನು ಕುರಿತು ಇಲ್ಲಿ ಚರ್ಚೆ ಮಾಡಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಮೊದಲಬಾರಿಗೆ ವಿಭಿನ್ನಲೋಕದ ಅನುಭವಗಳು ದಾಖಲಾದ ಈ ಸಂದರ್ಭದಲ್ಲಿ ಅವುಗಳನ್ನು ವಿಮರ್ಶೆಗೆ ಒಳಪಡಿಸುವಾಗ ವಿಮರ್ಶಕನೂ ಸಾಂಪ್ರದಾಯಿಕ ವಿಮರ್ಶಾ ಮಾದರಿಗಳಿಂದ ಹೊರಬಂದು ಹೊಸ ಅರಿವಿನ ಕಣ್ಣಿನಿಂದ ಈ ಲೋಕವನ್ನು ಕಾಣಬೇಕಾಗುತ್ತದೆ. ಅದಕ್ಕಾಗಿ ಮುಕ್ತ – ಉದಾರ ಮನಸ್ಸಿನ ಸಾಂಸ್ಕೃತಿಕ ಪದವೊಂದನ್ನು ಸಹೃದಯ ಮತ್ತು ವಿಮರ್ಶಕ ಇಬ್ಬರೂ ಸಾಧಿಸಿಕೊಳ್ಳಬೇಕಾಗುತ್ತದೆ. ಸ್ವಲ್ಪ ದುಡುಕಿನ ತೀರ್ಮಾನ ತೆಗೆದುಕೊಂಡರೂ ಇಲ್ಲಿನ ಸೂಕ್ಷ್ಮ ಅನುಭವ ಗ್ರಹಿಕೆಗೆ ಒಳಗಾಗದೆ ಹೋಗಿ ಪುನಃ; ಸಾಮಾಜಿಕ ಅನ್ಯಾಯಕ್ಕೆ ಗುರಿಯಾಗುವ ಅಪಾಯ ಉಂಟಾಗುವ ಸಾಧ್ಯತೆಯಿರುತ್ತದೆ. ಅಂದ ಮಾತ್ರಕ್ಕೆ ಅವನ್ನು ಕುರಿತು ಅನುಕಂಪ –ಸಹಾನುಭುತಿಯ ನಿಲುವನ್ನೆನು ತಳೆಯ ಬೇಕಾಗಿಲ್ಲ ಬದಲಾಗಿ ಬದಲಾದ ವೈಚಾರಿಕ–ವೈಜ್ಞಾನಿಕ ರಾಜಕೀಯ ಚಿಂತನೆಗಳ

ಬೆಳಕಿನಲ್ಲಿ ಪರಿಶೀಲಿಸುವ ತಾಳ್ಮೆಯನ್ನು ವಹಿಸಬೇಕಾದುದು ಅವಶ್ಯವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಮುಳ್ಳೂರು ನಾಗರಾಜ ಅವರ ಕಥಾನಕಗಳನ್ನು ಅಧ್ಯಯನ ಮಾಡಿದಾಗ ಅವುಗಳನ್ನು ಕೆಳಗೆ ಗುರುತಿಸಿದ ಐದು ಪ್ರಮುಖ ನೆಲೆಗಳಲ್ಲಿ ಚರ್ಚಿಸಬಹುದೆಂದು ತೋರುತ್ತದೆ.

೧. ಸಾಮಾಜಿಕ ಅಪಮಾನ ಮತ್ತು ನೋವು

೨. ಹಸಿವು ಮತ್ತು ಬಡತನ

೩. ಮಹಿಳಾ ಶೋಷಣೆ

೪. ಹೋರಾಟದ ನೆಲೆಗಳು

೫. ಜಾತ್ಯಾತೀತ ನೆಲೆಗಳು

೬. ಭಾಷಿಕ ಅಧ್ಯಯನದ ಸ್ವರೂಪ

ಸಾಮಾಜಿಕ ಸಂಘರ್ಷ :

ಮೊದಲಿಗೆ 'ಮರಣ ಮಂಡಲ ಮಧ್ಯದೊಳಗೆ' ಕಾದಂಬರಿಯನ್ನೇ ಗಮನಿಸುವುದಾದರೆ – ಈ ಕಾದಂಬರಿಯಲ್ಲಿ ಸಾಮಾಜಿಕ ನೋವು – ಅಪಮಾನದ ಪ್ರಶ್ನೆ ವಿಸ್ತೃತವಾಗಿ ಚರ್ಚಿತವಾಗಿರುವುದನ್ನೂ ಗುರುತಿಸಬಹುದು. ಇಲ್ಲಿ ಒಂದು ಪೌರಾಣಿಕ ಕಥೆಯೊಂದಿಗೆ, ಆಧುನಿಕ ಕಥೆ ಸೇರ್ಪಡೆಗೊಂಡಿದೆ. ಕಾದಂಬರಿ ಪ್ರಾರಂಭವಾಗುವುದೇ ಜಾತಿ ಸಮಸ್ಯೆಯೊಂದಿಗೆ, ಕಥಾನಾಯಿಕೆ ಮಾಳುಗಮ್ಮ ಬ್ರಾಹ್ಮಣತಿ, ಹೊಲಾರ ಸಂಗಯ್ಯ ಹೆಸರೇ ಸೂಚಿಸುವಂತೆ ಹೊಲೆಯ ಜಾತಿಯವನು. ಲೇಖಕರು ಇಲ್ಲಿ 'ಯಶೋಧರ ಚರಿತೆ'ಯ ಕಥೆಯ ರೀತಿಯಲ್ಲಿ ಈ ಕಥೆಯನ್ನು ಬಿಡಿಸಿದ್ದಾರೆ. ಅಮೃತಮತಿ ಮತ್ತು ಅಷ್ಟಾವಂಕರ ಪ್ರಸಂಗದ ಮಾದರಿಯಲ್ಲಿ ಚಿತ್ರಿಸುವ ಕೃತಿಕಾರರು ಇವರ ಅಕ್ರಮ ಸಂತಾನ ಬೆಳೆಯುತ್ತಿರುವ ಸೂಚನೆಯನ್ನು ಕೊಡುತ್ತಾರೆ. ನಡುರಾತ್ರಿಯಲ್ಲಿ ಊರ ಹೊರಗಿನಿಂದ ತೇಲಿಬಂದ ಹೊಲಾರ ಸಂಗನ ಹಾಡಿಗೆ ಮರುಳಾಗಿ ಮಾಳುಗಿ ಹೊರಬಂದು, ಆತನನ್ನು ಕೂಡುತ್ತಾಳೆ. ಇತ್ತ ತಮ್ಮನಾದ ಈರಣ್ಣನನ್ನು ಅವನು ಅಸ್ಪೃಶ್ಯರ ಹುಡುಗಿಯರೊಂದಿಗೆ ಸಂಬಂಧವಿರಿಸಿಕೊಂಡಿದ್ದಕ್ಕಾಗಿ ಮನೆಯೊಳಗೆ ಸೇರಿಸಲು ನಿರಾಕರಿಸುತ್ತಾಳೆ. ಆತ ಹೊಲಗೇರಿಯಲ್ಲೇ ನೆಲೆಯಾಗುತ್ತಾನೆ. ಪೌರಾಣಿಕ ಕಥನ ತಂತ್ರದ ಮೂಲಕವೇ ಸಂಬಂಧಗಳ ನಿರಂತರತೆಯನ್ನು ಈ ಕಾದಂಬರಿ ಕಟ್ಟಿಕೊಡಲೆತ್ನಿಸುತ್ತದೆ. ಮಾಳುಗಮ್ಮ ಗರ್ಭವತಿಯಾದಾಗ ಹೊಲಾರ ಸಂಗ ಕಣ್ಮರೆಯಾಗುತ್ತಾನೆ. ಇತ್ತ ಅವನನ್ನೇ ತುಂಬ ಇಷ್ಟಪಡುತ್ತಿದ್ದ ಮಾಳುಗಮ್ಮನ ಗೆಳತಿ ರಾಕಾಸಿಯು ಮಾಳುಗಮ್ಮನನ್ನು ದ್ವೇಷಿಸುತ್ತಾಳೆ. ನಂತರ ಮಾಳುಗಮ್ಮ ಮುದ್ದಾದ ಗಂಡು ಮಗುವಿಗೆ ಜನ್ಮವೆತ್ತಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಆ ಮಗುವನ್ನು ರಾಕಾಸಿಯು ಮಗನಂತೆ ಸಾಕಿ ಸಲಹುತ್ತಾಳೆ. ಆ ಮಗುವಿನ ಹೆಸರು ಸಿಂಗಾರು. ಈ ಮಗು

ದೊಡ್ಡವನಾದ ಮೇಲೆ ಕಾಡೂರನಲ್ಲಿ ನಡೆಯುತ್ತಿದ್ದ ಅನ್ಯಾಯವನ್ನು ಪ್ರತಿಭಟಿಸುತ್ತಾನೆ. ಅಲ್ಲಿನ ಜನರನ್ನು ಎಚ್ಚರಿಸುತ್ತಾನೆ. ಹೀಗೆ ಈ ಕಥೆಯು ಅಂತ್ಯಗೊಂಡ ನಂತರ, ಅಂದರೆ ಸುಮಾರು ೧೫೦ ವರ್ಷಗಳ ನಂತರ ಇದೇ ಕಾಡೂರರಲ್ಲಿ ಕಥೆಯನ್ನು ಲೇಖಕರು ಮುಂದುವರಿಸಿದ್ದಾರೆ. ಇಲ್ಲಿ ಬಸವರಾಜುವಿನ ಪಾತ್ರವೇ ಮುಖ್ಯವಾಗಿದೆ. ರೌಡಿ ರೀತಿಯಲ್ಲಿ ಇವನು ಊರಿನವರೆಲ್ಲರನ್ನೂ ಹೆದರಿಸಿಕೊಳ್ಳುತ್ತಾನೆ. 'ಮುಯ್ಯಿಗೆ ಮುಯ್ಯಿ' ಇವನ ತತ್ವವಾಗಿರುತ್ತದೆ, ಯಾರು ಏನು ಮಾಡಿದರೂ ಅದೇ ರೀತಿ ಇವನು ಮಾಡುತ್ತಾನೆ.

ಮೇಲ್ಜಾತಿಯವರಿಗೆ, ಕೀಳು ಜಾತಿಯವರಿಗೆ ಪರಸ್ಪರ ಹೊಂದಾಣಿಕೆ ಇಲ್ಲದಿರುವುದಿಲ್ಲ. ಸಿದ್ದಿಯ ಕಡುಬಡತನದ ಲಾಭವನ್ನು ತಿಳಿದು ಗೌಡರ ಮಗ ಅವಳನ್ನು ದುರುಪಯೋಗ ಪಡಿಸಿಕೊಳ್ಳುತ್ತಾನೆ. ಇವರಿಬ್ಬರನ್ನು ಹೇಗಾದರೂ ಒಂದು ಮಾಡಬೇಕೆಂದು ಬಸವರಾಜು ಪಂಚಾಯಿತಿ ಸೇರಿಸುತ್ತಾನೆ. ಮದುವೆಯವರೆಗೆ ಒಪ್ಪಿದ ನಂತರ, ಕೆಲವರು ಗೌಡನ ಮಗನ ಪರವಾಗಿಯೇ ವಾಲುತ್ತಾರೆ. ಸಿದ್ದಿಯು ಅದನ್ನು ಒಪ್ಪುತ್ತಾಳೆ. ಬಡತನ, ಜಾತಿಗಳ ಕೀಳು ಭಾವನೆ ಎಂತಹವರನ್ನೂ ಅಲುಗಾಡಿಸಿ ಬಿಡುತ್ತದೆ. ಇದೂ ಸಹ ಸಂಘರ್ಷಕ್ಕೆ ಕಾರಣವಾಗುತ್ತದೆ. ಇದಾದ ನಂತರ ಕೆಂಚಿಯ ಪ್ರಸಂಗವನ್ನು ತಿಳಿದ ಬಸವರಾಜು ಪಟೇಲರ ಮಗನನ್ನು ಥಳಿಸಿ, ಅವನ ಕಣ್ಣೆದುರಿಗೆ ಪಟೇಲರ ಸೊಸೆಯ ಮೇಲೆ ಅತ್ಯಾಚಾರವೆಸಗುತ್ತಾನೆ. ಆ ಸಮಯಕ್ಕೆ ಅದು ಸರಿ ಎನಿಸಿದರೂ ನಂತರ ಅವನಿಗೆ ತಪ್ಪಿನರಿವಾಗುತ್ತದೆ.

ಈ ರೀತಿ ಬಸವರಾಜುವಿನ ಮೂಲಕ ಹೊಸ ತಲೆಮಾರಿನ ಆಶಯಗಳನ್ನು ಕಂಡುಕೊಳ್ಳಲೆತ್ನಿಸುವ ಕೃತಿಕಾರರು ಸಂಬಂಧಗಳ ಅನಂತತೆಯ ಪ್ರಶ್ನೆಯೆನ್ನುತ್ತಾರೆ.

"ಯಾರು ಯಾರ್ಗ ಹುಟ್ಟಿದ್ದರು ಅಂಬುದ ಯಾರ ಕಂಡಿದ್ದರೇಳಿ? ನಾನೇ ನಿಮ್ಮಪ್ಪನುಗ ಹುಟ್ಟಿರಲೂಬೋದು, ನಿಜವು ಅದ್ಯಾನ? ಅದೆಂಗ್ಯ? ಎಂದು ಸವಾಲು ಹಾಕುತ್ತಾನೆ".

ಇದು ಟೀ ಅಂಗಡಿಯಲ್ಲಿ ನಡೆಯುವ ಪ್ರಸಂಗ. ಇಲ್ಲಿ ಬಸವರಾಜುವು ಅನಕ್ಷರಸ್ಥನಾದರೂ ಮುಯ್ಯಿಗೆ ಮುಯ್ಯಿ ಎಂಬ ತತ್ವಕ್ಕೆ ಬದ್ಧನಾಗಿ ಮೇಲುವರ್ಗದ ವಿರುದ್ಧ ಪ್ರತೀಕಾರಕ್ಕೆ ನಿಲ್ಲುತ್ತಾನೆ. ಇಲ್ಲಿ ಬಸವರಾಜು ಕೊಡು, ಕೊಳ್ಳು ಸಂಪ್ರದಾಯವನ್ನು ಪಾಲಿಸುತ್ತಾನೆ. ಈ ಊರಿನಲ್ಲಿ ಪ್ರತಿಭಟಿಸುತ್ತಾ, ಒಂದು ದಿನ 'ದಲಿತ ಸಂಘರ್ಷ ಸಮಿತಿ' ಯವರು ಸ್ವಜಾತಿಯ ರಂಗ-ರಂಗಿ ಪಂಚಾಯ್ತಿಗೆ ಬಂದಿದ್ದಾಗ, ಅದರಿಂದ ಸ್ಫೂರ್ತಿಗೊಂಡ ಬಸವರಾಜು ಡಿ.ಎಸ್.ಎಸ್.ಗೆ ಸೇರ್ಪಡೆಯಾಗುತ್ತಾನೆ. ರೌಡಿಯಾಗಿದ್ದವನ ಬದಲಾದ ಜೀವನವನ್ನು ಲೇಖಕರು ಹೇಳಿದ್ದಾರೆ. ಈ ಸಂಘದ ಮೂಲಕ ಅನೇಕ ಜನರ ಕಷ್ಟಗಳನ್ನು ನೋಡುತ್ತಾನೆ. ಇದರಲ್ಲಿ ಕೆಲವರಿಗೆ ಪರಿಹಾರವು

ದೊರೆಯುತ್ತದೆ. ಈ ರೀತಿ ಸಿಂಗಾರು ಮತ್ತು ಬಸವರಾಜುವಿನ ಹೋಲಿಕೆಯ ಮೂಲಕ ಅನ್ಯಾಯದ ವಿರುದ್ಧ ಹೋರಾಡುವ ಮನೋಸ್ಥೈರ್ಯವನ್ನು ಪ್ರತಿಮಾತ್ಮಕವಾಗಿ ನಿರೂಪಿಸಿದ್ದಾರೆ.

ಇದಾದ ನಂತರ ಇವರ ಎರಡನೇ ಕಾದಂಬರಿಯತ್ತ ಗಮನಹರಿಸಿದರೆ, ದಂಡಕಾರಣ್ಯ ಬಹಳ ಉತ್ತಮವಾದ ಕೃತಿಯಾಗಿದೆ. ಇಲ್ಲಿ ಕಥೆಯು ಗೌಣ ವಸ್ತು, ಅನುಷಂಗಿಕವಾಗಿ ಮುಂದುವರೆದಿದೆ. ವರ್ಣನೆಗಳೇ ಹೆಚ್ಚು. ಇಲ್ಲಿ ರೂಪಕ, ವಚನಗಳು, ಕಾವ್ಯಗಳನ್ನು ಕಾದಂಬರಿಯ ಉದ್ದಕ್ಕೂ ಕಾಣಬಹುದಾಗಿದೆ. ಈ ವಿಶಿಷ್ಟವಾದ ನಿರೂಪಣಾ ಶೈಲಿ ಸ್ವಲ್ಪ ಗೊಂದಲಮಯವಾದರೂ, ವರ್ಣನೆಗಳು ಉತ್ತಮವಾಗಿವೆ.

ನಂಜನಗೂಡು ಕನ್ನಡದ ಜನಪದ ವರ್ಚಸ್ಸು, ಸೊಗಡಿನೊಂದಿಗೆ ಸಾಹಿತ್ಯದ ಗತ್ತು ಗಾಂಭೀರ್ಯವೂ ತಳಕು ಹಾಕಿಕೊಂಡು ಮಾರ್ಮಿಕತೆಯಿಂದ ಕಳಕಳಿಸುವ ಈ ಕನ್ನಡಕ್ಕೆ ಅಯಸ್ಕಾಂತ ಗುಣವಿದೆ. ಜನಪದ ಶಿಷ್ಟಪದಗಳ ಹದವಾದ ಸಂಯೋಗದಿಂದ ಕೃತಿಗೆ ಒಳ್ಳೆಯ ಭೂಮಿಕೆ ದಕ್ಕಿದೆ. ಪಶು, ಪಕ್ಷಿ, ಪ್ರಾಣಿ ಮಾತಾಡುವ, ಕಥೆ ಹೇಳುವ ತಂತ್ರವು ಪಂಚತಂತ್ರ, ಬೇತಾಳ ವಿಂಶತಿಕಾರರಲ್ಲ ಕಂಡುಬರುತ್ತದೆ. ಗಿಡಮರಗಳೂ ಮಾತಾಡ್ತ ಹಿಂದಣ-ಮುಂದಣ ಕಥೆ ಹೇಳುತ್ತಾ ಅವೂ ಮುಖ್ಯ ಪಾತ್ರಗಳೇ ಆಗಿ ಕೃತಿಬಂಧದಲ್ಲಿ ಹದವಾಗಿ ಬೆಸೆದುಕೊಂಡ ಸಾರ್ಥಕ ಪ್ರಯತ್ನ ಈ ಕಾದಂಬರಿಯಲ್ಲಿ ಅಳವಡಿಸಲ್ಪಟ್ಟಿದೆ.

"ಕತೆಯ ಕೇಳುವ ತವಕವು ತಾರಾಮರಕ ಮೇರುಗಿರಿಯೋಪಾದಿಯಲ್ಲಿರಲು
ಕತೆಯ ಹೇಳುವ ತವಕವು ನೇರುಳಾಮರಕೋವಿಗನಬಾರಿಯಾಗಿತ್ತು.
ನಾನು ಕಾಗಕ್ಕನ ಕತೇನ ಹೇಳವ್ಳಲ್ಲ
ನಾನು ಗೂಬಕ್ಕನ ಕತೇನ ಹೇಳವ್ಳಲ್ಲ ಎನುತಾ ಮತ್ತಷ್ಟು ಬೀಗಲು
ಬಡಪಾಯಿ ತಾರಾಮರವೂ ಆ ಜಂಬನೀಗ ಸೈರಿಸಿಕೊಂಡು
ಹ್ಞೂ ಕನ್ನಿ ಅಕ್ಕಯ್ಯ ನೀವು ಅಂದರೇನ
ನಿಮ್ಮ ಕತೆಯೂ ಅಂದರೇನ? ಅಂದು ಕಿರುನಗೂವ ಸೂಸಿತು
ನೇರುಳಾ ಮರಕಾದರು ಹೊಗಳಿಕೆಯ ಹೊನ್ನ ಸೂಲದ ಇರಿತ
ಸುಕವಾಯಿತು
ಅದರಿಂದಾಗಿ ಆ ಮರವು ತನ್ನ ತನುವಿನಲ್ಲಿ ಒಂದು ತರವಾದ
ರೋಮಾಂಚಲವ

ಅನುಭವಿಸುತ್ತಾ ಮರುಗಳಿಗೆಯಲಿ ತನ್ನಯ ಕಥಾಲೋಕವ ಹೊಕ್ಕಿತು
ಆ ಮರದ ಬಾಯಲಿ ಕಥಾ ಚಿಲುಮೆಯೂ ಚಿಮ್ಮಿತು ...."[೧]

ಮುಳ್ಳೂರರು ಗದ್ಯ ಕವಿ; ಭಾವ ತನ್ಮಯತೆಯಿಂದ ಬರೆಯುತ್ತಾರೆಂದಷ್ಟೇ ಅಲ್ಲ, ಅವರ ಮನಸ್ಸಿಗೆ ಚಿತ್ರಕ ಶಕ್ತಿ ಉಸಿರಾಟದಷ್ಟು ಸಹಜವಾಗಿದೆ. ಇಲ್ಲಿನ ಅಂದರೆ, ಕಾದಂಬರಿಯೂ ಪುಟ-ಪುಟವೂ ಪ್ರತಿ ಪುಟದ ಪ್ರತಿ ವಾಕ್ಯವೂ ಈ ಮಾತಿಗೆ ಸಾಕ್ಷಿ ಹೇಳುತ್ತವೆ. ಅವರ ವಾಕ್ಯಗಳು ಕಾವ್ಯದೋಕುಳಿಯಲ್ಲಿ ಅದ್ದದ್ದಿ, ಮುಳುಗೆದ್ದು, ಮಿಂದು ಮಡಿಯಾಗಿದೆ. ಹಸಿವಿನ ಲೋಕ, ವೃಕ್ಷ ವೃತ್ತಾಂತ, ಕೊಲೆಯ ಕೋಗಿಲೆ ಉಲಿದ ಪರಿಯೂ, ಗುರು ಶಿಷ್ಯ ವೃತ್ತಾಂತ, ಲಂಗೋಟಿ ಸೋಮ್ಮಗಳ ವರ್ತಮಾನವೂ, ಸಿವು ಕಪ್ಪಮ್ಮರ ಪ್ರಣಯ ಪಂಚಾಂಗವೂ ಮತ್ತುಕನಸುಗಳು ಕೊಲೆಯಾದ ಮಾಯಪುರವು ಎಂಬ ಅಧ್ಯಾಯಗಳ ಈ ದಂಡಕಾರಣ್ಯ ಕಥೆಗಿಂತ ವರ್ಣನೆಯೇ ಪ್ರಧಾನವಾಗಿರುವ ವರ್ಣನಾತ್ಮಕ ಕಾವ್ಯಕಾದಂಬರಿ. ಇಲ್ಲಿ ಕಥೆ ಗೌಣ, ವಸ್ತು ಅನುಷಂಗಿಕ. ಈ ಕಾದಂಬರಿಯಲ್ಲಿ ಸಮಾಜಿಕ ಸಂಘರ್ಷವನ್ನು ನಾವು ಮೊದಲ ಅಧ್ಯಾಯದಿಂದಲೂ ನೋಡಬಹುದು.

"ಕೆದುರುಗೂದಲ ಬತ್ತಿದ ಚೇತನಕೆ ಬಟ್ಟೆಯಿಲ್ಲಾ, ಹಸಿವು ಮುತ್ತಿದ ಬೆಂಕಿ, ಸಾಗರದಂತ ಏಕಾಂಗಿ ಮಾನವನ ಸಂಗಾತಿಯು ಯಕಶ್ಚಿತ್ ಲಂಗೋಟಿಯು. ಅದಾದರೂ ಹೇನು ಕೂರಾದಿಗಳ ಸಾಗರವು. ಆ ನರಹುಳವಾದುದು ಆಕಾಸ್ಕ ತನ್ನಯ ಬೆನ್ನನು ತಿರುಗ್ಸಿಕೊಂಡು ಮಲಗಿತ್ತು. ಒಂದು ಗಳುಗಾಲಿ ನಿದ್ದಾವು ಬಂದು ಅದರ ಕಣ್ಮುಗ ತುಂಬ್ಕಂಡ್ರ, ಮತ್ತೊಂದು ಗಳುಗಾಲಿ ಆ ನಿದ್ದಾವು ಬಿದ್ದೋಡುತಾ ಬೆದರುತ ಬೆಚ್ಚುತಲಿತ್ತು. ಆ ಅದರ ಜೀವವು ಅರಿಯದಾವುದೋ ಸಂಕಟದಲಿ ಮುಳುಗೇಳುತಿರಲೂ, ಚಣದ ಹಿಂದಲಿ ಚಣವೂ ಸರಿದು ಸರಪಳಿಯಾಗಿರಲೂ, ಕಾಲಕುಲುಮೆಯ ಚೆಂಡಿನಂತಾ ಸೂರ್ಯವು ಪಡುವಲ ದಿಕ್ಕುಗ ತಿರುಗಿ ಮೂಡಲ ದಡವ ತಡುಕ್ತಲಿ ಕತ್ತಲ ಮೋರೆಗೆ ಕೆನ್ನೀರು ಎರಚ್ತಲಿರಲು, ಆಗಲಿಗ ಭೂಮ್ತಾಯ ಎದೆಯ ಬೆಳುಕಾಗಿ, ಕಾಲಪಕ್ಷಿಯೂ ತನ್ನಯ ಏಳು ಬಣ್ಣದ ಏಳು ರೆಕ್ಕಾದಿಗಳ ತೆರೆದು ದಿಕ್ಪಾಲಕರ ತೋಳ್ಗಳ ಮೇಲ ಹಗಲು ರಾತ್ರಿಗಳ ತೇಲಿಸುತಲಿ, ಒಂದು ಗಳುಗಾಲಿ ಬಂದು ಬಣ್ಣವ ತಳೆದೂ ಮತ್ತೊಂದು ಗಳುಗಾಲಿ ಮತ್ತೊಂದು ಬಣ್ಣವ ತೆಳೆದೂ ಚಕ್ರವಾಗುತ್ತಿತ್ತು ಕಾಲವೂ".[೨]

ಈ ರೀತಿ ಕಥೆಯು ನೇರುಳಾಮರ ಮತ್ತು ತಾರಾಮರದಿಂದ ಪ್ರಾರಂಭವಾಗುತ್ತದೆ. ಅಲ್ಲಿ ಬಿದ್ದಿರುವ ಮನುಷ್ಯ ಹಿಂದಿನ ಜೀವನದ ಕತೆ ಹೇಳುತ್ತಾ ಈ ಕಾದಂಬರಿ ಆರಂಭವಾಗುತ್ತದೆ. ಮೊದಲ ಅಧ್ಯಾಯವಾದ 'ಹಸಿವಿನ ಲೋಕ'ದಲ್ಲಿ ಒಬ್ಬ

---

೧. ದಂಡಕಾರಣ್ಯ, ವೃಕ್ಷ ವೃತ್ತಾಂತ, ಪುಟ ೧೫.
೨. ದಲಿತ ಮಾರ್ಗ - ಅ.ಮಾಲಗತ್ತಿ, ಪುಟ ೨೫.

ರಾಜನ ಮಗಳು ವೀರಾಧಿವೀರರನ್ನು ತ್ಯಜಿಸಿ ಭಿಕ್ಷುಕನನ್ನು ಕೂಡುತ್ತಾಳೆ. ನಂತರ ಭಿಕ್ಷುಕ ನಾಪತ್ತೆಯಾಗುತ್ತಾನೆ. ಭಿಕ್ಷುಕ ಹಸಿವಿನಿಂದ ಊಟದ ಸಲುವಾಗಿ ರಾಣಿಯ ಜೊತೆ ಕೂಡುತ್ತಾನೆ. ಇದಾದ ನಂತರ ರಾಣಿ ಒಂದು ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಇದಾದ ಎಷ್ಟೋ ವರ್ಷಗಳ ನಂತರ ಆ ಭಿಕ್ಷುಕ ಒಬ್ಬ ಜೋಗಿಯಾಗಿ ಕಾಣಿಸಿಕೊಳ್ಳುತ್ತಾನೆ. ಯುವರಾಣಿ ಇವನೇ ನನ್ನ ಪತಿ ಎಂದಾಗ, ರಾಜನು ಇದನ್ನು ಸಹಿಸುವುದಿಲ್ಲ. ಆ ಭಿಕ್ಷುಕ ಅಂದರೆ, ಜೋಗಿ ಅಷ್ಟು ಪ್ರಭಾವಶಾಲಿಯಾದರೂ ಕೀಳುಜಾತಿಯವನೆಂಬ ಒಂದೇ ಕಾರಣಕ್ಕಾಗಿ ಅವನ ರುಂಡವನ್ನು ಚೆಂಡಾಡುತ್ತಾರೆ. ಈ ಘಟನೆಯಿಂದಲೇ ನಮಗೆ ಅರಿವಾಗುತ್ತದೆ, ಜಾತಿ ಎಂಬ ಮುಳ್ಳು ಶತ-ಶತಮಾನಗಳಿಂದಲೂ ಎಷ್ಟು ಪ್ರಾಣವನ್ನು ಬಲಿ ತೆಗೆದುಕೊಂಡಿದೆ ಎಂದು.

ಒಂದೊಂದು ಅಧ್ಯಾಯದ ನಂತರ 'ವೃಕ್ಷ ವೃತ್ತಾಂತ', 'ಕೊಲೆಯ ಕೋಗಿಲೆಯು ಉಲಿದ ಪರಿಯೂ' ಕಥಾಭಾಗ ಮುಂದುವರೆಯುತ್ತದೆ. ಗುರುಶಿಷ್ಯ ವೃತ್ತಾಂತದಲ್ಲಿ ಜಾತಿಯ ಕಾರಣದಿಂದ ಗುರು-ಶಿಷ್ಯರ ನಡುವಣ ಕಲಹ ಉಂಟಾಗುತ್ತದೆ. ಮುಂದೆ ಬರುವ ಲಂಗೋಟಿ ಸೋಮ್ಮಗಳಯಿಂದ ಆಧುನಿಕ ಕಾಲದ ಕಥೆಯು ತಿರುವು ಪಡೆಯುತ್ತದೆ. ಈ ಸ್ವಾಮೀಜಿ ಎಲ್ಲಾ ಜಾತಿಯವರಿಗೆ ಬೇಕಾದವನೆ, ಹಾಗೆ ಎಲ್ಲರಿಗೂ ಮಂಕುಬೂದಿ ಹಾಕಿರುತ್ತಾನೆ. ಹಳ್ಳಿಯ ಎಲ್ಲಾ ಜನರ ಜಮೀನುಗಳನ್ನು ಆಕ್ರಮಿಸಿಕೊಂಡಿರುತ್ತಾನೆ.

ಊರಿನಲ್ಲಿ ಪ್ರಸಿದ್ಧಿ ಹೊಂದಿದ್ದ ಈ ಸ್ವಾಮೀಜಿಯನ್ನು ಊರಿನವರೆಲ್ಲಾ ಆ ಜೋಗಿ ಈ ಲಂಗೋಟಿ ಸೋಮ್ಮಗಳಂದು, ಈಗ ಈ ರೂಪ ತಾಳಿರುವನೆಂದು ಎಲ್ಲರೂ ನಂಬುತ್ತಾರೆ. ಈ ಸೋಮ್ಮಗಳ ಕಾಲನ್ನು ತೊಳೆಯಲು ಊರ ಜನರು ಹಿಂಜರಿಯುತ್ತಾರೆ. ಇದರಿಂದ ಜಾತಿ ಎಂಬ ಬೆಂಕಿಯು ಕೇರಿ-ಕೇರಿಯೊಳಗೂ ಹುಟ್ಟಿತು. ಕುಲಜಾತಿಗಳ ಸೆರಗಿನೊಳಗೆ ಬೆಂಕಿಯು ಬೆಳೆಯತೊಡಗಿತು. ಊರುಗೆ ಬಂದಾ ಬೆಂಕಿಯು ಸುತ್ತಿಕೊಂಡು ಊರು ದಂಡಕಾರಣ್ಯವಾಯಿತು. ಇದಾದ ನಂತರ ಸಾಮಾಜಿಕ ಸಂಘರ್ಷಗಳು 'ಸಿವುಕಪ್ಪಮ್ಮರ ಪ್ರಣಯ ಪಂಚಾಂಗವೂ' ಅಧ್ಯಾಯದಲ್ಲಿ ಮುಂದುವರೆಯುತ್ತವೆ.

ಮಾಯಪುರ ಎಂಬ ಹಳ್ಳಿಗೆ ಬಂದ ಸಿವಣ್ಣ ಒಂದು ಚಿಕ್ಕ ಕೆಲಸ ಮಾಡಿಕೊಂಡು ಹಾಸ್ಟೆಲ್‌ನಲ್ಲಿ ಇರುತ್ತಾನೆ. ಸಿವು-ಕಪ್ಪಮ್ಮರ ಸ್ನೇಹ ಬೆಳೆದು ಪ್ರೀತಿಯಾಗುತ್ತದೆ. ಕಪ್ಪಮ್ಮ ಮೇಲ್ಜಾತಿಯವಳು. ಸಿವು ಹೊಲಾರನು. ಇವರಿಬ್ಬರಿಂದ ಊರೆಲ್ಲಾ ಜಗಳ ರಂಪವಾಗುತ್ತದೆ. ಆದರೂ 'ದಲಿತ ಸಂಘರ್ಷ ಸಮಿತಿ'ಯ ಸಹಾಯದಿಂದ ಮದುವೆಯಾಗಿ ದೂರದಲ್ಲಿ ನೆಲೆಸುತ್ತಾರೆ. ಇವರ ನಂತರ ಬರುವ

ಆರ್.ಎಸ್.ಎಸ್. ಸದಸ್ಯರು ಪ್ರಸನ್ನಕುಮಾರ್ ಹೊಲಾರನೊಂದಿಗೆ ವಾದ ವಿವಾದಕ್ಕೆ ಇಳಿಯುತ್ತಾರೆ. ಆರ್.ಎಸ್.ಎಸ್. ನವರು ಪರಿಚಯ ಮಾಡಿಕೊಂಡ ನಂತರ –

"ಆಯ್ತು ಮಾಸೋಮ್ಗಳ ಎಲ್ರುಗೂ ನಮಸ್ಕಾರ. ನನ್ನೆಸುರು ಪ್ರಸನ್ನಕುಮಾರ್ ಹೊಲಾರ" ಇದನ್ನು ಕೇಳಿ ಆರ್.ಎಸ್.ಎಸ್.ನವರು ಕಸಿವಿಸಿಗೊಂಡವರಾಗಿ ರಾಮರಾವ್ ಎಂಬುವನು ಇದೇನು ಜಾತಿ ಹೆಸರು ಇಟ್ಟುಕೊಂಡಿದ್ದೀರಲ್ಲ? ಎನ್ನುತ್ತಾನೆ. ಇದಕ್ಕೆ ಪ್ರಸನ್ನಕುಮಾರ್ ನೀವೂ ಅದೇ ತಾನೆ ಮಾಡಿಕೊಂಡಿರುವುದು ಎನ್ನುತ್ತಾನೆ. ಇವರ ಈ ಚರ್ಚೆ ಸ್ವಾರಸ್ಯಕರವಾಗಿದೆ. ಒಂದು ಹಂತದಲ್ಲಿ ರಾಮಧ್ಯಾನ ಚರಿತೆಯಂತೆ ಇದೊಂದು ರೂಪಕ ಕೃತಿಯಾಗಿ ಮೈ ತೆರೆದುಕೊಂಡಿರುವ ಧ್ವನಿರಮ್ಯ ಗದ್ಯ ಕಾವ್ಯವಾಗಿದೆ. ಏಕೆಂದರೆ, ಈ ಕಾದಂಬರಿ ಮಾತನಾಡುವುದೇ ರೂಪಕಗಳಲ್ಲಿ, ಮೈದೋರುವುದೇ ಪ್ರತಿಮೆಗಳಲ್ಲಿ.

ಇಲ್ಲಿ ನಾವು ಮುಳ್ಳೂರು ನಾಗರಾಜರ ಜೀವನ ಸಂಘರ್ಷವನ್ನು ಈ ಕಾದಂಬರಿಯಲ್ಲಿ ಕಾಣಬಹುದಾಗಿದೆ. ಯಾಕೆಂದರೆ, ಅವರ ಇಡೀ ಕಾದಂಬರಿಯ ತಳಪಾಯವೇ ಇದು, ಜೀವನವನ್ನು ಗ್ರಹಿಸುವ ವಿಧಾನ. ಅವರ ಬದುಕನ್ನು ನೋಡುವಿಕೆಯು ಇಲ್ಲಿ ಅಡಕವಾಗಿದೆಯಾಗಿ ಅವರ ಉತ್ತರಗಳನ್ನು ಕೃತಿಯ ಬಂಧದಲ್ಲಿಯೇ ಹುಡಕಬೇಕು. ಹೆಣ್ಣು, ಹೊನ್ನು, ಮಣ್ಣು ಈ ಮೋಹಜಾಲದಲ್ಲಿ ಸಿಗುವ ಮನುಷ್ಯನ ಮನಸ್ಸು ವಿಲಿ–ವಿಲಿ ಒದ್ದಾಡುವ ಭ್ರಾಂತಿಗಳ ಬಿಡಿಸಿರುವುದು ಕುಶಲತೆಯು ಚಿತ್ತಾರವಾಗಿದೆ. ನಗುತಾ, ಬೀಗುತಾ ಕಸಮುಸುರೆಗಳಿಲ್ಲದ ಊರೊಂದು ಯಾವುದೋ ಗಳಿಗೇಲಿ ಅಪರಂಜಿಯ ಆಸೆ, ಅದಕೆ ಅತ್ಕೊಂಡು ಅದೇಯ ಕಡೆಗೆ ದಂಡಕಾರಣ್ಯವಾದ ಘಟನೆ ಆಕಾರ ಪಡೆದುಕೊಳ್ಳುವುದನ್ನು ಅದರಲ್ಲಿ ಗರೆಗೀರು, ನರನಾಡಿ, ಬಿಸಿಯುಸಿರು, ತಾಕಲಾಟ, ರಕ್ತ ಸಂಚಾರ ಸಹಿತ ಕಡೆದಿಟ್ಟಿರುವುದು ಈ ಕಾದಂಬರಿಯ ವಿನ್ಯಾಸ. ಇಲ್ಲಿ ಹೆಚ್ಚಾಗಿ ಅಂತರಜಾತಿಗಳ ವಿವಾಹಗಳಾಗುವುದು, ಅದರೊಂದಿಗಿನ ಸಂಘರ್ಷವು ಇದೆ. ಪ್ರಸನ್ನಕುಮಾರ್ ಹೊಲಾರನು ಇದೇ ಕೆಲಸ ಮಾಡಿ ಮುದ್ದಾದ ಮಗುವಿನ ತೊದಲು ನುಡಿಯೊಂದಿಗೆ ಕೊನೆಗೊಳ್ಳುವ ಪರಿ ಹೊಸ ತಲೆಮಾರಿನವರ ಜೀವನ ಕ್ರಮಕ್ಕೆ ಸ್ವಾಗತಾರ್ಹವಾಗಿವೆ. ಇದಲ್ಲದೆ ಮುಳ್ಳೂರರ ಆತ್ಮಚರಿತ್ರೆಯಾದ 'ಮಾಮರದ ಮೇಲೊಂದು ಕೋಗಿಲೆ'ಯಲ್ಲಿಯೂ ಅನೇಕ ಅಧ್ಯಾಯಗಳಲ್ಲಿ ಸ್ವತಃ ಮುಳ್ಳೂರರು ಕಂಡಂತೆ ಅಂತರಜಾತಿ ಪ್ರೇಮವಿವಾಹ ಸಂಗತಿಗಳು, ಅದರಿಂದಾಗುವ ಕೊಲೆ, ಅವಮಾನ, ಜಾತಿಗಳ ಕೋಲಾಹಲಗಳು ಹೆಚ್ಚಾಗಿ ಕಾಣಬಹುದು. ಸ್ವತಃ ಲೇಖಕರೇ 'ಭಾಮಿನಿಯ ಸಖ್ಯದಲ್ಲಿ' ಎಂಬ ಅಧ್ಯಾಯದಲ್ಲಿ ತಮಗಾದ ಪ್ರೀತಿಯ ಕಹಿಯನುಭವವನ್ನು ಹೇಳಿಕೊಂಡಿದ್ದಾರೆ. ಮೊದಲು ಪ್ರೀತಿಸಿ, ಒಂದಾದ ಮೇಲೆ ಜಾತಿಯನ್ನು ತಿಳಿದು, ಹಾವು ತುಳಿದವರಂತಾಗಿ ಆಡುವ ಪ್ರೇಯಸಿಯನ್ನು ಅವರು

ತಿರಸ್ಕರಿಸುತ್ತಾರೆ. ಅದಲ್ಲದೆ, ಅವರು ಹಾಸ್ಟೆಲ್‌ನಲ್ಲಿ ಇದ್ದಾಗ, ಮೇಲ್ಜಾತಿ ಹುಡುಗಿಯನ್ನು ಪ್ರೀತಿಸಿದ್ದಕ್ಕೇ, ಆ ಹುಡುಗಿಯ ತಂದೆ ಅವಳನ್ನು ಕೊಲೆ ಮಾಡಿಸುತ್ತಾನೆ. ಇಂಥ ಕ್ರೂರ ವರ್ತನೆಯಿಂದ ಪ್ರೀತಿಸಿದ ಹುಡುಗ ಹುಚ್ಚನಾಗುತ್ತಾನೆ. ಇಂತಹ ಕೆಲವು ಪ್ರಕರಣಗಳನ್ನು ತಮ್ಮ ಆತ್ಮ ಚರಿತ್ರೆಯಲ್ಲಿ ಹೇಳಿದ್ದಾರೆ.

ಕಥಾ ಸಂಕಲನವಾದ 'ಸಿಂಗಳೀಕ'ದಲ್ಲೂ ಇಂತಹ ಪ್ರಸಂಗಗಳನ್ನು ನಾವು ಹೆಚ್ಚಾಗಿ ಗಮನಿಸಬಹುದು. ಸಾಮಾನ್ಯರ ಚಿತ್ರವನ್ನು ಕಟ್ಟಿಕೊಡುವ 'ಸಿಂಗಳೀಕ'ದ ಕಥೆಗಳು ಅತೀ ಭಾವುಕತೆಯಿಂದ ನರಳುವುದಿಲ್ಲ. ಹಾಗೆ ಹುಸಿ ಬಂಡಾಯವನ್ನು ಹಸಿಹಸಿಯಾಗಿ ನಮ್ಮ ಮುಂದಿಡುವುದಿಲ್ಲ. ವ್ಯಂಗ್ಯ ವಿಷಾದಗಳನ್ನು ತನ್ನ ಒಡಲಲ್ಲಿಟ್ಟುಕೊಂಡಿರುವ ಈ ಕಥೆಗಳು ಸಾಮಾನ್ಯರಿಗೆ ಒದಗುವ ಶೋಷಣಾ ಸ್ಥಿತಿಯನ್ನು ಅವರ ಪ್ರತಿಭಟನೆಯ ಕಾವನ್ನು ತಣ್ಣನೆ ನಿರೂಪಿಸುತ್ತದೆ. ದಲಿತ ಬದುಕಿನಲ್ಲಿ ಹೆಡೆಯಾಡಿಸುವ ಪಟ್ಟಭದ್ರ ಹಿತಾಸಕ್ತಿ, ಅಜ್ಞಾನ, ವಿವೇಚನಾ ರಹಿತ ನಡವಳಿಕೆಗಳನ್ನು ಲೇಖಕರು ಕೆಲವು ಕಥೆಗಳಲ್ಲಿ ದಾಖಲಿಸುತ್ತಾರೆ. 'ಓ ದೇವರೇ ಇವರನ್ನು ಕಾಪಾಡು' ಕಥೆಯನ್ನು ಈ ದೃಷ್ಟಿಯಿಂದ ಪರಿಶೀಲಿಸಬಹುದು. ದುರಂತ ಹಾಗೂ ವಿಷಾದಗಳು ಸ್ಥಾಯಿಭಾವವಾಗಿ ಇಡೀ ಸಂಕಲನದಲ್ಲಿ ಕಂಡುಬರುತ್ತದೆ. 'ಉಮ್ಮಳ' ಕಥೆಯಲ್ಲಿ ಬರುವ ಶಂಕರ, ಕೊನೆ ಮನೆಯಾಕೆಗೆ ದಿನ ತಂದುಕೊಡುತ್ತಿದ್ದ ಕಾಯಿಚೂರನ್ನು ಒಂದು ದಿನ ಕಚ್ಚಿ ತಿಂದಿದ್ದಾಗ, ಆ ಮನೆಯಾಕೆ ಅದನ್ನು ಅವನಿಗೆ ಹಿಂತಿರುಗಿಸಿ, ಈ ರೀತಿ ಮಾಡಬಾರದೆಂದು ಹೇಳುತ್ತಾಳೆ. ಆದರೆ, ಶಂಕರ ಕಾಯಿಚೂರನ್ನು ತಿನ್ನದೇ, ದಿನಾ ನಾಲಗೆಯಿಂದ ನೆಕ್ಕುತ್ತಿರುತ್ತಾನೆ. ಇದು ಅವನಿಗೆ ಮೋಜಿನ ಸಂಗತಿಯಾಗಿರುತ್ತದೆ. ಇದೇ ಶಂಕರ ಹಾಸ್ಟೆಲ್‌ನಲ್ಲಿ ಓದಿಕೊಂಡು ಒಳ್ಳೆಯ ಹುಡುಗನಾಗಿರುತ್ತಾನೆ. ಇವನೇ ಮುಂದೊಂದಿನ ಒಂದು ಹುಡುಗಿಯನ್ನು ಗಾಢವಾಗಿ ಪ್ರೀತಿಸುತ್ತಾನೆ. ರೋಹಿಣಿ ಮತ್ತು ಶಂಕರ ಬೇರೆ ಬೇರೆ ಜಾತಿಯವರೆಂಬ ಕಾರಣಕ್ಕಾಗಿ ಅವರ ಮೇಷ್ಟ್ರೇನೇ ನೀವಿಬ್ಬರೂ ಅಣ್ಣ ತಂಗಿಯಾಗಿರುತ್ತೇವೆಂದು ಮಾತು ಕೊಡಿ ಎಂದು ಕೇಳಿದಾಗ, ಆಲದ ಮರವೇ ಶಂಕರನ ಮೇಲೆ ಬಿದ್ದಂತಾಗುತ್ತದೆ. ಮುಂದೆ ಅವರು ಹಾಗೆಯೇ ಇರುತ್ತಾರೆ. ಜಾತಿಯಿಂದ ಕಲಹವಾಗಬಹುದೆಂಬ ಕಾರಣದಿಂದ ಇಬ್ಬರನ್ನೂ ದೂರ ಮಾಡುತ್ತಾರೆ.

'ಓ ದೇವರೇ ಇವರನ್ನು ಕಾಪಾಡು' ಕಥೆಯಲ್ಲಿ ದಲಿತ + ದಲಿತರೇ ಜಾತಿಗೋಸ್ಕರ ಹೋರಾಡುವುದು. ಕೆಲವು ದಲಿತರು ಕ್ರಿಶ್ಚಿಯನ್ ಮತಕ್ಕೆ ಹೊಂದಿರುತ್ತಾರೆ. ಈ ಮತಾಂತರ ಹೊಂದಿದ್ದವರಿಗೆ ಅಕ್ಕಿ, ಬೇಳೆ, ಮಕ್ಕಳಿಗೆ ವಿದ್ಯಾಭ್ಯಾಸ ಎಲ್ಲವೂ ಉಚಿತವಾಗಿರುತ್ತದೆ. ಇದರಿಂದ ಎಷ್ಟೋ ದಲಿತರು ಮತಾಂತರ ಹೊಂದಿರುತ್ತಾರೆ. ಇಲ್ಲಿನ ದಲಿತರ ಮಾರಿಗುಡಿ, ಕ್ರೈಸ್ತರ ಚರ್ಚು ಪುರಾತನವಾದದ್ದು. ಚರ್ಚಿನ ರೂವಾರಿ ಪ್ರೇಮಾ ಎಂಬುವಳು. ಅವಳ ಚೆಲುವಿಗೆ ಮರುಳಾಗಿ ಅನೇಕ

ದಲಿತರು ಮತಾವಲಂಬಿಗಳಾದರು. ಈ ಊರಿನ ಯುವ ಜನಾಂಗವು ಮೂಲಬೇರುಗಳಿಂದ ತಮ್ಮನ್ನು ತಾವು ಪ್ರತ್ಯೇಕಿಸಿಕೊಳ್ಳಲು ಹಾತೊರೆಯುತ್ತಿದ್ದವು. ಹೀಗೆ ದಲಿತರು ಕ್ರೈಸ್ತರ ವಿರುದ್ಧ ಅಯ್ಯಪ್ಪ ಸ್ವಾಮಿ ವೇಷ ಹಾಕಿದರು. ನಂತರ ಇಬ್ಬರಲ್ಲೂ ಜಗಳ ಉಂಟಾಗಿ, ಎಲ್ಲರನ್ನೂ ಪೋಲೀಸರು ಬಂಧಿಸಿದರು. ಕ್ರೈಸ್ತರನ್ನು ಪ್ರೇಮಾ ಬಿಡಿಸಿದಳು, ನಂತರ ದಲಿತರನ್ನು ಬಿಡುಗಡೆಗೊಳಿಸಿದಳು. ಇದರಿಂದ ತಿಳಿಯುತ್ತದೆ, ಯಾವ ಜಾತಿ ಆದರೂ ಮಾನವೀಯತೆ ಮುಖ್ಯ ಎಂಬುದು. "ರೋಗಗ್ರಸ್ತ" ಎಂಬ ಕಥೆಯಲ್ಲಿ ಕಡು ಬಡವನಾಗಿದ್ದ ತಮ್ಮಯ್ಯನನ್ನು ದಲಿತನಾದ ಇವನನ್ನು ಮೇಲ್ಜಾತಿಯವರು ಚುನಾವಣೆಗೆ ನಿಲ್ಲಿಸಿ ಸದಸ್ಯನನ್ನಾಗಿ ಮಾಡುತ್ತಾರೆ. ಆದರೆ, ಇವನು ಯಾವುದೋ ಜಯಮ್ಮ ಎಂಬ ಹೆಂಗಸಿನೊಡನೆ ಸಂಬಂಧವಿಟ್ಟುಕೊಳ್ಳುತ್ತಾನೆ. ಅಪಾರ ಹಣವಿದ್ದುದರಿಂದ ಜಾತಿಯ ಸಮಸ್ಯೆ ಇಲ್ಲಿ ಕಾಣುವುದಿಲ್ಲ. ಕೊನೆಗೆ ಇವನಿಗೆ ಏಡ್ಸ್ ರೋಗ ಎಂದು ತಿಳಿದಾಗ ಅವನ ಹೆಂಡ್ತಿ, ಮಕ್ಕಳ ಆಶ್ರಯಕ್ಕೆ ಹೋಗುತ್ತಾನೆ. ಕೊನೆಗೆ ಪಶ್ಚಾತ್ತಾಪ ಪಡುತ್ತಾನೆ. ಇಲ್ಲಿ ತಮ್ಮಯ್ಯನ ಸುಧಾರಣೆ, ಪ್ರೇಮ, ಉದಾರ ಮನಸ್ಸು ಎಲ್ಲವನ್ನೂ ನೋಡಬಹುದಾಗಿದೆ.

'ಗದ್ಯ ಕವಿಯ ಬಾಲ್ಯ' ಕಥೆಯಲ್ಲೂ ಗದ್ಯಕವಿಯ ತಂದೆ ಮಹಾ ಕ್ರೂರಿಯಾಗಿರುತ್ತಾನೆ. ಎಲ್ಲಾ ಹೆಣ್ಣು ಮಕ್ಕಳನ್ನು ಕಾಮದೃಷ್ಟಿಯಿಂದ ನೋಡುವ ಈತನಿಗೆ ಕೊನೆಯಲ್ಲಿ ತಕ್ಕ ಶಿಕ್ಷೆಯೂ ಆಗಿರುತ್ತದೆ. ಇದರ ಪರಿಣಾಮ ಅವನ ಮಗನಾದ ಗದ್ಯಕವಿಯ ಮೇಲಾಗುತ್ತದೆ.

ಈ ಗದ್ಯಕವಿ ಅಪ್ಪನ ಕಳ್ಳನ ಮೋಸದಿಂದ ಬೇರೆಯವರ ಬಳಿ ಆಶ್ರಯ ಪಡೆಯುತ್ತಾನೆ. ಇವನೂ ದಲಿತನಾದ್ದರಿಂದ ಮೇಲ್ಜಾತಿಯವರ ಸ್ನೇಹವನ್ನು ಗಳಿಸುತ್ತಾನೆ. ಅವರ ಜೊತೆಯೂ ಇದ್ದು, ಅವರಂತೆ ಒಳ್ಳೆಯ ರೀತಿಯಲ್ಲಿ ಇರುತ್ತಾನೆ. ಆದರೆ, ಇವನು ಪ್ರೀತಿಸಿದ ಹುಡುಗಿಯರು ಜಾತಿಯ ಕಾರಣದಿಂದ ಬಹುದೂರ ಉಳಿಯುತ್ತಾರೆ. ಅವನು ದಲಿತನಾಗಿ ಹುಟ್ಟಿದ್ದೇ ಮಹಾ ತಪ್ಪು ಎಂಬಂತೆ ವರ್ತಿಸುತ್ತಾನೆ.

ಈ ಗದ್ಯಕವಿ ವಾಣಿ ಎಂಬ ಹುಡುಗಿಯನ್ನು ಪ್ರೀತಿಸುತ್ತಾನೆ. ಆದರೆ, ಅವಳು ಇವನನ್ನು ಮದುವೆಯಾಗುವುದಿಲ್ಲ. ಆಗ ಗದ್ಯಕವಿಯ ಸ್ನೇಹಿತ ನೀವು ಅವಳನ್ನು ರೇಪ್ ಮಾಡಬೇಕಿತ್ತು ಅಂದಾಗ, "ದಲಿತರಿಗೆ ರೇಪ್ ಮಾಡುವ ಸ್ವಾತಂತ್ರ್ಯವೆಲ್ಲಿದೆ" ಎನ್ನುತ್ತಾನೆ ಅಸಹಾಯಕನಾಗಿ.

ಈ ರೀತಿ ಮುಳ್ಳೂರು ನಾಗರಾಜುರವರ ಕಥೆ, ಕಾದಂಬರಿಗಳು ಮತ್ತು ಆತ್ಮಚರಿತ್ರೆಯಲ್ಲಿ ಜಾತಿಯೇ ಪ್ರಮುಖವಾಗಿ, ಕಲಹಕ್ಕೆ ಕಾರಣವಾಗಿರುವ ಪ್ರಸಂಗಗಳನ್ನೂ ನಾವು ಇಲ್ಲಿ ವಿಸ್ತೃತವಾಗಿ ನೋಡಬಹುದಾಗಿದೆ.

ಹಸಿವು ಮತ್ತು ಬಡತನ

ಮುಳ್ಳೂರು ನಾಗರಾಜರ ಕಥೆ, ಕಾದಂಬರಿಯ ಮೂಲ ವಸ್ತು ಹಸಿವು, ಬಡತನ ಮತ್ತು ಅವಮಾನ ಎಂದರೆ ಅತಿಶಯೋಕ್ತಿಯಾಗುವುದಿಲ್ಲ. ಇದನ್ನು ನಾವು ಅವರ ಮೊದಲ ಕಾದಂಬರಿ 'ಮರಣ ಮಂಡಲ ಮಧ್ಯದೊಳಗೆ' ಕಾದಂಬರಿಯಲ್ಲಿ ಕೂಲಂಕುಷವಾಗಿ ಕಾಣಬಹುದು. ಇಲ್ಲಿ ಬರುವ ಮಾಳುಗಮ್ಮ ಮತ್ತು ರಾಕಾಸಿ ಮತ್ತು ಹೊಲಾರ ಸಂಗರ ಪಾತ್ರಗಳ ಮೂಲಕ, ಬಸವರಾಜು, ರಂಗ-ರಂಗಿ, ಕೆಂಚಿ ಮುಂತಾದವರ ಹಸಿವಿನ ಕಥೆ ಬಿಚ್ಚಿಕೊಳ್ಳುತ್ತಾ ಸಾಗುತ್ತದೆ.

ಯಾವಾಗಲೂ ಹಸಿವು-ಬಡತನ ಜೊತೆಯಲ್ಲಿ ಇರುತ್ತವೆ. ಹಸಿವು ಬೇರೆ-ಬೇರೆ ಅರ್ಥದಲ್ಲೂ ಇದ್ದರೂ, ಈ ಲೇಖಕರ ದೃಷ್ಟಿಯಲ್ಲಿ ಹೊಟ್ಟೆ ಹಸಿವು ಆಗಿದೆ. 'ಯಶೋಧರ ಚರಿತೆ'ಯ ಅಮೃತಮತಿ ಮತ್ತು ಅಷ್ಟಾವಂಕರನ ಪ್ರಸಂಗದಂತೆ ಮಾಳುಗಮ್ಮ, ಹೋಲಾರ ಸಂಗ ಪಾತ್ರ ಚಿತ್ರಿತವಾಗಿದೆ. ಹೊಲಾರ ಸಂಗನಿಗೆ ಕಡುಬಡತನವಿದ್ದರೂ, ಕಂಠಸಿರಿ ಶ್ರೀಮಂತವಾಗಿರುತ್ತದೆ. ಇದರಿಂದ ಮಾಳುಗಮ್ಮ ಮರುಳಾಗಿ ಅವನಿಗೆ ಸೋಲುತ್ತಾಳೆ. ಮುಂದೆ ಇವಳು ಮಗುವಿಗೆ ಜನ್ಮ ನೀಡಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಮಗುವನ್ನು ರಾಕಾಸಿಯು ಸಾಕಿ ಸಲಹುತ್ತಾಳೆ. ಇದಾದ ೧೫೦ ವರುಷಗಳ ನಂತರ ಇದೇ ಕಾಡೂರಲ್ಲಿ ಇಂತಹ ಪ್ರಸಂಗಗಳೇ ನಡೆಯುತ್ತವೆ. ಅದರಲ್ಲಿ ಬಸವರಾಜುವಿನ ಪಾತ್ರ ಅತೀ ಮುಖ್ಯವಾಗಿದೆ. ಇವನೂ ತನ್ನ ಹೊಟ್ಟೆಪಾಡಿಗಾಗಿ ರೌಡಿಯಾಗಿರುತ್ತಾನೆ. ಇವನು ದಲಿತನಾದರೂ ಮೇಲ್ಜಾತಿಯವರಿಗೆ ಇವನು ಹೆದರುತ್ತಿರಲಿಲ್ಲ. ಕಾಡೂರಿನ ಸಿದ್ಧಿ ಎಂಬಾಕೆಯನ್ನು ಗೌಡರ ಮಗ ಚಂದ್ರಪ್ಪ ದುಡ್ಡು ಕೊಟ್ಟು ಅವಳನ್ನು ಉಪಯೋಗಿಸುತ್ತಾನೆ. ಇದಕ್ಕೆ ಮೂಲ ಕಾರಣ ಸಿದ್ಧಿಯ ಬಡತನ ಮತ್ತು ಹಸಿವು. ಇದನ್ನು ಪ್ರತಿರೋಧಿಸಿದ ಬಸವರಾಜುಗೆ ಸಿದ್ಧಿಯ ಮೌನವೇ ಉತ್ತರವಾಗಿರುತ್ತಿತ್ತು. ಸಿದ್ಧಿಗೆ ದಿನದ ಕೂಲಿ ೧ ರೂ. ಅಥವಾ ೨ ರೂ.ಸಿಗುವುದು ಹೆಚ್ಚು. ಇದರಿಂದ ಒಂದು ಹೊತ್ತಿನ ಊಟ ಸಿಗುವುದೇ ಕಷ್ಟದ ಕೆಲಸವಾದ್ದರಿಂದ, ಸಿದ್ಧಿಯು ಈ ಕೆಲಸಕ್ಕೆ ಸಮ್ಮತಿಸುತ್ತಾಳೆ. ಹಸಿವು ಎಂತಹ ಕೆಲಸವನ್ನೂ ಮಾಡಿಸುತ್ತದೆ ಎಂಬುದಕ್ಕೆ ಜೀವಂತ ಸಾಕ್ಷಿ ಎನ್ನಬಹುದು.

ಅನೇಕ ವರ್ಷಗಳ ಮಾನವನ ಬದುಕು ಈ ಕಾದಂಬರಿಯ ಕಥಾವಸ್ತು. ಈ ಕಾದಂಬರಿಯುದ್ದಕ್ಕೂ ಅವಮಾನ, ಬಡತನ, ಮೇಲುಜಾತಿ, ಕೀಳುಜಾತಿ, ದ್ವೇಷ, ಅಸೂಯೆ, ಕಾಮನೆಗಳನ್ನು ಕಾಣಬಹುದು. ಬಸವರಾಜು ಈ ಜಾತಿ ವ್ಯವಸ್ಥೆಯನ್ನು ವಿರೋಧಿಸುತ್ತಾನೆ. ಜಾತಿಗಳ ಹುಟ್ಟಿನ ಬಗ್ಗೆ ತೊಳಲಾಟ ಹೆಚ್ಚಾಗುತ್ತದೆ. ಟೀ ಅಂಗಡಿಯಲ್ಲಿ ನಡೆಯುವ ಪ್ರಸಂಗವು ಇದಕ್ಕೆ ನಿದರ್ಶನ. ಬಸವರಾಜು ತನ್ನ ಹೊಟ್ಟೆಪಾಡಿಗಾಗಿ ಕಳ್ಳತನ, ಮೋಸ ಮಾಡುವಂತವನಾದರೂ, ಬೇರೆಯವರ ತಂಟೆಗೆ

ಹೋಗುವವನಲ್ಲ. ಆದರೆ, ತನ್ನ ಜಾತಿಯ ಹೆಣ್ಣಾದ ಕೆಂಚಿಯನ್ನು ಪಟೇಲರ ಮಗನನ್ನು ಥಳಿಸಿ ಅವನೆದುರಿಗೆ ಅವನ ಹೆಂಡ್ತಿಯನ್ನು ಅತ್ಯಾಚಾರಗೈಯುತ್ತಾನೆ. ಮುಯ್ಯಿಗೆ ಮುಯ್ಯಿ ಇವನ ಪಾಲಿಸಿ. ಆದರೆ ಎಂದಿಗೂ ಅವನು ತನಗೋಸ್ಕರ ಈ ಕೆಲಸ ಮಾಡಿಲ್ಲ. ಬಡತನದ ಕಿಚ್ಚು ಈ ಕೆಲಸ ಮಾಡಿಸುತ್ತದೆ. ಸ್ವಜಾತಿ ರಂಗ-ರಂಗಿಯೂ ಸಹ ತಮ್ಮ ಬಡತನದಿಂದಲೇ ಪ್ರೀತಿಸುತ್ತಾರೆ. ಆದರೆ ರಂಗ ಮೋಸ ಮಾಡುತ್ತಾನೆ. ರಂಗ-ರಂಗಿಯ ಕೇಸು 'ದಲಿತ ಸಂಘರ್ಷ ಸಮಿತಿ'ಯವರು ಬಂದು ತೀರ್ಮಾನ ಮಾಡುವಷ್ಟು ಮುಂದುವರೆಯುತ್ತದೆ. ಅಲ್ಲೂ ರಂಗಿ ಹೇಳುವುದು ತನ್ನ ಬಡತನ ಮತ್ತು ಹಸಿವು. ನಂತರ ೨ ಸಾವಿರ ವರದಕ್ಷಿಣೆ ಕೊಡುವುದರ ಮೂಲಕ ಸಮಸ್ಯೆಗೆ ಪರಿಹಾರ ಸಿಗುತ್ತದೆ. ಆ ದುಡ್ಡಿನ ಭಾರ ಬಸವರಾಜುವಿಗೆ ಬೀಳುತ್ತದೆ.

ಆಗಲೇ ಬಸವರಾಜುವಿನ ಜೀವನದಲ್ಲಿ ಒಂದು ಬದಲಾವಣೆ ಉಂಟಾಗುತ್ತದೆ. ಆ ದುಡ್ಡನ್ನು ಸಂಪಾದಿಸಲು ಹೊರಟಾಗ 'ದಲಿತ ಸಂಘರ್ಷ ಸಮಿತಿ' (ಡಿ.ಎಸ್.ಎಸ್)ಯ ಪರಿಚಯವಾಗಿ ಈ ಸಂಘಕ್ಕೆ ಸೇರಿಕೊಳ್ಳುತ್ತಾನೆ. ರೌಡಿಯಾದವನ ದಿಕ್ಕನ್ನು ಈ ಸಂಘ ಬದಲಾಯಿಸುತ್ತದೆ. ಹಸಿವು, ಬಡತನದ ಅಳಿವಿಗಾಗಿ ತನ್ನ ಜೀವನವನ್ನೇ ಮುಡಿಯಾಗಿಡುತ್ತಾನೆ. ಹಾಗೆ ನಂಜನಗೂಡಿನ ಹತ್ತಿರ ಯಡಿಯಾಲದಲ್ಲಿ ಆದ ಪ್ರೇಮ ಪ್ರಸಂಗವನ್ನು ಬಸವರಾಜು ಬೆಂಬಲಿಸುತ್ತಾನೆ. ಹೀಗೆ ಅನೇಕ ಅವಮಾನಗಳಿಂದ ಬೇಸತ್ತರೂ, ದಲಿತ ಸಂಘರ್ಷ ಸಮಿತಿಯ ನೀತಿ ನಿಯಮಗಳಿಂದ ದೂರವಿರಲಿಲ್ಲ, ಎಲ್ಲಾ ರೀತಿಯ ಒಳ್ಳೆಯ ಕೆಲಸಗಳನ್ನು ಬಸವರಾಜು ಮಾಡಿದ. ದಂಡಕಾರಣ್ಯ ಕಾದಂಬರಿಯಲ್ಲಿ ಹಸಿವು ಮತ್ತು ಬಡತನದ ತೀವ್ರತೆ ಹೆಚ್ಚಾಗಿ ಮರೆಗಳ ಮೂಲಕ ಕಥೆಯನ್ನು ಬಿಚ್ಚಿಡುವ ಪ್ರಕ್ರಿಯೆ ಮತ್ತು ನಿರೂಪಣಾ ಶೈಲಿ ಉತ್ತಮವಾಗಿದೆ. ಹಸಿವಿನ ತೀವ್ರತೆಯನ್ನು ನಾವು ಮೊದಲ ಅಧ್ಯಾಯವಾದ 'ಹಸಿವಿನ ಲೋಕ'ದ ಕಥೆಯಲ್ಲಿ ಕಾಣಬಹುದು.

"ಕೆದುರುಗೂದಲ ಬತ್ತಿದ ಚೇತನಕೆ ಬಟ್ಟೆಯಿಲ್ಲಾ, ಹಸಿವು ಮುತ್ತಿದ ಬೆಂಕಿ ಸಾಗರದಂಥಾ ಏಕಾಂಗಿ ಮಾನವನ ಸಂಗಾತಿಯು ಯಕಶ್ಚಿತ್ ಲಂಗೋಟಿಯು" ಎಂದು ಪ್ರಾರಂಭವಾದ ಕಥೆ ಹಸಿವಿನ ತೀವ್ರತೆಯನ್ನು ಹೇಳುತ್ತದೆ. 'ವೃಕ್ಷ ವೃತ್ತಾಂತ' ಎಂಬ ಅಧ್ಯಾಯದಲ್ಲಿ ಈ ಮಾನವನ ಹಿಂದಿನ ಜನುಮದ ಕಥೆಯನ್ನು ನೇರುಳಾ ಮರ ಮತ್ತು ತಾರಮರಗಳು ಹೇಳಿಕೊಳ್ಳುತ್ತವೆ, ವೃಕ್ಷಗಳು ಮಾತನಾಡಿಕೊಳ್ಳುತ್ತವೆ.

ಇಲ್ಲಿ ರಾಜನ ಮಗಳಾದ ಗೌರಮ್ಮನು ಯಾವ ರಾಜರನ್ನೂ ಒಪ್ಪದೆ, ಒಂದು ಹೊತ್ತಿನ ಊಟಕ್ಕಾಗಿ ಭಿಕ್ಷೆ ಬೇಡುವವನನ್ನು ಇಷ್ಟಪಡುತ್ತಾಳೆ. ಆ ಭಿಕ್ಷುಕನನ್ನು ಕರೆದುಕೊಂಡು ಹೋಗಿ, ಅವನನ್ನು ಶುಚಿ ಮಾಡಿ, ಮೃಷ್ಟಾನ್ನ ಭೋಜನ ಹಾಕುತ್ತಾಳೆ. ಆ ಭಿಕ್ಷುಕ ಎಲ್ಲವನ್ನೂ ಅನುಭವಿಸಿ ನಾಪತ್ತೆಯಾಗುತ್ತಾನೆ. ಮುಂದೆ ಇವನು ಕೇಳಿದ್ದು

ಕೊಡುವ ಜೋಗಿಯಾಗುತ್ತಾನೆ. ಇದರಿಂದ ಹಸಿವು ಮತ್ತು ಧ್ಯಾನಕ್ಕೆ ಏನು ಸಂಬಂಧವಿದೆ ಎನ್ನಬಹುದು. ಇದಾದ ನಂತರ, ಇವನು ದಲಿತ ಎಂಬ ಕಾರಣಕ್ಕಾಗಿಯೇ ತನ್ನ ಪ್ರಾಣವನ್ನು ಬಲಿ ಕೊಡುತ್ತಾನೆ. ಇದಾದ ನಂತರ ಈ ಕಥೆ ಆಧುನಿಕ ಕಾಲಕ್ಕೆ ಬದಲಾವಣೆಯಾಗುವುದನ್ನು ಗಮನಿಸಬಹುದು. 'ಗುರುಶಿಷ್ಯ ವೃತ್ತಾಂತ' ಅಧ್ಯಾಯದಲ್ಲಿ ಹಸಿವಿನಿಂದ ಆಗುವ ಕಳ್ಳಾಟಗಳನ್ನು ಗುರುತಿಸಬಹುದು. ಲಂಗೋಟಿ ಸೋಮ್ಗಳು ಹಸಿವಿನಿಂದಲೇ ಈ ಸ್ವಾಮೀಜಿಯ ವೇಷಗಳನ್ನು ಹಾಕುತ್ತಾನೆ.

"ಎಲ್ಲ ದೈವಚಿತ್ತ ನಾನೇನು ಮಾಡಕಾದ್ದು ನರಮನ್ಸ" ಅನ್ಕಂಡು ತನಗೆ ತಾನೇ ಚಿಂತ್ಯಾಗಿನ ಸಾಗರದಲ್ಲಿ ಮುಳುಗಿರುತ್ತಾನೆ. ಇಲ್ಲಿ ಗುರು ಶಿಷ್ಯರ ನಡುವೆ ವಾಗ್ವಾದವೇ ನಡೆಯುತ್ತದೆ. ಒಮ್ಮೆ ಶಿಷ್ಯನಾದವನು ಬಾಲ್ಯದಲ್ಲಿ ಜಾತ್ರೆಗೆ ಹೋಗಿ ದಾರಿ ತಪ್ಪುತ್ತಾನೆ. ದಾರಿಯಲ್ಲಿ ಬರುವಾಗ ಯಾರೋ ಅವನನ್ನು ಗಾಡಿಗೆ ಹತ್ತಿಸಿಕೊಳ್ಳುತ್ತಾರೆ. ಆ ಗಾಡಿಯಲ್ಲಿ ಒಂದು ಮೂಟೆ ಅಕ್ಕಿ ಮತ್ತು ರಾಗಿ ಇರುವುದನ್ನು, ಆ ಗಾಡಿಯ ಜನರು ಮುಚ್ಚಿಡುತ್ತಾರೆ. ಆಗ ಭಾರತದಲ್ಲಿ ತುರ್ತುಪರಿಸ್ಥಿತಿ ಮತ್ತು ಬರಗಾಲ. ಇಂತಹ ಸಮಯದಲ್ಲಿ ಪೋಲೀಸರು ಗಾಡಿಯನ್ನು ತಪಾಸಣೆ ಮಾಡಿದಾಗ, ಅಕ್ಕಿ, ರಾಗಿ ಕೈತಪ್ಪಿ ಹೋಗುತ್ತದೆಂಬ ಕಾರಣದಿಂದ, ಪೋಲೀಸರನ್ನು ಗಾಡಿಯವರು ಚೆನ್ನಾಗಿ ಥಳಿಸುತ್ತಾರೆ. ಇದರಿಂದ ತಿಳಿಯುತ್ತದೆ, ಹಸಿವಿನ ಕಷ್ಟ ಎಂತಹ ಅಸಹನೀಯವಾದುದು ಎಂದು ಹೇಳಬಹುದು.

"ಸಿವು ಕಪ್ಪಮ್ಮರ ಪ್ರಣಯ ಪಂಚಾಂಗವೂ" ಕಥೆಯಲ್ಲಿ ಹಾಸ್ಟೆಲು ದರಿದ್ರ ಗೋಳು ಹೇಳತೀರದು. ಆ ಹಾಸ್ಟೆಲು ಅಂದ್ರಾ ದಯ್ಯದ ಮನೆಯ ರೀತಿಯಾಗಿತ್ತು. ಮೂಲೋಕದ ಕೊಳಕ್ತನವು ಅಲ್ಲಿ ಕಾಲ್ಮುರಿದು ಬಿದ್ಕಂಡು ನಿದ್ದೆಲೋಕದಲಿ ತಲ್ಲೀನವಾಗಿತ್ತು. ದಿಕ್ಕುಪಾಲು ದಿವಾಳಿ ಆಗಿದ್ದ ಹಾಸ್ಟೆಲ್‌ನ ಯಾರು ನಡ್ಸುಕೊಂಡು ಬತ್ತಿದ್ರು. ಇಲ್ಲಿ ಒಂಜನಾ ಊಟವಿದ್ರಾ ಒಂಬತ್ತು ಜನಾ ಊಟವಿರ್‍ತಿರಲಿಲ್ಲ. ನರಕದಂತೆ ಈ ಹಾಸ್ಟೆಲ್ ಇತ್ತು. ಈ ದಲಿತರಿರುವ ಹಾಸ್ಟೆಲ್‌ಗೆ ಸರಿಯಾದ ರೀತಿಯಲ್ಲಿ ಹಣ ಮಂಜೂರು ಆಗುತ್ತಿರಲಿಲ್ಲ. ಮಂಜೂರಾದರೂ, ಅದರಲ್ಲಿ ಮಾಡುವ ಅಡಿಗೆಗೆ ವಿದ್ಯಾರ್ಥಿಗಳಿಗಿಂತ ಅತಿಥಿಗಳೇ ಹೆಚ್ಚಾಗಿ ಊಟಕ್ಕೆ ಕಾಯ್ದುಕೊಂಡು ಇರುತ್ತಿದ್ದರು. ಇದರಲ್ಲಿ ಬೇರೆ ಜಾತಿಯ ಜಿಪುಣರು, ಸರ್ಕಾರಿ ಉದ್ಯೋಗಿಗಳೇ ಹೆಚ್ಚಾಗಿರುತ್ತಿದ್ದರು.

ಈ ಹಾಸ್ಟೆಲ್ ದುರಾಡಳಿತದ ಬಗ್ಗೆ ಎಷ್ಟೇ ಮೂಗರ್ಜಿ ಬರೆದರೂ ಯಾರೂ ಸ್ಪಂದಿಸುತ್ತಿರಲಿಲ್ಲ. ಈ ವಿದ್ಯಾರ್ಥಿಗಳ ಗೋಳು ಹೇಳತೀರದು. ಮನೆಯಲ್ಲಿ ಕಷ್ಟ ಎಂದು ಹಾಸ್ಟೆಲ್‌ಗೆ ಸೇರಿದರೆ, ಈ ಹಾಸ್ಟೆಲ್‌ನಲ್ಲಿ ಅಧೋಗತಿ, ಹಸಿವಿನ ತುತ್ತಾಗಿ ಬೆಲೆಯಿರಲಿಲ್ಲ. ಯಾರಾದರೂ ಪೋಲೀಸರ ಕೈಗೆ ಸಿಕ್ಕಿದ್ದರೋ ಶ್ರೀನಿವಾಸಪ್ರಸಾದ್, ರಾಚಯ್ಯ ನವರ ಹೆಸರು ಹೇಳಿ ತಪ್ಪಿಸಿಕೊಳ್ಳುತ್ತಿದ್ದರು. ಇವೆಲ್ಲ ೧೯೮೬ರ ನಂತರದ ಕಥೆಯಾಗಿವೆ.

ಮಾಯಾಪುರ ಹಾಸ್ಟೆಲ್‌ನಲ್ಲಿ ನಡೆದ ಘಟನೆಗಳು ಹಸಿವಿನ ತೀವ್ರತೆಯನ್ನು ಮತ್ತು ಬಡತನದ ಚಹರೆಯನ್ನು ತೋರಿಸುತ್ತದೆ.

ಇದರಲ್ಲದೆ, ಇವರ ಆತ್ಮಚರಿತ್ರೆಯಲ್ಲಿ ಹೊಟ್ಟೆಪಾಡಿಗೆಗಾಗಿ ಆಗುವ ಕಳ್ಳತನ, ವಂಚನೆ, ಮೋಸಗಳನ್ನು ಕಾಣಬಹುದು. ಮುಳ್ಳೂರು ವಿದ್ಯಾರ್ಥಿಯಾಗಿದ್ದಾಗ, ಕೆಲವು ನೈಜ ಹಸಿವಿನ ಕಥೆಗಳು ನಮ್ಮ ಮನಕಲಕುತ್ತವೆ. 'ಸಾವಿನ ಹಕ್ಕಿಯ ರೆಕ್ಕೆಯಲ್ಲಿ ಒಂದು ದಿನ' ಎಂಬ ಕಥೆಯಲ್ಲಿ ಇದನ್ನು ಮನಗಾಣಬಹುದು. ಹೊಟ್ಟೆಪಾಡಿಗಾಗಿ ಮಾಡುವ ಮೋಸದ ಜಾಲ ಕ್ರೂರಕರವಾಗಿದೆ ಎನ್ನಬಹುದು.

ಸಿಂಗಳೀಕ ಕಥಾಸಂಕಲನದಲ್ಲಿ ಹಸಿವು ಮತ್ತು ಬಡತನದ ಸನ್ನಿವೇಶಗಳು ಎಂತಹವರನ್ನೂ ಮನಕಲಕಿಸುವಂತಹದ್ದು. ಅಂತಹ ಮನಸ್ಸಿಗೆ ಮುಟ್ಟುವ ಕಥೆಗಳಿವೆ. 'ವಿವೇಕಿಯೊಬ್ಬನ ತೈಲ ಪ್ರಸಂಗ' ಕಥೆಯಲ್ಲಿ ಗ್ರಾಮೀಣ ಯುವ ಪ್ರತಿಭೆ ಆಚಾರ್‌ನ ಸ್ಥಿತಿಯನ್ನು ಉದಾಹರಿಸಬಹುದು. ಆಚಾರನು ಅಧ್ಯಕ್ಷರ ಅನುಕಂಪವನ್ನು ಕಳೆದುಕೊಂಡ ಮೇಲೆ, ಹಣಕ್ಕಾಗಿ ಪರದಾಡುತ್ತಾನೆ. ಯಾರೋ ಹಳೆಯ ಸ್ನೇಹಿತರು, ರಸ್ತೆಯಲ್ಲಿ ನಿಂತಿದ್ದ ಆಚಾರನನ್ನು ಗಾಡಿಯಲ್ಲಿ ಕರೆದುಕೊಂಡು ಮನೆಗೆ ಹೋಗುತ್ತಾರೆ. ಆ ಸ್ನೇಹಿತನು ಕೋಕಾಕೋಲ ಎಂದು, ನವರತ್ನ ತೈಲವನ್ನು ಆಚಾರನಿಗೆ ಕೊಡುತ್ತಾನೆ. ಆಚಾರನು ಹಸಿವಿನಿಂದ ಕುಡಿದಿರುತ್ತಾನೆ, ನಂತರ ಅಸ್ವಸ್ಥಗೊಳ್ಳುತ್ತಾನೆ. ಆಸ್ಪತ್ರೆಗೆ ಹೋಗಿ ಎಲ್ಲವನ್ನೂ ವಾಂತಿ ಮಾಡಿಸುತ್ತಾನೆ. ಇದು ಹೊಟ್ಟೆ ಹಸಿದವನ ಕಥೆಯಾದರೆ, ಹೊಟ್ಟೆ ತುಂಬಿದವನ ಕಥೆಯನ್ನು 'ನಗರಾಂಗನೆಯ ತೋಳಬಂದಿಯಲ್ಲಿ' ಕಾಣಬಹುದು. ಇಲ್ಲಿ ಮಲ್ಲಪ್ಪ ಎಂಬುವನು ತಕ್ಕಮಟ್ಟಿಗೆ ಅನುಕೂಲವಾಗಿದ್ದನು. ಅಂಗಡಿ ಇಟ್ಟುಕೊಂಡು ಬಡ್ಡಿಗೆ ಸಾಲ ಕೊಡುತ್ತಿದ್ದನು. ಇವನಿಗೆ ಮಾಂಸಾಹಾರ ಬಲುಪ್ರಿಯ. ಒಂದು ದಿನ ಮೈಸೂರಿಗೆ ಬಂದಾಗ ಹೊಟ್ಟೆ ಬಿರಿಯುವಷ್ಟು ತಿಂದು, ಕೊನೆಯಲ್ಲಿ ಫಿಶ್‌ಫ್ರೈ ತಿನ್ನುವಾಗ ಗಂಟಲಿಗೆ ಮುಳ್ಳು ಸಿಕ್ಕಿ ಹಾಕಿಕೊಳ್ಳುತ್ತದೆ. ಇದು ಅವನ ಪ್ರಾಣವನ್ನು ತೆಗೆಯುತ್ತದೆ. ತಿನ್ನುವ ಚಪಲದಿಂದ, ದುರಾಸೆಯಿಂದ ತಿಂದು, ತನ್ನ ಪ್ರಾಣವನ್ನು ಬಲಿಕೊಡುತ್ತಾನೆ. ಕೆಲವರು ಹೊಟ್ಟೆ ಹಸಿವಿನಿಂದ ಸತ್ತರೆ, ಇವನು ಹೊಟ್ಟೆ ತುಂಬಾ ಊಟ ಮಾಡಿ ಸತ್ತನು. ಆಸೆಯೇ ದುಃಖಕ್ಕೆ ಮೂಲ ಎನ್ನಬಹುದು.

"ರೋಗಗ್ರಸ್ಥ" ಕಥೆಯಲ್ಲಿ ತಮ್ಮಯ್ಯನ ಕಡುಬಡತನ, ಶ್ರೀಮಂತನಾದ ಮೇಲೆ ಅವನಲ್ಲಿ ಬದಲಾಗುವ ರೀತಿ, ಅದರಿಂದಾಗುವ ಅನಾಹುತಗಳನ್ನು ಕಾಣಬಹುದು. ಜೀತ ಪದ್ಧತಿಯಿಂದ ತಮ್ಮಯ್ಯನ ಕುಟುಂಬ ಪಾರಾಯಿತು. ಜೀತ ಪದ್ಧತಿಯ ದುರಾಳತನವನ್ನು ಕಾಣಬಹುದು. ತಮ್ಮಯ್ಯ ನಂತರ ರಾಜಕೀಯಕ್ಕೆ ಸೇರುತ್ತಾನೆ. ಮಂಡಲ ಪಂಚಾಯಿತಿಯ ಸ್ಥಾನಕ್ಕೆ ನಿಂತು ಛೇರ್ಮನ್ ಆಗುತ್ತಾನೆ. ಇದಾದ ನಂತರ ಹಸಿವು, ಬಡತನದಿಂದ ಬಳಲುತ್ತಿದ್ದ ತಮ್ಮಯ್ಯ ಪೂರ್ಣ ಬದಲಾಗುತ್ತಾನೆ.

ಜಯಮ್ಮ ಎಂಬ ಹೆಂಗಸಿನ ಸಹವಾಸ ಮಾಡಿ ಏಡ್ಸ್ ಅನ್ನು ಆಹ್ವಾನಿಸುತ್ತಾನೆ. ತಮ್ಮಯ್ಯ ಹೆಂಡ್ತಿ-ಮಕ್ಕಳನ್ನು ಈ ಅಧಿಕಾರದ ಅಹಂನಿಂದ ದೂರವಿಟ್ಟಿರುತ್ತಾನೆ. ಕೊನೆಯಲ್ಲಿ ಖಾಯಿಲೆ ಬಂದಾಗ ಹೆಂಡ್ತಿಯೇ ನೆರವಾಗುತ್ತಾಳೆ. ಈ ಕಥೆಯಲ್ಲಿ ಹಸಿವಿನಿಂದ ಬಳಲುವುದು ಒಂದಾದರೆ, ಹಣ ದೊರೆತಾಗ, ಹೊಟ್ಟೆ ತುಂಬಿದಾಗ, ಮಾನವ ಯಾವ ರೀತಿ ಬದಲಾಗುತ್ತಾನೆಂಬುದಕ್ಕೆ ತಮ್ಮಯ್ಯನೇ ಸಾಕ್ಷಿಯಾಗಿದ್ದಾನೆ.

"ಓ ದೇವರೇ ಇವರನ್ನು ಕಾಪಾಡು" ಕಥೆಯಲ್ಲಿಯೂ ಮಾನವನ ಅಸಹಜತೆಯನ್ನು ಹೇಗೆ ಬಳಸಿಕೊಳ್ಳುತ್ತಾರೆಂಬುದನ್ನು ಕಾಣಬಹುದು. ಇಲ್ಲಿ ದಲಿತರು ಅನ್ನುವುದಕ್ಕಿಂತ ಅಲ್ಪಸಂಖ್ಯಾತರೆಲ್ಲರೂ ಹಸಿವಿನ ಕಾರಣದಿಂದ ಜಾತಿಯಿಂದ-ಜಾತಿಗೆ ಮತಾಂತರಗೊಳ್ಳುತ್ತಾರೆ. ಊಟ, ಬಟ್ಟೆ, ವಸತಿ ಈ ಮೂರೂ ಸಿಗುವುದರ ಫಲವಾಗಿ ಎಲ್ಲರೂ ಇದಕ್ಕೆ ಆಕರ್ಷಣೆಗೊಳ್ಳುತ್ತಿದ್ದರು. ಹಸಿವಿನಿಂದ ಮಾನವನು ಎಂತಹ ಕೆಲಸವನ್ನಾದರೂ ಮಾಡುತ್ತಾರೆ, ಹಸಿವು ಮಾಡಿಸುತ್ತದೆ ಎನ್ನಬಹುದು.

'ಕಾಯುವರು ಯಾರಿಹರೋ ಕಾಣೆನಲ್ಲಾ' ಕಥೆಯಲ್ಲಿ ಆದಿ ಜಾಂಬವ ಕುಲಕ್ಕೆ ಸೇರಿದ ಚಂದ್ರಪ್ಪ ಮೇಷ್ಟ್ರು ಕಡುಬಡತನದಿಂದ ವಿದ್ಯಾಭ್ಯಾಸ ಮುಗಿಸಿ ತಹಸೀಲ್ದಾರರಾಗಿರುತ್ತಾರೆ. ಇವರು ಪ್ರೀತಿಸಿದ ಹುಡುಗಿ ಬ್ರಾಹ್ಮಣತಿ. ಅಂತರ್ಜಾತಿ ವಿವಾಹ ಮಾಡಿಕೊಳ್ಳುತ್ತಾರೆ. ಮನೆಯಲ್ಲಿ ಶಾಸ್ತ್ರ, ಸಂಪ್ರದಾಯ, ಹೊರಗಡೆ ಯಾವುದೂ ಚಂದ್ರಪ್ಪನಿಗೆ ಲೆಕ್ಕಕ್ಕೆ ಇರುವುದಿಲ್ಲ. ಇಂತಹ ಮನುಷ್ಯನನ್ನು ದುರಾಸೆ ಆವರಿಸುತ್ತದೆ. ಹೆಂಡ್ತಿಯು ಹಣದ ಭೂತವಾಗಿರುತ್ತಾಳೆ. ಇದರಿಂದ ಚಂದ್ರಪ್ಪ ಭ್ರಷ್ಟನಾಗುತ್ತಾನೆ. ಇವನು ಬಡತನದಿಂದ ಬಂದಿದ್ದುದರಿಂದ ಬಡವರಿಗೆ ಸಹಾಯಕ ಮಾಡಬೇಕೆಂಬ ಮನಸ್ಸಿದ್ದರೂ ಹೆಂಡ್ತಿ ಬಿಡುವುದಿಲ್ಲ.

ಹಾಗೆಯೇ, ಒಂದು ದಿನ ಮುದುಕ ಬೀರಪ್ಪ ತನ್ನ ಸರವನ್ನು ಗಿರವಿ ಅಂಗಡಿಯವನಿಂದ ವಾಪಸ್ಸು ಕೊಡುವಂತೆ ಮಾಡಿ ಸ್ವಾಮಿ ಎಂದು ಕೇಳುತ್ತಾನೆ. ಇದಕ್ಕೆ ತಹಸೀಲ್ದಾರ ಚಂದ್ರಪ್ಪ ಸರಿ ಎಂದು, ಅಂಗಡಿಯವರ ಬಳಿ ಲಂಚ ತೆಗೆದುಕೊಂಡು ಮುದುಕನಿಗೆ ವಾಯಿದೆ ಮುಗಿದ ಕಾರಣ ಸರ ಹಿಂದಿರುಗಿಸಲು ಸಾಧ್ಯವಿಲ್ಲವೆಂದು ಸುಳ್ಳು ಹೇಳುತ್ತಾರೆ. "ಮುದುಕ ನಾ ಸತ್ತರೂ ನಿಮ್ಮನ್ನು ಬಿಡೋಲ್ಲ ಬುದ್ಧಿ" ಎಂದಿರುತ್ತಾನೆ. ಚಂದ್ರಪ್ಪನಿಗೆ ಪಾಪಪ್ರಜ್ಞೆ, ಮುದುಕ ಸತ್ತ ನಂತರ ಹೆಚ್ಚಾಗುತ್ತದೆ. ಮುದುಕನಿಗೆ ಮಾಡಿದ ಅನ್ಯಾಯದಿಂದ ಚಂದ್ರಪ್ಪ ಹೆದರಿ ಹೃದಯಾಘಾತಕ್ಕೊಳಗಾಗಿ ಪ್ರಾಣ ಬಿಡುತ್ತಾನೆ. ದುರಾಸೆಯಿಂದ ಮಾಡಿದ ಕೆಲಸವೂ ಯಾರ ಪ್ರಯೋಜನಕ್ಕೆ ಬರುವುದಿಲ್ಲ. ಈ ರೀತಿ ಹಸಿವಿನ ತೀವ್ರತೆಯನ್ನು ಹೀಗೆ ಕಾಣಬಹುದು.

"ಮಹಿಳಾ ಶೋಷಣೆ" ಇಲ್ಲಿ ಲಿಂಗಸಂಬಂಧಿ, ಎಂದರೆ ಹೆಣ್ಣು ಮಕ್ಕಳು ಅಥವಾ ಹೆಂಗಸರು ಗಂಡಸರ ವಿರುದ್ಧ ಹೋರಾಡುವುದು. ಅನ್ಯಾಯ, ದೌರ್ಜನ್ಯಗಳ

ವಿರುದ್ಧ ಹೋರಾಡುವುದು. ಇದನ್ನು ನಾವು ಮುಳ್ಳೂರು ನಾಗರಾಜರ ಕೆಲವು ಕಥೆ ಮತ್ತು ಕಾದಂಬರಿಗಳಲ್ಲಿ ಕಾಣಬಹುದು.

ಮೊದಲಿಗೆ "ಮರಣ ಮಂಡಲ ಮಧ್ಯದೊಳಗೆ" ಕಾದಂಬರಿಯಲ್ಲಿ ಇದನ್ನು ನಾವು ರಾಕಾಸಿ ಮತ್ತು ಆಧುನಿಕ ಸಂದರ್ಭದಲ್ಲಿ ಬಸವರಾಜುವಿನ ತಂಗಿಯಾದ ರಂಗಿ, ದೌರ್ಜನ್ಯವನ್ನು ಪ್ರತಿಭಟಿಸುತ್ತಾಳೆ. ಇಲ್ಲಿ ರಾಕಾಸಿಯು ತನ್ನ ಮನಗನಿಗಾಗಿ ಅನ್ಯಾಯಗಳ ವಿರುದ್ಧ ಪ್ರತಿಭಟಿಸುತ್ತಾಳೆ. ರಾಜನಿಗೋಸ್ಕರ ಮಾನವರು ಮಿದುಳನ್ನು ದಾನ ಮಾಡಬಹುದು, ಮಿದುಳಿರುವುದು ವ್ಯರ್ಥ ಎಂದು ಬಡಜನರನ್ನು ನಂಬಿಸಿರುತ್ತಾರೆ. ಬಡ ಪ್ರಜೆಗಳು ಬಡತನದಿಂದ ತಮ್ಮ ಪ್ರಾಣವನ್ನು ಬಲಿಕೊಡುತ್ತಾರೆ. ಇದನ್ನರಿತ ರಾಕಾಸಿಯ ಮಗ ಸಿಂಗಾರು, ಮಿದುಳು ಮನುಷ್ಯರಿಗೆ ಅತ್ಯಾವಶ್ಯಕ. ಇದರಿಂದಲೇ ಎಲ್ಲಾ ಕೆಲಸಗಳು ಸಾಧ್ಯ ಎಂದು ಘೋಷಿಸಿದಾಗ, ಇವನನ್ನು ಬಂಧಿಸುತ್ತಾರೆ. ಸಿಂಗಾರುವನ್ನು ಕೊಲೆ ಮಾಡಲು ರಾಜನು ಆಜ್ಞೆ ಕೊಟ್ಟಾಗ ರಾಕಾಸಿಯು ಬಂದು ಸಿಂಗಾರನ್ನು ಬಿಡಿಸಿಕೊಂಡು ಹೋಗುತ್ತಾಳೆ. ಸಿಂಗಾರು ರಾಜನ ಎದುರೇ ನೀವು ಮಾಡುತ್ತಿರುವುದು ಅನ್ಯಾಯ ಎಂದು ಹೇಳುತ್ತಾನೆ. ಇದರಿಂದ ಜನಗಳು ಎಚ್ಚೆತ್ತುಕೊಳ್ಳುತ್ತಾರೆ. ಸಿಂಗಾರು, ರಾಕಾಸಿಯಿಂದ ಆ ಊರ ಜನಗಳ ಪ್ರಾಣ ಉಳಿಯುತ್ತದೆ.

ಈ ಕಾದಂಬರಿಯಲ್ಲಿ ಪ್ರಮುಖವಾದ ಇನ್ನೊಂದು ಪಾತ್ರ ರಂಗಿ, ಸಿದ್ಧಿ ಮುಂತಾದವರು. ಸಿದ್ಧಿ ಗೌಡರ ಮಗನ ಜೊತೆ ಅನೈತಿಕ ಸಂಬಂಧವನ್ನು ಹೊಂದಿರುತ್ತಾಳೆ. ಆದರೆ, ಇದು ಒಪ್ಪಿತ ಸಂಬಂಧವಾದುದರಿಂದ ಸಿದ್ಧಿ ಇದನ್ನು ಅಷ್ಟಾಗಿ ಪ್ರತಿಭಟಿಸುವುದಿಲ್ಲ. ಆದರೆ ರಂಗಿ ಸ್ವಜಾತಿ ಹುಡುಗನನ್ನು ಪ್ರೀತಿಸಿರುತ್ತಾಳೆ. ರಂಗ ಎನ್ನುವನು ಕೈಕೊಟ್ಟಾಗ ರಂಗಿ ಅವನ ವಿರುದ್ಧ ಸಿಡಿದೇಳುತ್ತಾಳೆ. ರಂಗಿ, ರಂಗನ ಮನೆಗೆ ಹೋಗಿ ಧರಣಿ ಕೂರುತ್ತಾಳೆ. ರಂಗನ ಮನೆಯವರು ಯಾವ ರೀತಿ ಹಿಂಸೆ ಕೊಟ್ಟರೂ ಅವಳು ಹೆದರುವುದಿಲ್ಲ. ಕೊನೆಗೆ ಈ ಸಮಸ್ಯೆ ಪಿರಿಯಾಪಟ್ಟಣದ ಹೊನ್ನಾಪುರದ (ಡಿ.ಎಸ್.ಎಸ್.) "ದಲಿತ ಸಂಘರ್ಷ ಸಮಿತಿ"ಗೆ ದೂರು ಕೊಡಲಾಯಿತು. ಆದ್ಯ ಸೋಮಶೇಖರ್ ಮುಂತಾದವರು ಬಂದು ನ್ಯಾಯ ಪಂಚಾಯ್ತಿ ಮಾಡುತ್ತಾರೆ. ಆದರೆ ಇಲ್ಲಿ ಹೆಚ್ಚು ವಾಗ್ವಿವಾದಗಳು ಹೆಚ್ಚಾಗಿವೆ. ಇಲ್ಲಿ ರಂಗನು ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿರುವುದಿಲ್ಲ. ರಂಗಿ ಎಲ್ಲವನ್ನೂ "ಡಿ.ಎಸ್.ಎಸ್."ಗೆ ಹೇಳುತ್ತಾಳೆ. ಕೊನೆಗೆ ಈ ಪಂಚಾಯ್ತಿ ಫಲಿತಾಂಶ ಎರಡು ಸಾವಿರ ವರದಕ್ಷಿಣೆ ಕೊಡಿಸುವುದರ ಮೂಲಕ ಈ ನ್ಯಾಯ ಪಂಚಾಯ್ತಿ ಮುಗಿಯುತ್ತದೆ.

ಆದರೆ, ಇಲ್ಲಿ ನಾವು ಗಮನಿಸಬೇಕಾದ ವಿಷಯ ರಂಗಿಯ ದಿಟ್ಟತನ, ಅವಳ ಧೈರ್ಯವನ್ನು ಮೆಚ್ಚಲೇಬೇಕು. ಬೀದಿಯಲ್ಲಿ ಮರ್ಯಾದೆ ಹೋದರೂ, ಬೀದಿಯಲ್ಲಿ ನ್ಯಾಯವನ್ನು ಪಡೆಯುತ್ತಾಳೆ. ಆದರೆ, ವರದಕ್ಷಿಣೆ ಕೊಟ್ಟಿದ್ದು ಅಷ್ಟು ಸಮಂಜಸವಲ್ಲ.

"ಸಿಂಗಳೀಕ" ಕಥಾಸಂಕಲನದಲ್ಲಿ ಈ ರೀತಿಯ ಪ್ರಸಂಗಗಳು ಅಂದರೆ, ಮಹಿಳೆಯರು ದೌರ್ಜನ್ಯ, ಅನ್ಯಾಯದ ವಿರುದ್ಧ ಹೋರಾಡುವ ಸಂಗತಿಗಳು ಬಂದರೂ, ಅವಕ್ಕೆ ಅಷ್ಟೊಂದು ಪ್ರಾಮುಖ್ಯತೆಯನ್ನು ಲೇಖಕರು ಕೊಟ್ಟಿಲ್ಲ ಎನ್ನಬಹುದು.

"ದಂಡಕಾರಣ್ಯ" ಕಾದಂಬರಿಯಲ್ಲಿ ಗೌರಮ್ಮನ ಪಾತ್ರ ಪ್ರತಿಭಟಿಸುವಂತಹದ್ದಲ್ಲ. ಅವಳು ತನ್ನ ತಪ್ಪಿನಿಂದ ಆದ ಕೆಲಸಕ್ಕೆ ತಾನೇ ಪಶ್ಚಾತ್ತಾಪ ಪಡುತ್ತಾಳೆ. ಕೊನೆಯಲ್ಲಿ ಅವಳ ಗಂಡ ಜೋಗಿಯ ರೂಪದಲ್ಲಿ ದೊರೆತರೂ, ಆಗ ಅವಳು ಇವನೇ ಗಂಡ ಎಂದು ಮೌನವಾಗುತ್ತಾಳೆ. ಮುಂದೆ ಕಥೆ ಬೇರೆ ರೂಪ ಪಡೆಯುತ್ತದೆ. ಇಲ್ಲಿ ಕಥೆ ಗೌಣ, ವಸ್ತು ಅನುಷಂಗಿಕವಾಗಿದೆ.

ಇನ್ನು ಲೇಖಕರ ಆತ್ಮಚರಿತ್ರೆಯಾದ "ಮಾಮರದ ಮೇಲೊಂದು ಕೋಗಿಲೆ"ಯಲ್ಲಿ ಮಹಿಳೆಯರು ಕೇವಲ ಪ್ರೇಯಸಿಯಾಗಿ ಅಥವಾ ಭೋಗದ ವಸ್ತುವಿನ ರೀತಿಯಲ್ಲಿ ಚಿತ್ರಿತವಾಗಿದ. ಲೇಖಕರ ಅಜ್ಜಿ ಇಲ್ಲಿ ವಿಶೇಷವಾಗಿ ಕಾಣುತ್ತಾರೆ. ಅಂದಿನ ಕಾಲದಲ್ಲಿ ಬಹಳ ಧೈರ್ಯಶಾಲಿ ಹೆಂಗಸು ಎಂದು, ಆ ಊರ ಜನರು ಮಾತನಾಡಿಕೊಳ್ಳುತ್ತಾರೆಂದು, ಲೇಖಕರು ಹೇಳಿದ್ದಾರೆ. ಅವರು ಹೇಳುವ ವೀರಗಾಥೆ ಕಥೆಗಳು, ದೆವ್ವಗಳ, ಭೂತಗಳ ಕಥೆಗಳಾಗಿರುತ್ತಿದ್ದವು. ಇದರಿಂದ ಮಕ್ಕಳು ಕಥೆ ಕೇಳಲು ಹೆಚ್ಚು ಆಸಕ್ತಿಯಿಂದ ಕಾಯುತ್ತಿದ್ದರು ಎಂದಿದ್ದಾರೆ. ಮುಖ್ಯವಾಗಿ ಇವರ ಕಾದಂಬರಿಯಲ್ಲಿ ರಂಗಿಯನ್ನು ಪ್ರಮುಖವಾಗಿ ಒಬ್ಬ ಹೋರಾಟಗಾರ್ತಿ ಎಂದು ಗುರುತಿಸಬಹುದು.

ಹೋರಾಟದ ನೆಲೆಗಳು :

ಒಬ್ಬ ಹೋರಾಟಗಾರರಾಗಿಯೇ ಮುಳ್ಳೂರು ನಾಗರಾಜರು, ಅನ್ಯಾಯಗಳ ವಿರುದ್ಧ ಪ್ರತಿಭಟನೆಗಳನ್ನು ದಾಖಲಿಸುತ್ತಾ, ಸಾಮಾಜಿಕ ಬದುಕಿಗೆ ತೆರೆದುಕೊಂಡು, ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳತೊಡಗಿದರು. ಒಬ್ಬ ಅಪ್ಪಟ ಮಾನವತಾವಾದಿಯಾಗಿ, ಒಬ್ಬ ಲೇಖಕರಾಗಿ ಸಮಾಜವನ್ನು ಹೊರತುಪಡಿಸಿ ತನ್ನಷ್ಟಕ್ಕೆ ತಾನೇ ಸೃಜನಶೀಲ ಕ್ರಿಯೆಯಲ್ಲಿ ತೊಡಗುವ ಮನಸ್ಥಿತಿ ಲೇಖಕನಿಗೆ ಎದುರಾಗುತ್ತವೆ. ಅವರ ಕಥೆ, ಕಾದಂಬರಿ, ಕವನ ಸಂಕಲನಗಳಲ್ಲಿ ಹೋರಾಟದ ಹಲವು ಬಗೆಗಳನ್ನು ಕಾಣಬಹುದು.

ಹೋರಾಟ ಎಲ್ಲಾ ರೀತಿಯಿಂದಲೂ ಇವರ ಕಥೆ, ಕಾದಂಬರಿಗಳಲ್ಲಿ ಉಂಟಾಗಿದೆ ಎಂದೂ ಹೇಳಬಹುದು. ಅದು ಬಡತನ, ಹಸಿವು, ಅವಮಾನ, ಶಿಕ್ಷಣಕ್ಕಾಗಿ, ಸಮಾನತೆಗಾಗಿ ಎಲ್ಲಾ ರೀತಿಯಿಂದಲೂ ಇವರ ಕಥೆ, ಕಾದಂಬರಿ, ನಾಯಕ–ನಾಯಕಿಯರು ಒಂದಲ್ಲ ಒಂದು ವಿಭಿನ್ನ ಶೈಲಿಯಲ್ಲಿ ಹೋರಾಡಿದ್ದಾರೆ. ಮೊದಲಿಗೆ ಅವರ ಮೊಟ್ಟ ಮೊದಲ ಕಾದಂಬರಿಯಾದ "ಮರಣ ಮಂಡಲ ಮಧ್ಯದೊಳಗೆ" ಯಲ್ಲಿ "ದಲಿತ ಸಂಘರ್ಷ ಸಮಿತಿ" ಯ ಹೋರಾಟವನ್ನು, ನ್ಯಾಯಪರ ಚಿಂತನೆಯನ್ನು ನಾವು ಮನಗಾಣಬಹುದು. ಈ ಸಮಿತಿಯಿಂದ ಆದ ಹಲವಾರು ಬದಲಾವಣೆಗಳನ್ನು, ಅದರಲ್ಲೂ ಅನಕ್ಷರಸ್ಥರು, ಹಳ್ಳಿಯ ಜನರು ಇದನ್ನು ಬೆಂಬಲಿಸಿದ ರೀತಿ ಅವಿಸ್ಮರಣೀಯ. ಇದೊಂದು ದಲಿತರ ಹೋರಾಟ ಎನ್ನಬಹುದು. ಸ್ವಜಾತಿಯವರ ಕಿತ್ತಾಟ. ಜಗಳ ಮನಸ್ತಾಪವನ್ನು ಕಾಣಬಹುದಾಗಿದೆ. ಅನ್ಯ ಜಾತೀಯರು ಮಾಡುವ ಅನ್ಯಾಯದಿಂದ ಪಾರಾಗಲು, ಇದನ್ನು ತಡೆಗಟ್ಟಲು "ಡಿ.ಎಸ್.ಎಸ್" ಬಹಳ ಶ್ರಮಪಟ್ಟಿದೆ. ಇದು ಪ್ರಾರಂಭವಾದಾಗ ಅನೇಕ ಪ್ರಭಾವಶಾಲಿ ವ್ಯಕ್ತಿಗಳು ಈ ಸಮಿತಿಯಲ್ಲಿ ಇದ್ದರು. ದೇವಯ್ಯ ಹರವೆ, ಬಿ.ಕೃಷ್ಣಪ್ಪ, ಗೋವಿಂದಯ್ಯ, ಆಡ್ಯ ಸೋಮಶೇಖರ್, ದೇವನೂರ ಮಹಾದೇವ ಮುಂತಾದವರು. ಇವರ ಏಕ ರೀತಿಯ ಹೋರಾಟ ಪ್ರಯೋಜನಕಾರಿಯಾಯಿತು. ಇಂತಹ ವ್ಯಕ್ತಿಗಳಿಂದ ಮತ್ತು ಹಲವಾರು ಸನ್ನಿವೇಶಗಳಿಂದ ಪ್ರೇರಿತನಾದ ಬಸವರಾಜು "ಡಿ.ಎಸ್.ಎಸ್"ಗೆ ಸೇರುತ್ತಾನೆ.

ಬಸವರಾಜು ಒಬ್ಬ ರೌಡಿ, ಅವನ ಅಪ್ಪ ಒಬ್ಬ ಕಳ್ಳನಾಗಿರುತ್ತಾನೆ. ದಲಿತರ ಬೀದಿಗೆ ನಾಯಕನಾಗಿ, ಅನ್ಯ ಜಾತಿಯವರಿಗೆ ದುಃಸ್ವಪ್ನವಾಗಿರುತ್ತಾನೆ. ಮುಯ್ಯಿಗೆ ಮುಯ್ಯಿ ಅನ್ನುವುದು ಇವನ ಪಾಲಿಸಿ. ಯಾರು ಏನೇ ಮಾಡಿದರೂ ಅದನ್ನು ಇವನು ಮಾಡುತ್ತಿರುತ್ತಾನೆ. ಇಂತಹ ಕುಲಹೀನನಾದ ಇವನು "ಡಿ.ಎಸ್.ಎಸ್" ನಿಂದ ಬದಲಾಗುತ್ತಾನೆ, ಸಮಾಜಮುಖಿಯಾಗುತ್ತಾನೆ. "ದಲಿತ ಸಂಘರ್ಷ ಸಮಿತಿ"ಯ ಹೋರಾಟದ ದಿನಗಳೊಂದಿಗೆ ಬೆಳೆದ ಕಾದಂಬರಿಯಾಗಿದೆ. ಆ ಕಾಲಘಟ್ಟದ ಸ್ಥೂಲ ಚಿತ್ರಣವನ್ನು ಕೊಡುವಲ್ಲಿಯೂ, ದುಸ್ಸಾಹಸಿಯಾಗಿದೆಯಲ್ಲದೆ, ಅದರ ಸಕಾರಾತ್ಮಕ, ನಕಾರಾತ್ಮಕ ಗುಣಗಳೆರಡನ್ನೂ ಒಳಗೊಂಡಿದೆ. ಬಸವರಾಜು, ಪಿರಿಯಾಪಟ್ಟಣದ ಹೊನ್ನಾಪುರ ಗ್ರಾಮದಲ್ಲಿ ನಡೆದ ದಲಿತ ಸಂಘರ್ಷ ಸಮಿತಿಯ ಕ್ಯಾಂಪೊಂದರಲ್ಲಿ ಸೇರುತ್ತಾನೆ. ಇಲ್ಲಿಂದ ಅವನ ಸಾಮಾಜಿಕ ಹೋರಾಟ ಪ್ರಾರಂಭವಾಗುತ್ತದೆ. ಇಲ್ಲಿ ಒಂದು ಘಟನೆ ನಡೆಯುತ್ತದೆ. ಅಲ್ಲಿಯ ಮೇಲುಜಾತಿಯಾದ ಸೋಮಶೇಖರನೆಂಬುವನು ಕಾವೇರಿ ಹೊಳೆಯಲ್ಲಿ ಕೊಚ್ಚಿ ಹೋಗುತ್ತಾನೆ. ಇದಾದ ನಂತರ ಬಸವರಾಜುವಿಗೆ ಜ್ಞಾನೋದಯ ಉಂಟಾಗುತ್ತದೆ. ತನ್ನ ರೌಡಿತನದ ಎಲ್ಲಾ ಕೆಟ್ಟ ಅಭ್ಯಾಸಗಳನ್ನು ಬಿಡುತ್ತಾನೆ. ಬಡಜನರಿಗೆ, ಹಿಂದುಳಿದವರಿಗೆ, ಕಷ್ಟದಲ್ಲಿ ಇರುವ ಜನರಿಗೆ ಸಹಾಯ ಹಸ್ತ ನೀಡಲು ಈ ಬಸವರಾಜು ಮುಂದಾಗುತ್ತಾನೆ. ಒಬ್ಬ

ಮಾನವೀಯ ವ್ಯಕ್ತಿಯಾಗಿ "ಒಳ್ಳೇದು ಮಾಡು ಮಾತಾಯಿ ಮಾಳುಗಪ್ಪ" ಎಂದು ಪ್ರಾರ್ಥಿಸುತ್ತಾನೆ. ಹೀಗೆ ಬಸವರಾಜು ತನ್ನ ಜೀವನದುದ್ದಕ್ಕೂ ಬಡಜನರಿಗೆ ಸಹಾಯ ಮಾಡುತ್ತಾನೆ.

ಹೀಗೆ ಮರಣ ಮಂಡಲ ಕಾದಂಬರಿಯಲ್ಲಿ ಬಸವರಾಜುವಿನ ಜೀವನ ಒಂದು ಒಳ್ಳೆಯ ರೀತಿಯ ತಿರುವನ್ನು ಪಡೆಯುತ್ತಾನೆ. ಈ ದಲಿತ ಸಂಘರ್ಷ ಸಮಿತಿಯ ಮೂಲಕ ಒಬ್ಬ ಉತ್ತಮ ಸಮಾಜ ಸೇವಕನಾಗುತ್ತಾನೆ.

"ದಂಡಕಾರಣ್ಯ" ಕಾದಂಬರಿಯಲ್ಲಿ ರಾಜನ ಮಗಳು ಗೌರಮ್ಮ ಭಿಕ್ಷುಕನನ್ನು ತನ್ನ ಅರಮನೆಗೆ ಕರೆದುಕೊಂಡು ಹೋಗಿ ಮದುವೆಯಾಗಲು ಇಚ್ಚಿಸುತ್ತಾಳೆ. ಆದರೆ, ಭಿಕ್ಷುಕ ಒಂದು ರಾತ್ರಿ ಕಳೆದ ಮೇಲೆ ನಾಪತ್ತೆಯಾಗುತ್ತಾನೆ. ಇವನ ಮುಂದಿನ ಜೀವನವು ಒಂದು ರೀತಿಯ ಹೋರಾಟವೇ ಸರಿ. ಈ ಭಿಕ್ಷುಕ ಊರೂರು ಸುತ್ತಿ, ದೇಶಗಳಲ್ಲಿ ಸಂಚರಿಸಿ, ಕಾಡು ಮೇಡುಗಳ ಮೂಲಕ ಸುತ್ತಾಡಿ, ಅನೇಕ ವರ್ಷಗಳ ತಪಸ್ಸು, ಅನುಭವದಿಂದ ಜೋಗಿಯಾಗುತ್ತಾನೆ. ಇದರಿಂದ, ಹಲವಾರು ಜನರಿಗೆ ಅನುಕೂಲವಾಗುತ್ತದೆ. ಆದರೆ ಕೊನೆಗೆ ಅವನಿಗೆ ಸಿಗುವುದು ಪ್ರಾಣತ್ಯಾಗ ಮಾಡುವುದು ಒಂದು ವಿಪರ್ಯಾಸ ಎನ್ನಬಹುದು.

"ಸಿಂಗಳೀಕ" ಕಥಾ ಸಂಕಲನದಲ್ಲಿ ಹೆಚ್ಚಾಗಿ ನಾವು ನೋಡುವುದು ಹಸಿವಿನ ವಿರುದ್ಧ ಹೋರಾಡುವುದು. ಇಲ್ಲಿ ಒಂದು ಕಥೆಯಲ್ಲಿ ಬರುವ ರಾಮು, ೧ ರೂಪಾಯಿಗಾಗಿ ತನ್ನ ಪ್ರಾಣವನ್ನು ಕಳೆದುಕೊಳ್ಳುವ ಪ್ರಸಂಗ ಹೃದಯವಿದ್ರಾವಕವಾದ ಪ್ರಸಂಗ. ರೈಲಿನ ಟಿಕೆಟ್‌ಗಾಗಿ ೧ ರೂ. ಕೊಟ್ಟರೆ ಟೀ, ಬ್ರೆಡ್‌ಗೆ ದುಡ್ಡು ಇರುವುದಿಲ್ಲ ಎಂದು ತಿಳಿದು, ರೈಲ್ವೆ ಮಾಸ್ಟರ್ ಬೋಗಿಗೆ ಹತ್ತುತ್ತಾನೆ. ಆದರೆ, ಅವನ ದುರಾದೃಷ್ಟ, ರೈಲ್ವೆ ಮಾಸ್ಟರ್ ೧ ರೂ. ಕೊಡು ಎಂದು ದುಂಬಾಲು ಬೀಳಲು, ವಾದ-ವಿವಾದದಿಂದ ರಾಮು ರೈಲಿನಿಂದ ಜಿಗಿಯಲು ಪ್ರಯತ್ನಪಟ್ಟು ಪ್ರಾಣ ಕಳೆದುಕೊಳ್ಳುತ್ತಾನೆ. ಆ ಹಣಕ್ಕೂ ಅಲ್ಲಿ ಬೆಲೆಯಿರುವುದಿಲ್ಲ.

"ಮಾಮರದ ಮೇಲೊಂದು ಕೋಗಿಲೆ"ಯಲ್ಲಿ ದಲಿತರ ಬಡಮಕ್ಕಳ ವಿರುದ್ಧ ಅನ್ಯಾಯ ದೌರ್ಜನ್ಯಗಳು ನಡೆಯುತ್ತಿರುತ್ತಲೇ ಇರುತ್ತವೆ. ದಲಿತರ ಮಕ್ಕಳ ಹಾಸ್ಟೆಲ್ ಊಟಕ್ಕೆ ಸರಕಾರಿ ನೌಕರರು ಬಂದು ನುಂಗುವುದು, ಮೇಲ್ಜಾತಿಯವರ ದಬ್ಬಾಳಿಕೆ ವಿರುದ್ಧ, ಆ ಮಕ್ಕಳು ಪ್ರತಿಭಟಿಸುತ್ತಾರೆ. ಆದರೆ, ಅಧಿಕಾರಿಗಳು ಲಂಚ ತಿನ್ನುವುದರ ಮೂಲಕ, ಬಡಮಕ್ಕಳ ವಿರುದ್ಧ ನಿಲ್ಲುತ್ತಾರೆ. ಸ್ವತಃ ಮುಳ್ಳೂರು ನಾಗರಾಜರು ಅನೇಕ ಹೋರಾಟದ ನಾಯಕತ್ವವನ್ನು ಹೊಂದಿರುತ್ತಾರೆ. ಇವರ ಹೋರಾಟದ ಫಲವಾಗಿ ಸೂಕ್ತ ಅಧಿಕಾರಿಗಳು ಬಂದು, ಕೆಲವು ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಸಮಂಜಸವಾಗಿ ಪೂರ್ತಿ ಆಗದೇ ಇದ್ದರೂ ಕೆಲವು ಸುಧಾರಣೆಗಳಂತೂ ಜಾರಿಗೆ ಬರುತ್ತವೆ.

ಭಾಷಿಕ ಅಧ್ಯಯನದ ಸ್ವರೂಪ

ಸಂಪ್ರದಾಯವನ್ನು ಕುರಿತ ವಿಜ್ಞಾನವೇ ಜಾನಪದ. ಸಾವಿರಾರು ವರ್ಷಗಳಿಂದಲೂ ಇಳೆಯ ಮೇಲೆ ಬಾಳಿ ಬದುಕಿದವರ ಅನುಭವಗಾಥೆಯೆ ಈ ಜನಪದ ಸಂಸ್ಕೃತಿ. ಇಂದಿನವರಲ್ಲಿಯೂ ಆ ಮೂಲಸಂಸ್ಕೃತಿಯು ಜೀವಸಲೆ ಅಡಗಿದೆ. ಶಿಷ್ಟಸಾಹಿತ್ಯಕ್ಕೆ ಮೂಲ ಪ್ರೇರಣೆ ಮೌಖಿಕ ಸಂಸ್ಕೃತಿಯೇ ಹಾಗಾಗಿ ಅಂತರಂಗದ ಕದ ತಟ್ಟುವ ಈ ಸಂಸ್ಕೃತಿ ಸೃಜನಶೀಲ ಮನಸ್ಸಿನ ಪ್ರತೀಕವಾಗಿದೆ. ತಮ್ಮ ಜೀವನ ವಿಧಾನದಲ್ಲಿ ಕಂಡುಕೊಂಡ ಮೌಲ್ಯಗಳನ್ನು ಸಾರ್ವಕಾಲಿಕ ಸತ್ಯವೆಂದು ಭಾವಿಸಿ, ಅದನ್ನು ಮುಂದಿನ ಪೀಳಿಗೆಗೆ ಧಾರೆಯೆರೆದ ಕೊಡುಗೆ ಅನನ್ಯ.

"ನಮ್ಮದು ಏಕರೂಪಿ ಸಂಸ್ಕೃತಿಯಲ್ಲ; ಬಹುರೂಪಿ ಸಂಸ್ಕೃತಿ. ಕನ್ನಡನಾಡು ಒಂದರಲ್ಲೇ ಹಲವಾರು ಸಂಸ್ಕೃತಿಗಳು ನೆಲೆಸಿವೆ. ಒಂದೊಂದು ಪ್ರದೇಶದಲ್ಲಿ ಒಂದೊಂದು ಬಗೆಯ ಜನಸಮುದಾಯಕ್ಕೂ ಒಂದೊಂದು ರೀತಿಯ ಸಂಸ್ಕೃತಿ ರೂಢಯಲ್ಲಿದೆ. ಈ ಸಂಸ್ಕೃತಿಗಳಿಗೆ ಸೇರಿದ ಜನರು ತಮ್ಮದೇ ಆದ ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ರಾಜಕೀಯ ವ್ಯವಸ್ಥೆಗಳನ್ನು ಹೊಂದಿದ್ದು ಅವನ್ನು ಪರಂಪರಾಗತವಾಗಿ ಕಾಯ್ದುಕೊಂಡು ಬಂದಿದ್ದಾರೆ. ಈ ಸಂಸ್ಕೃತಿಗಳ ಅಧ್ಯಯನವು ನಮ್ಮ ಅರಿವನ್ನು ವಿಸ್ತರಿಸುವುದಷ್ಟೇ ಅಲ್ಲ. ಮೂಲಸಂಸ್ಕೃತಿಯ ಸ್ವರೂಪವನ್ನು ತಿಳಿಯಲು ಸಹಕಾರಿಯಾಗಿವೆ". ಇಂತಹ ಸಂಸ್ಕೃತಿಯಲ್ಲಿ ನಂಜನಗೂಡಿನ ಸಂಸ್ಕೃತಿ ಬಹಳ ಮಹತ್ವವಾದುದು. ಇದಕ್ಕೆ ಐತಿಹಾಸಿಕ ಪರಂಪರೆ ಇದೆ.[೧] ಭಾಷೆ ಮಾನವನಿಗೆ ಬಹುಮುಖ್ಯ ಸಂಪರ್ಕ ಮಾಧ್ಯಮ. ಮಾನವನ ದೈನಂದಿನ ಬದುಕನಲ್ಲಿ ಬೇರೂರಿರುವ ವ್ಯವಸ್ಥಿತ ರೂಪ. ಭಾಷೆ ವ್ಯಕ್ತಿಯ ಅನುಭವ ಮತ್ತು ಅನಿಸಿಕೆಗಳನ್ನು ಬೇರೆಯವರಿಗೆ ವ್ಯಕ್ತಪಡಿಸುವ ವ್ಯವಸ್ಥೆ. ಭಾಷೆ ಕೇಳುಗ ಮತ್ತು ಆಡುಗನ ನಡುವೆ ನಡೆಯುವ ಒಂದು ಕ್ರಿಯಾತ್ಮಕ ವ್ಯವಸ್ಥೆ. ಭಾಷೆ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾದದು. ಸಮಾಜವನ್ನು ಪ್ರಮುಖವಾಗಿ ಪ್ರತಿಬಿಂಬಿಸುವ ಸಂವಹನರೂಪ. ಭಾಷೆಯು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾವಣೆಯನ್ನು ತರುತ್ತದೆ. ಏಕೆಂದರೆ ಭಾಷೆ ವ್ಯಕ್ತಿಯ ಜೊತೆಯಲ್ಲಿಯೇ ಬೆಳೆದು ಬಂದಿರುವುದು. ಪರಸ್ಪರ ಇಬ್ಬರು ವ್ಯಕ್ತಿಗಳು ಸಂವಹನ ನಡೆಸುವಾಗ ಭಾಷೆಯು ಪ್ರಮುಖವಾಗಿ ಬೇಕು. ವ್ಯಕ್ತಿಯ ಬಾಯಿಂದ ಹೊರಹೊಮ್ಮುವ ಧ್ವನಿ ಸಂಕೇತಗಳು ಗಾಳಿಯ ಮೂಲಕ ಕೇಳುಗನ ಕಿವಿ ಮುಟ್ಟಿದಾಗ ಸರಳವಾಗಿ ಅರ್ಥೈಸಿಕೊಂಡು ಸಮಾಜದಲ್ಲಿ ಸಂವಹನಕ್ಕೆ ತೊಡಗಿಸಿಕೊಳ್ಳಲು ಭಾಷೆಯಿಂದ ಮಾತ್ರ ಸಾಧ್ಯವಾಗಿದೆ. ಈ ರೀತಿಯ ಭಾಷೆ ಪ್ರಾದೇಶಿಕವಾಗಿಯೂ ಸಹ

---

೧. ಚಾಮರಾಜನಗರ ಸಉತ್ತಿನ ಲಂಬಾಣಿಗರ ಸಂಪ್ರದಾಯಗಳು, ಮಹಾಪ್ರಬಂಧ ಮಾಧವಿಬಾಯಿ, ೨೦೦೫, ಪುಟ. ೨೧–೨೨.

ಭಿನ್ನಭಿನ್ನವಾಗಿರುತ್ತವೆ. ಇವರಲ್ಲಿ ಸಾಕಷ್ಟು ಉಪಭಾಷೆಗಳೂ ಸಹ ಇರುತ್ತವೆ. ಕನ್ನಡ ಭಾಷೆಯ ರಚನೆ ಮತ್ತು ಬೆಳವಣಿಗೆಯನ್ನು ಕುರಿತು ಸಾಕಷ್ಟು ಮೌಲಿಕ ಭಾಷಾ ವೈಜ್ಞಾನಿಕ ಅಧ್ಯಯನಗಳು ನಡೆದಿವೆ. ನಾವು ಪ್ರಸ್ತುತದಲ್ಲಿ ನಂಜನಗೂಡಿನ ಸುತ್ತಲಿನ ಭಾಷೆಗಳ ಬಗ್ಗೆ ತಿಳಿದುಕೊಳ್ಳಲು, ಯತ್ನಿಸಿದಾಗ, ಮೈಸೂರು ಜಿಲ್ಲೆಗೆ ಸೇರಿದ ತಾಲ್ಲೂಕು ಕೇಂದ್ರಗಳಲ್ಲಿ ನಂಜನಗೂಡು ತಾಲ್ಲೂಕು ಒಂದು. ಇದು ಆಗ್ನೇಯದಲ್ಲಿ ಚಾಮರಾಜನಗರ, ಯಳಂದೂರು ದಕ್ಷಿಣದಲ್ಲಿ ಗುಂಡ್ಲುಪೇಟೆ, ಪಶ್ಚಿಮದಲ್ಲಿ ಹೆಗ್ಗಡದೇವನಕೋಟೆ. ಉತ್ತರದಲ್ಲಿ ಮೈಸೂರು, ಪೂರ್ವದಲ್ಲಿ ತಿರುಮಕೂಡಲು ನರಸೀಪುರ ತಾಲ್ಲೂಕುಗಳು ಸುತ್ತುವರೆದಿವೆ.

ಕನ್ನಡವನ್ನು ನಾವು ಕ್ರಿ.ಶ. ೨ನೇ ಶತಮಾನದಿಂದಲೇ ಗುರುತಿಸಬಹುದೆಂದು, ಸಂಶೋಧನೆಯ ತಜ್ಞರ ಮೂಲಕ ತಿಳಿದಿದ್ದೇವೆ. ಕನ್ನಡವು ದ್ರಾವಿಡ ಭಾಷೆಗಳಲ್ಲಿ ಒಂದು. ಭಾರತದಲ್ಲಿನ ಭಾಷೆಗಳಲ್ಲಿ ಪ್ರಾಚೀನತೆ ಮತ್ತು ವಿಪುಲ ಸಾಹಿತ್ಯವಿರುವ ಸಂಸ್ಕೃತ ಭಾಷೆ ಮೊದಲ ಸ್ಥಾನವನ್ನೂ, ದ್ರಾವಡ ಭಾಷೆಗಳಲ್ಲಿ ತಮಿಳು ಮೊದಲನೆಯ ಸ್ಥಾನವನ್ನೂ, ಕನ್ನಡ ಎರಡನೆಯ ಸ್ಥಾನವನ್ನೂ ಪಡೆದುಕೊಂಡಿದೆ. ಕನ್ನಡ ಸಾಹಿತ್ಯಕ್ಕೆ ೧೫೦೦ ವರ್ಷಗಳ ಇತಿಹಾಸವಿದೆ. ಕನ್ನಡ ಮಾತನಾಡುವ ಜನ ಕನ್ನಡಿಗರು, ಇವರ ಸಂಖ್ಯೆ ಸುಮಾರು ೬ ಕೋಟಿಗೂ ಹೆಚ್ಚು. ಇವರು ನೆಲೆಸಿರುವ ನಾಡು ಕರ್ನಾಟಕ. ಪ್ರಾಚೀನ ಹಾಗೂ ಆಧುನಿಕ ಅಗಾಧ ಸಾಹಿತ್ಯ ಪರಂಪರೆಯನ್ನು ಹೊಂದಿರುವ ಕನ್ನಡ ಭಾಷೆ ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಪ್ರಧಾನ ಭಾಷೆ. ಆರು ಕೋಟಿ ಕನ್ನಡಿಗರ ಮಾತೃಭಾಷೆ ಹಾಗೂ ಲಿಖಿತ ಸಾಹಿತ್ಯ ಪರಂಪರೆ ೧೮ ಭಾಷೆಗಳಲ್ಲ ಕನ್ನಡವೂ ಕೂಡ ಒಂದು. ಕನ್ನಡ ಭಾಷೆ ತನ್ನದೇ ಆದ ಪ್ರಾದೇಶಿಕ ಹಾಗೂ ಸಾಮಾಜಿಕ ಉಪಭಾಷೆಗಳನ್ನು ಹೊಂದಿದೆ. ಮೈಸೂರು ಕನ್ನಡ, ಧಾರವಾಡ ಕನ್ನಡ, ಮಂಗಳೂರು ಕನ್ನಡ ಇವು ಕನ್ನಡ ಭಾಷೆಯ ಪ್ರಧಾನ ಉಪಭಾಷೆಗಳು. ಈ ಉಪಭಾಷೆಗಳನ್ನು ಅನೇಕ ವಿಶಿಷ್ಟತೆಯನ್ನು ಕಾಣಬಹುದು. ಗ್ರಾಮ ಗ್ರಾಮಗಳಿಗೂ ವ್ಯತ್ಯಾಸವಿರುತ್ತದೆ. ಒಂದು ಜಾತಿಯಿಂದ ಮತ್ತೊಂದು ಜಾತಿಗೂ ವ್ಯತ್ಯಾಸವಿರುತ್ತದೆ. ಭಾಷೆಗಳಲ್ಲಿ ಅನೇಕ ವ್ಯತ್ಯಾಸಗಳಿರುತ್ತವೆ. ಉಚ್ಚರಿತ ಭಾಷೆಯಲ್ಲಿ ವ್ಯತ್ಯಾಸವಿರುತ್ತದೆ. ಅರ್ಥ ಒಂದು ರೀತಿಯಿದ್ದರೆ, ಜನರ ರೂಢಿಯಿಂದ ಅದು ಬೇರೆ ಅರ್ಥಪಡೆದುಕೊಂಡಿದೆ. ಹೀಗೆ ಲೇಖಕರ ಪ್ರದೇಶದ ನಂಜನಗೂಡಿನ ಭಾಷಿಕ ಸ್ವರೂಪವನ್ನು ನೋಡಬಹುದಾಗಿದೆ.

ನಂಜನಗೂಡಿನ ಈಶಾನ್ಯಕ್ಕೆ ತೊರೆಮಾವು, ಮುಳ್ಳೂರು ಗ್ರಾಮಗಳು ನಂಜನಗೂಡು ಸಮುದ್ರಮಟ್ಟದಿಂದ ಸುಮಾರು ೮೦೦ ಅಡಿಗಳಷ್ಟು ಎತ್ತರದಲ್ಲಿದೆ. ಕಪಿಲಾನದಿ ಪ್ರಮುಖವಾಗಿ ಹರಿಯುತ್ತದೆ. ಇದರ ದಡದ ಬಳಿ ಕಲ್ಲಳ್ಳಿ ಗುಡ್ಡವನ್ನು, ಉತ್ತರದಲ್ಲಿ ಪಂಚಲಿಂಗನ ಗುಡ್ಡವನ್ನು, ಆಗ್ನೇಯದಲ್ಲಿ ಮುಳ್ಳೂರು ಗುಡ್ಡವನ್ನೂ

ನೋಡಬಹುದಾಗಿದೆ. ಇದಲ್ಲದೆ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ನಂಜನಗೂಡು ಹೊಂದಿದೆ. ನಂಜನಗೂಡಿನ ಪ್ರದೇಶಕ್ಕೆ ಸೇರಿದ ಅನೇಕ ಶಾಸನಗಳನ್ನು ಗದ್ದೆ, ಬೆದ್ದಲು, ತೋಟ, ತುಡಿಕೆ, ಕಳ ಕೊಠಾರಗಳನ್ನು ಉಲ್ಲೇಖಿಸಬಹುದು. ಇದರ ಇತಿಹಾಸವನ್ನು ನಾವು ಕ್ರಿ.ಶ. ೧೦ನೇ ಶತಮಾನದ ನಂತರದಲ್ಲಿ ಗುರುತಿಸಬಹುದಾಗಿದೆ. ನಂಜನಗೂಡಿನ ಮೇಲೆ ಸಾಮ್ರಾಜ್ಯಶಾಹಿ ಹಾಗೂ ಸಾಮಂತ ಮನೆತನಗಳೆರಡೂ ಪ್ರಭಾವ ಬೀರಿವೆ. ನಂಜನಗೂಡು ಪ್ರವೇಶವನ್ನು ಸಾಮ್ರಾಟರು, ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು, ಸಾಮಂತರು, ಪದಿನಾಲ್ಕು ನಾಡ ಅರಸರು, ಉಮ್ಮತ್ತೂರು ಪ್ರಭುಗಳ, ಕಳಲೆ ದಳವಾಯಿಗಳು ಮುಂತಾದವರು ಆಳಿದ್ದಾರೆ. ನಂಜನಗೂಡಿಗೆ ಸೇರಿದ, ಅನೇಕ ಗ್ರಾಮಗಳನ್ನು ಕೆಲವು ಐತಿಹಾಸಿಕ ವಿಷಯಗಳನ್ನು ಗುರುತಿಸಿರಬಹುದು. ನಂಜನಗೂಡು ಪ್ರದೇಶ ಸಾಂಸ್ಕೃತಿಕ ನೆಲೆಯನ್ನು ಹೊಂದಿರುವ ಕೇಂದ್ರ. ಸಂಸ್ಕೃತಿ ವ್ಯಕ್ತಿಯಿಂದ ವ್ಯಕ್ತಿಗೆ ಮತ್ತು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಭಾಷೆ ಸಂಸ್ಕೃತಿಯ ಒಂದು ಅಂಗ. ಸಂಸ್ಕೃತಿಯು ಸಮಾಜದಲ್ಲಿರುವ ವ್ಯಕ್ತಿಯನ್ನು ಅವಲಂಬಿಸಿರುತ್ತದೆ. ಅನೇಕ ಧಾರ್ಮಿಕ ಕ್ಷೇತ್ರಗಳು ಮತ್ತು ಅನೇಕ ಪಂಗಡದವರು ಇಲ್ಲಿ ನೆಲೆಸಿದ್ದಾರೆ.

ಮುಳ್ಳೂರರು ತಮ್ಮ ಕೃತಿಯಾದ ದಂಡಕಾರಣ್ಯದ ಕೊನೆಯ ಅಧ್ಯಾಯಗಳಲ್ಲಿ ಸರಕಾರಿ ಹಾಸ್ಟೆಲ್‌ನ ದುಸ್ಥಿತಿಯನ್ನೂ ಸಹ ಸರಳವಾದ ಭಾಷೆಯಲ್ಲಿ ಹೇಳಿದ್ದಾರೆ. ಮಧ್ಯೆ ಮಧ್ಯೆ ಇಂಗ್ಲಿಷನ ಪದಗಳು ಅಡಕವಾಗಿವೆ. ಉದಾಹರಣೆಗೆ ಒಂದರ್ಜಿ ಆಫೀಸರಗೆ, ಸೋಷಿಲ್ ವೆಲ್ಫೇರ್ ಇತ್ಯಾದಿ. "ಆ ಹಾಸ್ಟಲು ಅಂದ್ರಾ ದಯ್ಯದ ಮನೆ ರೀತಿಯಾಗಿತ್ತು. ಮೂಲೋಕದ ಕೊಳಕ್ತನ ಅಲ್ಲಿ ನಿದ್ದಾ ಲೋಕದಲ್ಲಿ ತಲ್ಲೀನವಾಗಿ ಬಿದ್ಕಂಡಿತ್ತು. ದಿಕ್ಕಾಪಾಲು ದಿವಾಳಿ ಮರುಮಕ್ಳು ಯಾರೋ ಆ ಹಾಸ್ಟೆಲ್‌ನೀಗ ನಡ್ಸುಕೊಂಡು ಬರ್‍ತಿದ್ರು. ಅಲ್ಲಿ ಹೈಕಳುಗಾ ಒಂಜಿನಾ ಊಟವಿದ್ರಾ ಒಂಬತ್ತು ಜಿನ ಊಟವಿರ್‍ತಿರಲಿಲ್ಲ. ಕಾಲ-ಕಾಲಕೆ ಗ್ರಾಂಟು ಬಂದರು ಕೂಡಾ ಅಲ್ಲಿ ಓದುತಿರಾ ಹೈಕಳುಗಾ ಕಾಲ-ಕಾಲಕೆ ಸರಿಯಾಗ ಊಟಾ ದೊರಕ್ತಿರಲಿಲ್ಲ. ನರಲೋಕ ನರಕದಂತಾ ಹಾಸ್ಟಲೀಗ ಈ ಸಿವಣ್ಣನಾದವನು ಬಂದುದು ಅವ್ಯಾಳದಲಿ ಅಕಾಲದಲಿ...." ಈ ರೀತಿ ಸರಳವಾದ ಗ್ರಾಮೀಣ ಭಾಷೆಯನ್ನು ಹೇಳಿರುವುದು, ಗ್ರಾಮೀಣ ಪ್ರಜ್ಞೆಯನ್ನು ಓದುಗನಲ್ಲಿ ಮೂಡಿಸುತ್ತದೆ.[೧]

ಆತ್ಮಚರಿತ್ರೆಯಲ್ಲಿ, ಸರಳವಾದ ನಾಗರಿಕ ಭಾಷೆಗೆ ಹೆಚ್ಚು ಒತ್ತುಕೊಟ್ಟಿದ್ದಾರೆ. ಕಥಾಸಂಕಲನವಾದ ಸಿಂಗಳೀಕದಲ್ಲಿ ನಾಗರಿಕ ಭಾಷೆ ಮತ್ತು ಗ್ರಾಮೀಣ ಭಾಷೆಯ ಮಿಶ್ರಣವನ್ನು ಸೇರಿಸಿ, ಗದ್ಯ ರಚಿಸಿರುವುದು ವಿಶಿಷ್ಟವಾಗಿದೆ. ಹೀಗೆ ಭಾಷೆಯ

೧. ದಂಡಕಾರಣ್ಯ, ಸಿವು ಕಪ್ಪುಮ್ಮರ ಪ್ರಣಯ ಪಂಚಾಂಗವೂ, ಪುಟ. ೯೦-೯೧.

ವಿಶೇಷತೆಯನ್ನು ಗಮನಿಸಬಹುದು. ಮುಳ್ಳೂರು ಇಷ್ಟೇ ಅಲ್ಲದೆ, ತಮ್ಮ ಕಾವ್ಯಗಳನ್ನು ತಮ್ಮ ಸೊಗಡನ್ನು ತೋರಿಸಿದ್ದಾರೆ. 'ಮರಣ ಮಂಡಲ ಮಧ್ಯದೊಳಗೆ' ಕಾದಂಬರಿಯಲ್ಲಿ ಬರುವ ಬಸವರಾಜುವಿನ ಪಾತ್ರದ ಸಂಭಾಷಣೆ, ಪ್ರಸನ್ನಕುಮಾರ್ ಹೊಲಾರನ RSSರ ಜೊತೆಗಿನ ಸಂಭಾಷಣೆಗಳು ಅತ್ಯಂತ ಸರಳವಾಗಿ ಬಂದಿವೆ. ಗ್ರಾಮೀಣ ಭಾಷೆಗೆ ಲೇಖಕರು ಹೆಚ್ಚು ಒತ್ತು ನೀಡಿದ್ದಾರೆ. ಆ ಗ್ರಾಮೀಣ ಭಾಷೆಯಲ್ಲಿ ಕಥೆ, ಕಾದಂಬರಿಗಳು ಒಂದು ಛಾಪನ್ನು ಪಡೆದುಕೊಂಡಿವೆ. ಪರಿಸರವಾದಿಗಳು ಓದಿ ಎದೆತಟ್ಟಿಕೊಂಡು ಹೇಳಬಹುದಾದ ಸಾಲುಗಳು ಹೀಗಿವೆ:

"ಹಣಕಾಗಿ ಮಾನವರು ಹಣಗಳ ನಾರು ತಿಂಗರ
ನರಲೋಕದಲ್ಲಿ ನರರು ನರರ ಕೊಲ್ತರ
ಹೆತ್ತ ತಾಯನು ಕೊಂದ ಪರಸುರಾಮರು ಕೋಟಿ – ಕೋಟಿ
ಕೂಡಿದೆಂಡರ ಸುಟ್ಟ ಸಿರಿರಾಮರು ಅದಕೂ ಡಬಲ್ ಕೋಟಿ
ದುಕ್ಕಬ್ಯಾಡವ್ವ ತಂಗಿ ದುಕ್ಕಬ್ಯಾಡವ್ವ – ನೇರುಳಾ
ಮರದ ಮಾತು ಮುಗಿಯಲೂ ಆ ತಾರಾಮರವೂ
ನರಮಾನವರಾದರೇನಕ್ಕ ಅವರು ನಮ್ಮ ಮಕ್ಕಳಲ್ವ
ನಾವು ಅವರುಗ ನೆರಳು ನೀಡಲ್ವ
ಅವರು ತಿನ್ನಕ್ಕ ನೀವಿಯಾ ಸೀಯಾದ ಹಣ್ಣಗಳ ನೀಡಲ್ವ
ಅವರು ನಮ್ಮ ತರಿದರೇನಕ್ಕ ಅವರು ನಮ್ಮ ಮಕ್ಕಳಲ್ವ?

ಆ ತಾರಮರದ ಮಾತನು ಕೇಳಿ ನೇರುಳಾ ಮರವಾದುದು ಕುಲುಕುಲು ಅಯ್ಯಾ ನರಲೋಕದ ಹಣಬರವೆ ಅಂತು....." [೧]

ಇದನ್ನು ನೋಡಿದರೆ ಮನುಷ್ಯನಿಗೂ, ಮರಗಳಿಗೂ ಇರುವ ವ್ಯತ್ಯಾಸ ತಿಳಿಯುತ್ತದೆ. ಪ್ರಕೃತಿ ಬಗ್ಗೆ ಲೇಖಕರಿಗಿರುವ ಅಪರಿಮಿತ ಪ್ರೀತಿಯಿರುವುದು ಅವರ ಕಾದಂಬರಿ, ಕಥೆ, ಆತ್ಮಚರಿತ್ರೆಯನ್ನು ಗಮನಿಸಿದರೆ ತಿಳಿಯುತ್ತದೆ. ಆತ್ಮಕಥೆಯಲ್ಲೂ ಮರಗಳ ನಡುವೆ ನಡೆದಿರುವ ಎಷ್ಟೊ ಘಟನೆಗಳನ್ನು ಲೇಖಕರು ಉಲ್ಲೇಖಿಸಿದ್ದಾರೆ. ಇದಕ್ಕೆ ಅವರ ನಿಸರ್ಗ ಪ್ರೇಮವೇ ಕಾರಣವಾಗಿರಬಹುದು. ಅವರಿಗಿರುವ ಗ್ರಾಮೀಣರ ಬದುಕಿನ ಕಾಳಜಿಯನ್ನು ಅವರ ಕೃತಿಗಳಲ್ಲಿ ಗುರುತಿಸಬಹುದು.

ವಿಶಿಷ್ಟ ಶೈಲಿಯ ಬಂಧದಲ್ಲಿ ಆಪ್ತವಾಗಿ ಬಿಚ್ಚಿಕೊಳ್ಳುವ ಮಾದಕತೆ ಭಾಷಿಕದ ಒಂದು ವೈಶಿಷ್ಟ್ಯ ಈ ಕಾದಂಬರಿಯ ಹೆಚ್ಚಳಗಳಲ್ಲೊಂದು. ಪುರಾಣಗಳಲ್ಲಿ ಜನಪದದಲ್ಲಿ ಪೂತುಪೋದ ಸಂಗತಿ ಸೂಕ್ಷ್ಮ ಆಶಯಾದಿಗಳ ನೇಯ್ಗೆಯನ್ನು

---

೧. ದಂಡಕಾರಣ್ಯ (ಅರ್ಥಯ ೩. ಕೊಲೆಯ ಕೋಗಿಲೆಯು ಬಂದ ಪರಿಯೂ) ಪು. ೩೩–೩೪.

ಕುಸುರಿಯಿಂದ ಕಲಾತ್ಮಕವಾಗಿ ಬಿಡಿಸುವ ಚಾಣಲೇಖಣಿ ಬೆರಗಿಗೆ ಆಶ್ಚರ್ಯವಾಗುತ್ತದೆ. ಅಂತೆಯೇ ನಾವು ಇದರಲ್ಲಿ ಜಾನಪದೀಯ ನಂಬಿಕೆ ಆಚರಣೆಗಳನ್ನು ಸಹ ನಾವು ಕಾಣಬಹುದು. ಗ್ರಾಮೀಣ ಪ್ರದೇಶದಲ್ಲಿ ಕಾಯಿಲೆ ಬಿದ್ದಾಗ ಮಾಡುವ ಪೂಜೆ, ಪುನಸ್ಕಾರಗಳು, ಪೂಜೆಯ – ವಿಧಿ–ವಿಧಾನ, ತಾಯತ ಕಟ್ಟುವುದು, ದೇವರು ಮೈಮೇಲೆ ಬರುವುದು, ಮುಂತಾದ ಮೂಢನಂಬಿಕೆಗಳನ್ನು ಕಾಣಬಹುದು. ಇದನ್ನು ನಾವು ಲೇಖಕರ ಆತ್ಮಚರಿತ್ರೆಯಲ್ಲಿ ಗಮನಿಸಬಹುದು. ಲೇಖಕರು ಖಾಯಿಲೆ ಬಿದ್ದಾಗ ಅವರ ಅಜ್ಜಿ, ಅಮ್ಮ ಮಾಡುವ ಪೂಜೆ, ನಂಬಿಕೆಗಳನ್ನು ಲೇಖಕರೆ ಉಲ್ಲೇಖಿಸಿದ್ದಾರೆ.

ಪ್ರಾರಂಭದ ಅಧ್ಯಾಯಗಳನ್ನು ನಾವು ಪ್ರಾಸಬದ್ಧ, ವಚನ ರೂಪಕಗಳನ್ನು, ಕಾದಂಬರಿಯಲ್ಲಿ ಗಮನಿಸಿದರೆ, ಕಡೆಯ ೩–೪ ಅಧ್ಯಾಯಗಳಲ್ಲಿ ಕನ್ನಡ ಗದ್ಯದ ಆಹ್ಲಾದತೆ, ಹೃದ್ಯತೆ, ಗೇಯತೆಗಳು ಮೆಲುಕು ಹಾಕುವಂತಿದೆ. ಪ್ರಕೃತಿಯು ಈ ಕಾದಂಬರಿಯಲ್ಲಿ ಪ್ರಧಾನವಹಿಸುತ್ತವೆ. ಪ್ರಕೃತಿಯ ಪ್ರೀತಿ, ಅದರೊಂದಿಗೆನೆ ಬೆರೆತು ಬೆಳೆಯುವ ಬೆಸುಗೆ ಲೇಖಕರಿಗೆ ಪ್ರಿಯವಾದ್ದು. ನಿಸರ್ಗ ಈ ಕಾದಂಬರಿಯ ಜೀವಧ್ವನಿ, ಜೀವಕಳೆ, ತುಂಬಿವೆ. ಮರಗಳಿಗೆ ಮಾನವರ ಬಗ್ಗೆ ಇರುವ ಕಾಳಜಿ ಮೆಚ್ಚುಗೆ ಅರ್ಹವಾಗಿದೆ. ಮರಗಳು ಮನುಷ್ಯರು ನಮ್ಮ ಮಕ್ಕಳಲ್ವ ಎನ್ನುವುದು, ಎಂತಹವರನ್ನು ಆಶ್ಚರ್ಯಗೊಳಿಸುತ್ತವೆ. ಮರಗಳ ಜೊತೆ ಮಾನವನು ನಡೆದುಕೊಳ್ಳುವ ರೀತಿ ಅವಮಾನಕರ ಸಂಗತಿ. ಮರಗಳ ನಡುವೆ ನಡೆಯುವ ಸಂಭಾಷಣೆಯನ್ನು ಈ ರೀತಿಯ ಪ್ರಾಸದ ಗುಣವನ್ನು ನಾವು ಕಾಣಬಹುದು. ಬರೀ ಪ್ರಾಸಗಳೇ ಅಲ್ಲದೆ ವಚನ, ರೂಪಕಗಳನ್ನು ಇಲ್ಲಿ ಗುರುತಿಸಬಹುದು. ಈ ಕಾದಂಬರಿಪೂರ್ಣ ಹೆಚ್ಚು ವರ್ಣನೆಗಳೇ ಇವೆ. ಲೇಖಕರ ಸ್ವತಃ ಹೇಳಿರುವಂತೆ ಪದ್ಯ ಅಚ್ಚುಮೆಚ್ಚು, ಗದ್ಯ ಎಂದರೆ ಅಲರ್ಜಿ ಎಂದು ಹೇಳಿದ್ದಾರೆ. ಇದೇ ಕಾರಣದಿಂದಲೇನೊ ಪದ್ಯಗಳು ಗದ್ಯದಲ್ಲೂ ಸರಾಗವಾಗ ಹರಿದುಬಂದಿದೆ. ಈ ಕಾದಂಬರಿಯಲ್ಲಿ ನಮಗೆ ಅನೇಕ ರೀತಿಯ ಅನುಭವಗಳು ಉಂಟಾಗುತ್ತವೆ. ಸಂಭಾಷಣೆಯ ಜೀವಂತಿಕೆ ಲವಲವಿಕೆ, ಜಿನುಗುವ, ನೇರಳೆಮರ, ತಾರಾಮರಗಳ ನಡುವೆ ನಡೆಯುವ ಚರ್ಚೆಗೆ ಕಿವಿಗೊಡಬೇಕು. ವರ್ಣನೆಯೇ ಸಿಂಧುವಾಗಿ ಸುತ್ತಲೂ ಆವರಿಸಿ ತುಂಬಿಕೊಂಡು ಮೂಲಕಥೆ ಒಂದು ಬಿಂದುವಿನೋಪಾದ ಮೂಲೆ ಸರಿದು ಮೊಗಮ್ಮಾಗಿದೆ. ಒಮ್ಮೆ ಮಾರಮ್ಮನ ಕಥೆ ಹೇಳುವ ಹಾಗೆ ಕೇಳಿಸುತ್ತದೆ. ಇನ್ನೊಮ್ಮೆ ಜೋಗಪ್ಪರ ಧಾಟಿ ನೆನಪಾಗುತ್ತದೆ. ಮತ್ತೊಮ್ಮೆ ಚೌಡಿಕೆಯವರ ಥರಾ ಎಂದೆನಿಸುತ್ತದೆ. ಮಗದೊಮ್ಮೆ ಸರಳ ರಗಳೆಯ ಕಾವ್ಯಕೋದು ಸರಗಟ್ಟಿದ ಶರಣರ ವಚನಮಾಲೆ ಓದುತ್ತಿರುವ ಅನುಭವವಾಗುತ್ತದೆ.

ಅದು ಉಂಡಿತ್ತೋ ಉಪವಾಸವಿತ್ತೊ ದಾರು ಬಲ್ಲರು

ಅದು ಆ ಎಲುಬು ಮೂಳೆಯ ಹಂದರವು ಯಾಕಲ್ಲಿ ಮಲಗಿತ್ತೂ ದಾರುಬಲ್ಲರು

ದಾರು ಬಲ್ಲರು

ಅನ್ನದಾಸೆಯೂ ನರದಾಹವೂ ಅದರೊಳಗಿತ್ತೂ ಇಲ್ವೋ ದಾರು ಬಲ್ಲರು

ಆ ಜೀವವ ನೆನ್ನೆಗಳೂ ಆ ಜೀವದ ನಾಳೆಗಳೂ ಹೆಂಗಿದ್ದುವೋ ದಾರುಬಲ್ಲರು

ಕಿವುಡನಯ್ಯ ಸಿವನು ಕಿವಿಯು ಅವಗೆ ಕೇಳದು

ಕುರುಡನಯ್ಯ ಸಿವನು ಕಣ್ಣು ಅವಗೆ ಕಾಣದು

ಮೂಕನಯ್ಯ ಸಿವನು ಮಾತು ಅವಗೆ ಬರದು

ಹೇಳವನಯ್ಯ ಸಿವನು ಕಾಲು ಅವಗೆ ಇಲ್ಲವು

ಈ ರೀತಿ ಈ ಕಾದಂಬರಿಯುದ್ದಕ್ಕೂ ಪ್ರಾಸಗಳನ್ನು ನಾವು ಕಾಣಬಹುದು. ಇಲ್ಲಿ ಹೆಚ್ಚು, ನಾವು ವರ್ಣನೆಗಳ ಹೋಲಿಕೆಯನ್ನು ನೋಡುವುದರಿಂದ ಈ ರೀತಿಯ ಪ್ರಾಸಗಳು ಓದುಗರ ಗಮನವನ್ನು ಸೆಳೆಯುತ್ತವೆ.

ಇಷ್ಟೇ ಅಲ್ಲದೆ ನಾವು ರಾಶಿಗೊತ್ತು   ಕಾಡನೊಳುಗಲ

ಪ್ರೀತಿಗ್ಗೊತ್ತು   ನಾಡಿನೊಳುಗಲ

ಚಂದ್ರಗ್ಗೊತ್ತು

"ಬೆಳುದ ಮಗಳು ಸೆರುಗನ ಕೆಂಡವಾದಳೂ
ಹುಚ್ಚು ಹರೆಯದ ಅರಗಿಳಿಯಾದಳೋ
ದಾರಿ ಕಾಯುವ ತುಂಬಿಗಳ ಬಳಗಕೆ ತಂಪಾದಳೂ
ಅವಳೂ ತಂಪು ಬೆಂಕಿಯಾದಳೂ"[೧]

ನೇರಳೆ ಮರವು ರಾಜಕುಮಾರಿಯ ವರ್ಣನೆಯನ್ನು ಹೇಳುತ್ತಾ ಈ ರೀತಿ

"ಕಾಡು ಕಂಪಿತು ಚಲುವಿನ ನವಿರಾಗಿ
ನಾಡು ನಕ್ಕಿತು ಚೆಲುವಿಗೆ ಮರುಳಾಗಿ
ಗಾಳಿ ಹೇಳಿತು ಚಲುವಿನ ಕವನ, ಹರಿವ ನದಿಯು
ಮರುಳಾಯ್ತು ಚಲುವಿಗೆ
ಚಂದ್ರಸೂರ್ಯರು ಮರುಳಾದರು
ಅವಳ ಚಲುವನು ಕಂಡು!

೧. ದಂಡಕಾರಣ್ಯ ಅಧ್ಯಾಯ ೩, ವೃಕ್ಷ ವೃತ್ತಾಂತ, ಪುಟ ೧೪.

ಕಾಲದ ಪಕ್ಷಯೂ ರೆಕ್ಕೆಯ ಬೀಸಿ ಹಾರುತ್ತಿರಲೂ
ಹಕ್ಕಿಯ ಲೋಕವ ಚಿಕ್ಕಯ ಲೋಕವ ಬಳಸುತ್ತಿರಲೂ
ಮರಗಳ ಮೇಲ ಗರಿಗಳ ಮೇಲ ಚಲಿಸುತ್ತರಲೂ
ನದಿಗಳ ಮೇಲ ತೊರೆಗಳ ಮೇಲ ಹರಿಯುತ್ತಿರಲೂ
ನಿಲ್ಲದ ಕಾಲದ ನಿಜಗುಣವನ್ನು ಮರೆಯುತ್ತಿರಲೂ
ಈ ನರಲೋಕ ಸುಂದರಿಯರು ಒಲವಿನ ಪರಿಯಳವಾಗಿ
ಹಬ್ಬಿದಳಲ್ಲಾ"[೧]

ತಾರಮರ, ನೇರಳೆ ಮರವನ್ನು ಅಕ್ಕ ಎಂದೂ ಸಂಬೋಧಿಸುತ್ತಾ, ಬುಡದ ಕೆಳಗೆ ಬಿದ್ದಿರುವ, ಆ ನರಹುಳವ ಕಥೆಯನ್ನು ಹೇಳು ಎಂದು ದುಂಬಾಲು ಬೀಳುತ್ತದೆ. ಕಥೆಯನ್ನು ಶುರುಮಾಡಿದಾಗ, ಆ ಸಂಭಾಷಣೆಯಲ್ಲಿ ನಾವು ಅನೇಕ ಪ್ರಾಸಗಳನ್ನು ಹೀಗೆ ಗುರುತಿಸಬಹುದು. ಕೇಳಮ್ಮ, ಕಂದಮ್ಮ, ನನ್ನಮ್ಮ, ತಾರಮ್ಮ ಈ ರೀತಿ ಉದಾಹರಿಸಬಹುದು.

'ಕೇಳು ಕೇಳಮ್ಮ ಕಂದಮ್ಮ ಕೇಳು ಕೇಳಮ್ಮ ನನ್ನಮ್ಮ
ತಾಯಮ್ಮ ತಂಗೆಮ್ಮ ಚಂದ್ರನೂರಿನ ಸುಂದರಿ ತಾರಮ್ಮ
ನಾಕದಲಿ ಈ ಕತೆಯು ಇಲ್ಲ ನರಕದಲಿ ಈ ಕತೆಯು ಇಲ್ಲ
ನರಜಲಮದ ಹಣೆಬರವು ರಕುತದಲಿ ಮಿಂದ ಕತೆಯನು
ಕೇಳಮ್ಮ
ಕೇಳುಗಾ ಈರೇಳು ಲೋಕಾ ಮೇಲಾ ಈರೇಳು ಲೋಕ
ನಟ್ಟಿನಡೂ ಮಧ್ಯದಲಿ ಜಲಾವೃತ ಲೋಕ ಭೂಲೋಕ
ಈ ಲೋಕದ ಹೃದಯ ಮಧ್ಯದಲಿಹುದು ತಂಗಿ ತಾಯಮ್ಮ
ಚೆಂದದ ಗಿರಿಗಳು ಅಂದದ ವನಗಳು ತೂಗುವ ಲೋಕ
ಈ ಲೋಕ ನರಲೋಕ ಈ ಲೋಕ ಮರಲೋಕ
ಸಕಲ ಪಸುಪಕ್ಷಿಗಳು ಹಸಿರು ರುಕ್ಷಗಳು ಮೆರುದಾಡಾಲೋಕ
ತಂಗಿತಾಯಮ್ಮ, ಮುದ್ದುತಾರಮ್ಮ, ಕೇಳು ಕೇಳಮ್ಮ
ಕೇಳು ಕಂದಮ್ಮ ನರಲೋಕದ ಕತೆಯ
ಕೇಳು ಕೇಳಮ್ಮ ಸತ್ಯವು ಗಲ್ಲಗೀರಿದ ಕತೆಯ'[೨]

೧. ದಂಡಕಾರಣ್ಯ ಅಧ್ಯಾಯ ೩, ವೃಕ್ಷ ವೃತ್ತಾಂತ, ಪುಟ ೧೯-೨೦.
೨. ದಂಡಕಾರಣ್ಯ ಅಧ್ಯಾಯ ೩, ವೃಕ್ಷ ವೃತ್ತಾಂತ, ಪುಟ ೧೦.

[illegible]

[illegible]

[illegible]

[illegible]

ಮುಳ್ಳೂರರು ಗ್ರಾಮೀಣ ಸೊಗಡನ್ನು ನಾವು ಅವರ ಕಾದಂಬರಿಗಳಾದ 'ಮರಣ ಮಂಡಲ ಮಧ್ಯದೊಳಗೆ', 'ದಮಡಕಾರಣ್ಯದಲ್ಲಿ ವಿಶೇಷವಾಗಿ ಉಲ್ಲೇಖಿಸಬಹುದು. ದಂಡಕಾರಣ್ಯದಲ್ಲಿ ಮರಗಳ ನಡುವೆ ನಡೆಯುವ ಮಾತುಕತೆ ಸ್ವಾರಸ್ಯಕರವಾಗಿದೆ. ನೇರಳೆ ಮರ, ತಾರಾಮರದ ಸಂಭಾಷಣೆ ನಮಗೆ ಪಂಚತಂತ್ರವನ್ನು ನೆನಪಿಸುತ್ತದೆ.

ತಾರಾಮರವು

"ನೀನು ಹುಟ್ಟುದ ಕಾಲದಿಂದಲು ಇದೆ ತರವಾಗಿ ಮಾತಾಡ್ತಾಯಿದ್ದಯಿ, ಬುಡಪ್ಪಾ, ಇದೇನು ಹೊಸ್ಪಾ? ನಾನೇನು ನಿನ್ನ ಇಂದು ಕಂಡಿದ್ದೀನಾ ತಾಯೊಮ್ಮಾ?"

'ಅಯ್ಯೋ ಆ ಮಾತು ಅತ್ತಗಿಲ್ಲಿ ಕನ್ನಿ ಅಕ್ಕಯ್ಯ, ಈ ಬಂಡಾಕಲ್ಮೇಲ ಮಲುಗಿರಾ ನರಪ್ರಾಣೀನ ಕಂಡ್ರಾ ನನಗಾ ಒಂಥರಾ ಆಯ್ತುದಕನ್ನಿ ಅಕ್ಕಯ್ಯಾ'

'ಒಂಥರಾ ಅಂದ್ರಾ ಹೆಂಗಾದ್ದು ತಾಯಮ್ಮ?'

'ಮೈಜುಂ ಅಂತದ'

ಆಮೇಲ

'ತಲಾವಳ್ಗ ಚಕ್ರ ತಿರುಗಿದಂಗಾಯ್ತದ'

ಆ ಮೇಲ

ಆಮೇಲ ಗೀಮೇಲ ಯಾನೂ ಇಲ್ಲಕನ್ನಿ ಅಕ್ಕಯ್ಯ

"ಅದ್ಯಾಕಮ್ಮಿ ತಾಯಿ ಈ ಮಟ್ಗ ನಾಚ್ಕಂದಯಿ ಅವನು ನಿನ್ನ ಗಂಡನೂ, ನೀನು ಅವನೆಂಡ್ತಿನೂ ಅಲ್ಲ ಅದ್ಯಾಕ ಮತ್ತ ನಾಚ್ಕಂಡಯಿ"

ಹೀಗೆ ಮರಗಳ ಸಂಭಾಷಣೆ ನಡೆಯುತ್ತದೆ.

ಮುಳ್ಳೂರು ನಾಗರಾಜರ ಕಾದಂಬರಿ, ಕಥೆಗಳಲ್ಲಿ ನಾವು ಜನಪದ ಆಡುಭಾಷೆಯನ್ನು ಉದ್ದಕ್ಕೂ ಕಾಣುತ್ತೇವೆ. ಮೈಸೂರಿಗೆ ಸೇರುವ ನಂಜನಗೂಡು, ಸರಳ ಕನ್ನಡ ಭಾಷೆಯನ್ನು ರೂಢಿಸಿಕೊಂಡಿದೆ. ಹಳ್ಳಿಯ ಸೊಗಡು ಓದುಗರ ಗಮನವನ್ನು ಸೆಳೆಯುತ್ತದೆ. ಪರಸ್ಪರ ಮಾತಾಡಿಕೊಳ್ಳುವ ಧಾಟಿಯಲ್ಲಿ ಕಥೆ, ಕಾದಂಬರಿಗಳು ಮುಂದುವರಿಯುವುದು ಗಮನಾರ್ಹ. ಉದಾ:

> "ಕೆದರುಗೂದಲ ಬತ್ತಿದ ಚೇತನಕೆ ಬಿಟ್ಟೆಯಿಲ್ಲಾ,
> ಹಸಿವು ಮುತ್ತಿದ ಬೇರೆ ಸಾಗರದಂಥ ಏಕಾಂಗಿ
> ಮಾನವನ ಸಂಗಾತಿಯು ಯಕಶ್ಚಿತ್ ಲಂಗೋಟಿಯು"[೧]

---

೧. ದಂಡಕಾರಣ್ಯ ಅಧ್ಯಾಯ ೩, ವೃಕ್ಷ ವೃತ್ತಾಂತ, ಪುಟ ೭–೮.

ನಂಜನಗೂಡಿನ ಗ್ರಾಮೀಣ ಭಾಷೆಯನ್ನು ಕಾದು ಕುಲಮೆಯ ಚೆಂಡಿನಂತಾ ಸೂರ್ಯನು ಪಡುವಲ ದಿಕ್ಕಿಗೆ ತಿರುಗಿ ಮೂಡಲದ ಡವ ತಡುಕ್ತಲಿ, ಕತ್ತಲ ಮೆರಗಾ ಕೆನ್ನೀರನಾ ಎರಚ್ತಲಿರಲು ಆಗಲೀಗ ಬೂಮ್ತಾಯ ಎದೆಯು ಬೆಳುಕಾಗಿ ಕಾಲಪಕ್ಸಿಯೂ ತನ್ನೆಯ ಏಳುಬಣ್ಣದ......ಎಂದು ಸಲೀಸಲಾಗಿ ಕಥೆ ಮುಂದುವರಯುತ್ತದೆ. ಓದಲೂ ಸ್ವಲ್ಪ ಕಷ್ಟವಾದರೂ, ಗ್ರಾಮೀಣ ಭಾಷೆ ಸೊಗಸಾಗಿದೆ. ನಂಜನಗೂಡಿನ ಪ್ರಾದೇಶಿಕತೆಯನ್ನು ಎತ್ತಿಹಿಡಿಯುತ್ತದೆ. ಇಲ್ಲಿ ನಾವು ಮತ್ತೊಂದು ಅಂಶವನ್ನು ಗಮನಿಸಬೇಕು. ಕರ್ನಾಟಕದ್ಯಾದಂತ ಒಂದೇ ಭಾಷೆಯ ವಿವಿಧ ರೂಪಗಳನ್ನು ಕಾಣಬಹುದು. ಉತ್ತರಕರ್ನಾಟಕಕ್ಕೂ, ದಕ್ಷಿಣ ಕರ್ನಾಟಕದ ಭಾಷೆಯನ್ನು ಆಡುವ ಪದಗಳಲ್ಲಿ ಅನೇಕ ವ್ಯತ್ಯಾಸಗಳಿವೆ. ಬೆಂಗಳೂರು, ಮೈಸೂರು, ಚಾಮರಾಜನಗರ, ನಂಜನಗೂಡಿನ ಭಾಷೆಯಲ್ಲೂ ಅಷ್ಟೆ ಗಮನಾರ್ಹವಾದ ವ್ಯತ್ಯಾಸವನ್ನು ಕಾಣಬಹುದು. ನಂಜನಗೂಡಿನ 'ವಸಿ' ಪದಕ್ಕೆ ಮೈಸೂರು, ಬೆಂಗಳೂರು ಕಡೆ ಸ್ವಲ್ಪ, ಚೂರು ಎಂಬ ಅರ್ಥಗಳಿವೆ. ಇಂತಹ ಎಷ್ಟೋ ಪದಗಳನ್ನು ನಾವು ಉದ್ದಕ್ಕೂ ಪಟ್ಟಿಮಾಡಬಹುದು. ಆ ಪ್ರಾದೇಶಿಕತೆಗೆ ತಕ್ಕಂತೆ ಆಡುಭಾಷೆಗಳು ರೂಢಿಯಲ್ಲಿವೆ ಎನ್ನಬಹುದು.

ಅಧ್ಯಾಯ – ೫

ಅಧ್ಯಯನದ ಫಲಿತಗಳು

ಮುಳ್ಳೂರು ನಾಗರಾಜರ ಕೃತಿಗಳ ಫಲಿತಗಳನ್ನು ನಾವು ಇಲ್ಲಿ ಗಮನಿಸಬಹುದು. ಅವರ ನಾಲ್ಕು ಕಥಾನಕಗಳ ಒಟ್ಟಾರೆ ಅಂಶವನ್ನು ಮನಗಾಣುವುದು ಮುಖ್ಯವಾಗಿದೆ. ಮೇಲ್ನೋಟಕ್ಕೆ ಜಾತಿ ಅಂದರೆ, ಕೀಳುಜಾತಿಯ ಅಥವಾ ದಲಿತರ ಮೇಲಾಗುವ ದೌರ್ಜನ್ಯ, ಅನ್ಯಾಯಗಳ ವಿರುದ್ಧ ಸಮರ ಸಾರುವುದನ್ನು ಲೇಖಕರು ಇಲ್ಲಿ ಹೇಳಿದ್ದರೂ, ಅಂತರಾವಲೋಕಿಸಿದರೆ, ಬಡತನ, ಹಸಿವು, ಪ್ರೀತಿ, ರೌಡಿಗಳ ದಬ್ಬಾಳಿಕೆ, ಭಾವನೆಗಳ ಕೊಂಡಿಗಳನ್ನು, ಮಾನವರ ಅವಿನಾಭಾವ ಸಂಬಂಧಗಳನ್ನು ನಾವು ಇಲ್ಲಿ ಕಾಣಬಹುದು.

ಮುಳ್ಳೂರು ನಾಗರಾಜ ಅನ್ಯಾಯಗಳ ವಿರುದ್ಧ ಪ್ರತಿಭಟನೆಗಳನ್ನು ದಾಖಲಿಸುತ್ತಾ, ಸಾಮಾಜಿಕ ಬದುಕಿಗೆ ತೆರೆದುಕೊಂಡು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ಎಂದರೆ ಅತಿಶಯೋಕ್ತಿಯಲ್ಲ. ಕ್ರಮೇಣ ಸೃಜನಶೀಲ ಸಾಹಿತ್ಯ ಕ್ಷೇತ್ರಕ್ಕೆ ಪ್ರವೇಶಿಸುವುದರೊಂದಿಗೆ, ಅದನ್ನು ಇನ್ನಷ್ಟು ವಿಸ್ತರಿಸಿಕೊಂಡರು. ಸಣ್ಣ ಕಥೆ, ಕಾದಂಬರಿ, ಕಾವ್ಯ ಈ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದರು.

ಪ್ರಸ್ತುತ ಮುಳ್ಳೂರರು ಎರಡು ಕಾದಂಬರಿಗಳಾದ "ಮರಣ ಮಂಡಲ ಮಧ್ಯದೊಳಗೆ" ಮತ್ತು "ದಂಡಕಾರಣ್ಯ" ಕೃತಿಗಳ ಜೊತೆಗೆ ಸಿಂಗಳೀಕ, ಮಾ.ಮ.ಮ. ಕೋಗಿಲೆ ಆತ್ಮಕಥೆಯನ್ನು ಅವಲೋಕನ ಮಾಡಲಾಗಿದೆ.

"ಮರಣ ಮಂಡಲ ಮಧ್ಯದೊಳಗೆ" ಅವರ ಮೊದಲ ಕಾದಂಬರಿ. ಕೃತಿ ರಚನೆಯ ಕಾಲ ೧೯೮೬. ಆ ಹೊತ್ತಿಗೆ ಅವರು ದಲಿತ ಸಂಘರ್ಷ ಸಮಿತಿಯ ಮೂಲಕ ಹೋರಾಟದ ಬದುಕಿಗೆ ಬಂದು ಸುಮಾರು ಎಂಟು ವರ್ಷಗಳಾಗಿದ್ದವು ಮತ್ತು ಸಾಮಾಜಿಕ, ಸಾಂಸ್ಕೃತಿಕ ನೆಲೆಗಟ್ಟಿನಿಂದ ಮೂಡಿಬಂದಿದ್ದ ಸಮಿತಿ. ಆ ಹೊತ್ತಿಗೆ ರಾಜಕೀಯ ಕ್ಷೇತ್ರದಲ್ಲಿ ತನ್ನನ್ನು ತೊಡಗಿಸಿಕೊಳ್ಳತೊಡಗಿದ್ದರಿಂದ ಅವರಿಗೆ ಆ ಬಗ್ಗೆ ಸಾಕಷ್ಟು ಬೇಸರವೂ ಆಗಿತ್ತು. ಇದೇನೆ ಇರಲಿ, ಅವರ ಮೊದಲ ಕಾದಂಬರಿಯಾದ "ಮರಣ ಮಂಡಲ ಮಧ್ಯದೊಳಗೆ" ಮುಳ್ಳೂರರ ಹೋರಾಟದ ಹಿನ್ನೆಲೆಯಿಂದ ರಚಿತವಾದುದು ಎಂಬುದಿಲ್ಲಿ ಗುರುತಿಸಬೇಕಾದ ಸಂಗತಿ.

ಹಳ್ಳಿಗಾಡಿನ ದಟ್ಟ ಜಾನಪದೀಯ ವಾತಾವರಣದಿಂದ ಬೆಳೆದುಬಂದ ಕಾರಣದಿಂದಲೇ, ಪ್ರಸ್ತುತದ ಕಾದಂಬರಿಯಲ್ಲಿ ಅದರ ಪ್ರಭಾವವನ್ನು ನಾವು ಗುರುತಿಸಬಹುದು. ಮುಳ್ಳೂರರು ಕಾದಂಬರಿಯ ಮುನ್ನುಡಿಯಲ್ಲಿ ಬರೆದಿರುವ 'ನಾನು ಗಾಢವಾಗಿ ಅವಲಂಬಿಸಿರುವ ಕವಿಗುಣದ ಕಾರಣವಾಗಿಯೇ, ನನಗೆ

ಗದ್ಯಬರಹವೆಂದರೆ, ಒಂದು ರೀತಿಯ ಅಲರ್ಜಿ ಎಂದು ಹೇಳಿರುವುದಾದರೂ, ಅವರ ಗದ್ಯಕೃತಿಗಳು ನಂಜನಗೂಡಿನ ಪರಿಸರದ ಆಡುಭಾಷೆಯ ಸೊಗಸು, ಸೊಗಡುಗಳಿಂದ ಮೈತುಂಬಿಕೊಂಡಿರುವುದನ್ನು ನಾವು ಕಡೆಗಣಿಸಲಾಗದು. ಆಡುಮಾತಿನ ಮೂಲಕವೇ ಜಾನಪದೀಯ ಬದುಕನ್ನು ಕಟ್ಟಿಕೊಡುವ ಅವರ ಪ್ರಯತ್ನಗಳು ನಿಚ್ಚಳವಾಗಿ ಆ ಪ್ರಕಾರದಲ್ಲಿ ಅವರಿಗಿರುವ ಹಿಡಿತ ತುಡಿತಗಳನ್ನು ಸಾಬೀತುಪಡಿಸುತ್ತೇವೆ.

ಕಾದಂಬರಿ 'ಮರಣ ಮಂಡಲ ಮಧ್ಯದೊಳಗೆ' ಹೋರಾಟಗಾರನೊಬ್ಬನ ಜೀವನ ವೃತ್ತಾಂತವನ್ನು ಚಿತ್ರಿಸುವುದರೊಂದಿಗೆ ಗ್ರಾಮೀಣ ಪರಿಸರದಲ್ಲಿ ಆಗುತ್ತಿರುವ ಸಾಮಾಜಿಕ ಸಂಚಲನವನ್ನು ಅನಾವರಣಗೊಳಿಸುತ್ತದೆ. ಇಡೀ ಕಾದಂಬರಿ ಎರಡು ಸ್ತರಗಳಲ್ಲಿ ಹರಡಿಕೊಂಡಿದೆ. ಮೊದಲನೆಯ ಭಾಗ ಕಥಾಲೋಕದ ಬಾಗುಲಲ್ಲಿ, ಕಾಡೂರು ಎಂಬ ಹಳ್ಳಿಯಲ್ಲಿ ಸ್ಥಾಪಿತವಾಗುವ ಐತಿಹ್ಯ ಕಾದಂಬರಿಗೆ ನಾಂದಿಯೋಪಾದಿಯಲ್ಲಿದ್ದರೆ, ಎರಡನೆಯ ವಿಸ್ತೃತ ಭಾಗ ಸಮಕಾಲೀನ ಕಾಡೂರಿನ ಜೀವನ ವೃತ್ತಾಂತವನ್ನು ಒಳಗೊಂಡು ಒಂದರ ಮುಂದುವರಿಕೆ ಮತ್ತೊಂದು ಎಂಬಂತೆ ತೋರಿದರೂ ಕೃತಿಬಂಧದಲ್ಲಿ ಅಷ್ಟೊಂದು ಸಾಧಿತವಾಗದೆ ನಿಂತು ಬಿಡುವುದು, ಅರಸರ ಕುಲದವಳಾದ ಮಾಳುಗಮ್ಮ "ಹೂವಲಿ ಹುದುಗಿದ ಹೂ ಚೆಲುವಿಗಿಂತಲೂ ಚೆಲುವಾದವಳು". ಆ ಬೆಳದಿಂಗಳು, ಅದರ ಚೆಲುವು, ಅವಳ ಕಾಲ್ದೆಸೆಂ ಬಿದ್ದು ಒದ್ದಾಡುತ್ತಿರಲೂ ದೇಸ-ದೇಸದಲ್ಲೆಲ್ಲಾ, ದೇವಲೋಕದಲ್ಲೆಲ್ಲಾ ಬೆಟ್ಟ ಬೆಳದಿಂಗಳು ದಾಟಿ ಆ ಅವಳ ಚೆಲವು ಹೆಸರಾಗಿರಲೂ ...... ಅಂಥ ಮಾಳುಗಮ್ಮನಿಗೆ, ಅಮಾಸಗುಡ್ಡಕೆ ಕೈಕಾಲು ತಲವು ಮಾಡದ ರೀತೀಲಾಗಿದ್ದನು. ಮಾಳುಗಮ್ಮ ತನ್ನ ತಮ್ಮನಿಗೆ ಚಲೋ ಅಡುಗೆಯ ಮಾಡಲು ಕಾಡಿನಿಂದ ಸೌದೆ ತರಲು ಹೇಳಿದಾಗ, ಅವನು ಕಾಡಿಗೆ ಹೋದವನು ತೊರಾರ್‍ರು ಹಂದಿಕೊಂದು ಅರುಸ್ವಾಮೆ ಮಾಡುತಲಿರುವುದನ್ನು ಕಂಡು ಅದರಲೀ ಮುಳುಗಿ ಹೋದನು. ಈ ಸಂಗತಿಯು ಗೆಣೆಕಾರ ರಾಕಾಸಿಯ ಮುಖಾಂತರ ಕಿವಿಗೆ ಬೀಳಲು, ಅವಳು ಇನ್ನಿಲ್ಲದ ಬೇಸರದಿಂದ ಹಿಂದಿರುಗಿ ಬಂದ ತಮ್ಮನಿಗೆ,

ಇಂದುನಿಂದ ನಾ ನಿನಗೆ ಅಕ್ಕನೂ ಅಲ್ಲ
ನೀ ನನಗ ತಮ್ಮನೂ ಅಲ್ಲ
ತೊಲಗಯ್ಯ ತೊಲಗು, ನಿಲದಿರು ನನ್ನೆದಿರು
ಊರಾಚಲರೊ ಬಾಡಲ ಒಳ್ವ ತಿಂಬಾ
ಹೊಲಾರ ಕೇರಿಗೋಗು
ತೊಲಗಿ ಇಲ್ಲಿಂದ ನೆಲಸು ನೀನಲ್ಲಿ.

ಎಂದು ಮನಸಾರೆ ಶಪಿಸಲಾಗಿ, ಈರಣ್ಣನು 'ಊರಾಚಲಿರಾ' ಹೊಲಗೇರಿಯ ಅಂಕದಲಿ ಬಂದು ನೆಲಸಿದವನಾದನು. ಚಂಚಲ ಚಿತ್ತೆಯಾದ ಮಾಳುಗಮ್ಮ ಜೀತಗಾರ

ಸಂಗಯ್ಯನ ಪತ್ನಿಯಾದರೆ, ಗೆಣಕಾತಿ ರಾಕಾಸಿಯು ಕುಯುಕ್ತಿಯಿಂದ ಮೇಲುಗೈ ಸಾಧಿಸಿ, ತನ್ನನ್ನು ಉಪಪತ್ನಿ ಎಂದು ದೂರುವಳು ಎಂದೂ ಮಾಳುಗಮ್ಮ ಕನಸು ಕಾಣುತ್ತಿರುತ್ತಾಳೆ. ಮಾಳುಗಮ್ಮ ಸಂಗಯ್ಯನ ಪತ್ನಿಯಾಗಿ 'ಹೊಲತಿ'ಯಾದಳು. ಅದನ್ನು ಸಹಿಸದ ಆಕಾಸ ಮಾರ್ಗದಲಿ ಚಲಿಸುತಲಿದ್ದ ದೇವಾಧಿದೇವತೆಗಳು ಆ ಅವನ ತಲೆಯ ತರುದು ಭೂಮಿಯ ಮೇಲೆ ಅವನ ರಕುತವ ಚೆಲ್ಲಲಿದ್ದರಲ್ಲಾ; ಇತ್ಲಗೆ ಐತಿಹ್ಯದ ಒಂದು ಘಟ್ಟ ತಲುಪುತ್ತದೆ.

ಐತಿಹ್ಯದ ಎರಡನೆಯ ಘಟ್ಟದಲ್ಲಿ ಮಾಳುಗಮ್ಮ ಸಂಗಯ್ಯನ ಸಹವಾಸದಿಂದ, ಗಂಡು ಮಗುವನ್ನು ಪಡೆದು. ಗಂಗೆಯ ಒಡಲು ಸೇರಲು ಸಿಂಗಾರುವನ್ನು ಗೆಣೆಕಾತಿ ರಾಕಾಸಿಯು ಸಾಕಿ ಸಲಹುತ್ತಾಳೆ. ಈ ನಡುವೆ ಕಾಡೂರ ಅರಸ (ದೊರೆ) ಅರಸಪ್ಪನನ್ನು ಸೈತಾನನಿಂದ ಪಡೆದ ಚಿನ್ನದ ಕಠಾರಿಯಿಂದ ಅವನ ಅಂಗರಕ್ಷಕ ಭೂಪಯ್ಯನು ತುಂಡರಿಸಿ, ತಾನೇ ಅಲ್ಲಿಗೆ ಅರಸನಾದನು. ಅದೇ ಹೊತ್ತಿನಲ್ಲಿ ದೇಶಕ್ಕೆ ಬರಗಾಲ ಬರಲು, ಅವರು ಸೈತಾನನ ಹಿತೋಕ್ತಿಯಂತೆ, ಮನುಷ್ಯನಿಗೆ ಮಿದುಳು ಇರುವುದು ಅಸಹಾಯ. ಆ ಮಿದುಳಿನಿಂದಲೇ ಮಾನವನಾದವನು ಪತನವಾಗುವನು ...... ಮಿದುಳು ಇಟ್ಟುಕೊಂಡು ಗೋಳಾಡುವ ಬದಲು ರಾಜನಿಗೆ ಅದನ್ನು ಅರ್ಪಿಸಿ ಮುಕ್ತಿ ಪಡೆಯಿರಿ ಎಂದು ಜನರ ನಡುವೆ ಪ್ರಚಾರ ಮಾಡಿಸಲು ಪ್ರಜಾಸಮೂಹ ಹಾಗೇ ಮಾಡಲು ಸಿದ್ಧವಾಯಿತು. ಇದೇ ಹೊತ್ತಿಗೆ ರಾಕಾಸಿಯ ಸಾಕು ಮಗನಾದ ತರುಣ ಸಿಂಗಾರನು ಭೂಪಾಲ ಅರಸನ ಪಟ್ಟಣಕ್ಕೆ ಬಂದು, ತಾನು ಕೂಡ ರಾಜನಿಗೆ ಮಿದುಳು ಒಪ್ಪಿಸುವ ಸರದಿಯಲ್ಲಿ ನಿಂತಾಗ ಅವನಲ್ಲೊಂದು ಹೊಸ ಮಾತು ಉದುರಿತಲ್ಲಾ. ಸಿಂಗಾರನು 'ಮನುಷ್ಯನಿಗೆ ಮಿದುಳು ಇರುವುದು ಆರೋಗ್ಯಕರ' ...... ಎಂದು ಮುಂತಾಗಿ ಮಿದುಳಿನ ಪರ ವಾದಿಸಲು ರಾಜನು ಅವನನ್ನು ಸೆರೆಮನೆಗೆ ತಳ್ಳಿದ. ಈ ಸುದ್ಧಿ ತಾಯಿ ರಾಕಾಸಿಗೆ ತಲುಪಲು ಅವಳು ಸಂಗಯ್ಯನನ್ನು ಕೊಂದ ದೇವಾಧಿದೇವತೆಗಳ ಚಿನ್ನದ ಕತ್ತಿಯಿಂದ ರಾಜನ ಶಿರಚ್ಛೇಧ ಮಾಡಲು, ಎಂದೂ ಬಾರದ ಮಳೆಯು ಅಂದು ಭೂಮಿಗೆ ಬಂದು, ಅನಂತರ ತಾಯಿ ಮಗ ಆ ಕತ್ತಲ ರಾಜ್ಯದಿಂದಾಚೆಗೆ ಚಲಿಸಿದರು. ಇದು ಐತಿಹ್ಯದ ಎರಡನೇ ಘಟ್ಟ. ಈ ಐತಿಹ್ಯದ ಮೂಲಕ ಮುಳ್ಳೂರರು ಅನ್ಯಾಯದ ವಿರುದ್ಧ ಸೆಟೆಸಿ ನಿಲ್ಲಬೇಕಾದ ಜನರ ಅನಿವಾರ್ಯ ಪರಿಸ್ಥಿತಿಯನ್ನು ಇಲ್ಲಿ ಸೂಕ್ಷ್ಮವಾಗಿ ತಿಳಿಸಿದ್ದಾರೆ ಅನ್ನಬಹುದು. ಐತಿಹ್ಯವೊಂದರ ಹಿನ್ನೆಲೆಯಿಂದಲೇ, ಮುಖ್ಯ ಕಥೆಗೆ ಪ್ರವೇಶಿಸುವ ಕಥನ ಕಲೆಯನ್ನು ರಾಘವೇಂದ್ರ ಪಾಟೀಲರ 'ತೇರು' ಕಾದಂಬರಿಯಲ್ಲೂ ಕಾಣಬಹುದಾಗಿದೆ. ಅಲ್ಲಿ ಧರುಮನವಟ್ಟಿಯ ಕಾಟುಕರ ಗೊಂಬಿರಾಮ ರಂಗೋನಟ್ಟಿ ದೇಸಾಯಿಯವರ ಆಮಿಷಕ್ಕೆ ಒಳಗಾಗಿ ತನ್ನ ಮಗನನ್ನು ಬಲಿಕೊಡುವ ಪ್ರಸಂಗ, ಒಂದು ನೂರು ಐವತ್ತು ವರ್ಷಗಳ ನಂತರ ಅದೇ

ಬೇಗಂ, ಇವರುಗಳ ಸಂಬಂಧ, ನಡುವೆ ತಲೆಹಾಕುವ ಅವನು ಕೆಲವೊಮ್ಮೆ ನ್ಯಾಯಗಾರನಾಗಿ ವರ್ತಿಸಿದರೆ, ಇನ್ನು ಕೆಲವು ಬಾರಿ ಪಕ್ಕಾ ರೌಡಿಯಂತೆಯೂ ಕಂಗೊಳಿಸುತ್ತಾನೆ. ಪಟೇಲರ ಹೈದ ಲಿಂಗಪ್ಪನು, ಹೊಲಾರ ಕೆಂಚಮ್ಮನ್ನು ಅತ್ಯಾಚಾರ ಪ್ರಯತ್ನದಲ್ಲಿ ಸೋತರೂ ಅದು ವ್ಯತಿರಿಕ್ತವಾಗಿ ಬಸವರಾಜನಿಂದ ಲಿಂಗಪ್ಪನ ಹೆಂಡ್ತಿ ಗೌರಮ್ಮನ ಮೇಲಿನ ಅತ್ಯಾಚಾರದಲ್ಲಿ ಪರ್ಯಾವಸನಗೊಂಡು ಅವನಿಗೆ ರೌಡಿಪಟ್ಟ ಖಾಯಂ ಆಗುತ್ತದೆ. ಕಾದಂಬರಿಯ ಕೊನೆಯಲ್ಲಿ ಬಸವರಾಜನು, ಅಂಬೇಡ್ಕರ್ ಸಂಘಕ್ಕೆ ಸೇರಿ, ತನ್ನ ಊರಿನಲ್ಲಿ ಅಂಬೇಡ್ಕರ್ ಸಂಘವೊಂದನ್ನು ಕಟ್ಟಲು ಪ್ರಯತ್ನಿಸಿ ಸೋತು, ಅಂತಿಮವಾಗಿ ಪಿರಿಯಾಪಟ್ಟಣದ ಹೊನ್ನಾಪುರ ಗ್ರಾಮದಲ್ಲಿ ನಡೆದ ದಲಿತ ಸಂಘರ್ಷ ಸಮಿತಿಯ ಕ್ಯಾಂಪೊಂದರಲ್ಲಿ ಸೇರುತ್ತಾನೆ. ಅಲ್ಲಿ ಮೇಲುಕುಲದ ಸೋಮಶೇಖರನೆಂಬುವನು ಕಾವೇರಿ ಹೊಳೆಯಲ್ಲಿ ಕೊಚ್ಚಿಹೋಗಲು, ರೌಡಿಯಾಗಿದ್ದ ಬಸವರಾಜುವಿಗೆ ಜ್ಞಾನೋದಯವಾಗುತ್ತದೆ. 'ಅವನಾದರೂ ಜಾತಿ ಬುಟ್ಟು, ಕುಲಬುಟ್ಟು, ಸಕಲ ಕುಲಜಾತಿಗಳ ಎಲ್ಲ ಬಡವರಿಗಾಗಿ ತನ್ನದೆಯ ತೆರೆದು, ತನ್ನದು ರೌಡಿತನಕ ಗುಡ್‌ಬೈ ಹೇಳಿದನು ಮತ್ತು ಮಾನವೀಯವಾಗುವುದು, ಎಲ್ಲಾ ಜಾತಿ ಬಡವರಿಗೂ ಒಳ್ಳೇದು ಮಾಡು ಮಾತಾಯಿ ಮಾಳುಗವ್ವ' ಎಂದು ಅವನು ಪ್ರಾರ್ಥಿಸುವುದರೊಂದಿಗೆ.

ರೌಡಿಯಾಗಿದ್ದ ವ್ಯಕ್ತಿಯು ಮಾನವತಾವಾದಿಯಾಗಿ ಪರಿವರ್ತನೆಯಾಗುವ, ಎಳೆಗಳನ್ನು ಕಾದಂಬರಿ 'ಮರಣ ಮಂಡಲ ಮಧ್ಯದೊಳಗೆ' ರೂಪಿತಗೊಂಡಿದೆ. ದಲಿತ ಸಂಘರ್ಷ ಸಮಿತಿಯ ಹೋರಾಟದ ದಿನಗಳೊಂದಿಗೆ ಬೆಳೆದ ಕಾದಂಬರಿ ಆ ಕಾಲಘಟ್ಟದ ಸ್ಥೂಲ ಚಿತ್ರಣವನ್ನು ಕೊಡುವಲ್ಲಿಯೂ ಲೇಖಕರು ಯಶಸ್ವಿಯಾಗಿದ್ದಾರೆ. ಅದರ ಸಕಾರಾತ್ಮಕ, ನೇತ್ಯಾತ್ಮಕ ಗುಣಗಳೆರಡನ್ನೂ ಒಳಗೊಂಡಿದೆ. ನಂಜನಗೂಡಿನ ಪರಿಸರದ ಭಾಷೆಯಲ್ಲಿ ಸರಾಗವಾಗಿ ಸಾಗುವ ಕಾದಂಬರಿ, ಕೃತಿಬಂಧದಲ್ಲಿ, ಇನ್ನೂ ಗಟ್ಟಿತನವನ್ನು ಗಳಿಸಿಕೊಳ್ಳಬೇಕಿದೆ. ಬಿಡಿ ಬಿಡಿಯಾಗಿ ಸಾಗುವ ಘಟನಾವಳಿಗಳು ಸಾವಯವ ಸಂಬಂಧದ ಎಳೆಗಳನ್ನು ಅಪೇಕ್ಷಿಸುವುದು ಸಹಜ.

ಹೀಗೆ ಈ ಕಾದಂಬರಿಯಲ್ಲಿ ಎಲ್ಲಾ ರೀತಿಯ ಸಂಬಂಧಗಳನ್ನು ನಾವು ಗುರುತಿಸಬಹುದು. ಕೆಲವರಿಗೆ ಕೆಲವು ಇಷ್ಟವಾಗಬಹುದು, ಇಲ್ಲದಿರಲೂಬಹುದು, ಆದರೂ ಇಲ್ಲಿ ಬಸವರಾಜುವಿನ ಬದಲಾವಣೆಯ ಗುಣವನ್ನು, ರಂಗಿಯ ಹೋರಾಟವನ್ನು ಮೆಚ್ಚಲೇಬೇಕು. ದಲಿತರಿಗೆ, 'ದಲಿತ ಸಂಘರ್ಷ ಸಮಿತಿ' ಸ್ಥಾಪನೆಯಾದುದು, ದಲಿತರಿಗೆ ಒಳಿತಿಗಾಗಿ, ಉಳಿವಿಗಾಗಿ. ಈ ಸಂಘದಿಂದ ಅನೇಕ ಪ್ರಯೋಜನಗಳಾಗುತ್ತಿರುವುದನ್ನು ಇಂದೂ ಸಹ ಗುರುತಿಸಬಹುದು.

'ದಂಡಕಾರಣ್ಯ' ಕಾದಂಬರಿಯಲ್ಲಿ ದಲಿತರ ಮೇಲಾಗುವ ದೌರ್ಜನ್ಯ, ಅನ್ಯಾಯಗಳನ್ನು ಪಾತ್ರಗಳ ಮೂಲಕ ಲೇಖಕರು ಓದುಗರಿಗೆ ಹೇಳಿದ್ದಾರೆ. ದಲಿತರ

ಮೇಲಾಗುವ ದೌರ್ಜನ್ಯಗಳು ಒಂದು ಕಡೆಯಾದರೆ, ಹಸಿವಿನ ಮುಖವನ್ನು ಇನ್ನೊಂದು ಮಗ್ಗುಲಲ್ಲಿ ಹೇಳಿದ್ದಾರೆ. ತಾರಮರ ಮತ್ತು ನೇರುಳಾ ಮರದ ನಿರೂಪಣೆ ಉತ್ತಮವಾಗಿದೆ. ಇಲ್ಲಿ ಕಥೆ ಗೌಣ, ವಸ್ತು ಅನುಷಂಗಿಕವಾಗಿದೆ. ಈ ಕಾದಂಬರಿಯಲ್ಲಿ ನಿರೂಪಣೆಯ ಜೊತೆ ರೂಪಕಗಳು ಈ ಕಾದಂಬರಿಯ ಜೊತೆಯಲ್ಲಿವೆ.

ಪ್ರಮುಖವಾಗಿ ಇಲ್ಲಿ ಜಾತಿಯ ಮಹಿಮೆಯನ್ನು ಹೇಳಿದ್ದಾರೆ. ಹಿಂದಿನ ಕಾಲದಿಂದಲೂ ದಲಿತರನ್ನು ಅಥವಾ ಹಿಂದುಳಿದವರನ್ನು ಯಾವ ರೀತಿ ಹಿನ್ನಡೆಸಿದ್ದಾರೆಂಬುದನ್ನು ರಾಜನ ಮಗಳಾದ ಗೌರಮ್ಮನ ಜೀವನದಲ್ಲಿ ಆದ ಪ್ರಸಂಗವನ್ನು ಉದಾಹರಿಸಬಹುದು. ಗೌರಮ್ಮನ ಮದುವೆಗೆ ಯಾವ ರಾಜ ಮಹಾರಾಜರನ್ನು ಒಪ್ಪದೆ, ಒಬ್ಬ ಭಿಕ್ಷುಕನನ್ನು ಕೂಡಿ ಒಂದು ಮಗುವನ್ನು ಪಡೆಯುತ್ತಾಳೆ. ಆದರೆ, ಭಿಕ್ಷುಕ ನಾಪತ್ತೆಯಾಗುತ್ತಾನೆ. ಹಲವು ವರ್ಷಗಳ ನಂತರ, ಅದೇ ಭಿಕ್ಷುಕ ಜೋಗಿಯಾಗಿ, ಜನರು ಕೇಳುವುದನ್ನು ಕೊಡುವ ಕಲ್ಪವೃಕ್ಷವಾಗಿ ಬರುತ್ತಾನೆ. ಆದರೆ, ಎಲ್ಲಾ ಜನರು ಪೂಜೆ, ಪುನಸ್ಕಾರ ಮಾಡಿ, ಕೊನೆಯಲ್ಲಿ ಅವನು ಒಬ್ಬ ಕೀಳು ಜಾತಿಯವನೆಂಬ ಕಾರಣಕ್ಕಾಗಿ ಅವನನ್ನು ಕೊಲೆ ಮಾಡಲು ಮಹಾರಜ ಆಜ್ಞೆ ಮಾಡುತ್ತಾನೆ. ಅದರಂತೆ, ಆ ಕೆಲಸ ನಡೆಯುತ್ತದೆ. ಎಂಥ ಅಮಾನವೀಯ ಕೃತ್ಯ. ಜಾತಿಯ ಕಾರಣದಿಂದ ಪ್ರಾಣವನ್ನು ತೆಗೆಯುವ ಕೆಲಸ, ನಿಜವಾಗಲೂ ಪಾಪದ ಕೆಲಸ. ಶತ-ಶತಮಾನಗಳಿಂದಲೂ ಈ ದೌರ್ಜನ್ಯ ನಡೆಯುತ್ತಲೇ ಇದೆ. ಇಲ್ಲಿಯೂ ಸಹ ಒಂದು ಐತಿಹ್ಯವಿದೆ. ಜಾತಿಯ ದೌರ್ಜನ್ಯಗಳನ್ನು ಹೇಳಿಕೊಂಡು, ಆಧುನಿಕ ಕಾಲದ ಸ್ಥಿತಿ-ಗತಿಗಳನ್ನೂ ಸಹ ಲೇಖಕರು ಹೇಳಿದ್ದಾರೆ.

ಮುಳ್ಳೂರರು ಗದ್ಯಕವಿ, ಭಾವ ತನ್ಮಯತೆಯಿಂದ ಬರೆಯುತ್ತಾರೆಂದಷ್ಟೇ ಅಲ್ಲ, ಅವರ ಮನಸ್ಸಿಗೆ ಚಿತ್ರಕ ಶಕ್ತಿ ಉಸಿರಾಟದಷ್ಟು ಸಹಜವಾಗಿದೆ, ಸಲೀಸಾಗಿದೆ. ಇಲ್ಲಿನ ಪುಟ ಪುಟವೂ ಪ್ರತಿ ಪುಟದ ಪ್ರತಿ ವಾಕ್ಯವೂ ಈ ಮಾತಿಗೆ ಸಾಕ್ಷಿ ಹೇಳುತ್ತವೆ. ಅವರ ವಾಕ್ಯಗಳು ಕಾವ್ಯದೋಕುಳಿಯಲ್ಲಿ ಅದ್ದದ್ದಿ ಮುಳುಗೆದ್ದು ಮಿಂದು ಮಡಿಯಾಗಿದೆ. ಹಸಿವಿನ ಲೋಕ, ವೃಕ್ಷ ವೃತ್ತಾಂತ, ಕೊಲೆಯ ಕೋಗಿಲೆ ಉಲಿದ ಪರಿಯೂ, ಗುರುಶಿಷ್ಯ ವೃತ್ತಾಂತ, ಲಂಗೋಟಿ ಸೋಮ್ಮಳ ವರ್ತಮಾನವೂ, ಸಿವು-ಕಪ್ಪಮ್ಮರ ಪ್ರಣಯ ಪಂಚಾಂಗವೂ ಮತ್ತು ಕನಸುಗಳು ಕೊಲೆಯಾದ ಮಾಯಪುರವು ಎಂಬ ಅಧ್ಯಾಯಗಳಲ್ಲಿ ಕಥೆಗಿಂತ ವರ್ಣನೆಯೇ ಪ್ರಧಾನವಾಗಿರುವ ವರ್ಣನಾತ್ಮಕ ಕಾವ್ಯ ಕಾದಂಬರಿ. ಬಾಣ-ನಾಗವರ್ಮರ ಕಾದಂಬರಿ, ನಾಗಚಂದ್ರನ ಮಲ್ಲಿನಾಥ ಪುರಾಣಗಳಂತೆ ಇಲ್ಲಿ ಕಥೆ ಗೌಣ, ವಸ್ತು ಅನುಷಂಗಿಕ. ಉದ್ದಕ್ಕೂ ಬಿಚ್ಚಿಕೊಳ್ಳುವುದು ವಿಲಾಸ, ಒನಪು, ವೈಯ್ಯಾರ, ವಿಭ್ರಮಗಳಿಂದ ಸಾಲಂಕೃತವಾಗಿ ಮಂದಗಜಗಮನ ಗತಿಯಲ್ಲಿ ಚಲಿಸುವ ಅಲಂಕರಣ ಶೈಲಿ, ಡೆಕೊರೇಟೀವ್ ಸ್ಟೈಲ್,

ವರ್ಣನಾತ್ಮಕತೆಯೊಂದಿಗೇಯ, ಇಲ್ಲಿನ ನುಡಿ ಕ್ರಿಯಾತ್ಮಕತೆಯನ್ನು ನಾವು ಗಮನಿಸಬೇಕು. ಮುಳ್ಳೂರರ ಶೈಲಿ ತುಂಬಾ ಡಿಸ್ಕ್ರಿಪ್ಟೀವ್ ಆಗಿ ಹೆಣೆದುಕೊಂಡಿದೆ. ಹಲವು ಹೃದಯಸ್ಪರ್ಶಿಯಾದ ಭಾಗಗಳನ್ನು ಬಿಟ್ಟು, ಬೋಳಾದ ಭಾಗಗಳಲ್ಲಿ ಕೂಡ ಕಾದಂಬರಿ ಓದುಗರ ಗಮನ ಸೆಳೆಯುವುದು ವಿಶೇಷವಾಗಿದೆ.

ಕನ್ನಡದ ರಾವ್‌ಬಹದ್ದೂರರ ಗ್ರಾಮಾಯಣ ಮತ್ತು ಚದುರಂಗರ ವೈಶಾಖ. ಆದರೆ, ಇವಾವ ಕಾದಂಬರಿಗಳೂ ಮುಳ್ಳೂರರ ಕಾದಂಬರಿಗಳ ನೆಲೆಗೆ ಹೊಂದಿಕೊಳ್ಳದ ಭಿನ್ನಸ್ತರದ ಆಯಾಮದ ವಿಶಿಷ್ಟ ಕೃತಿಗಳೆಂಬುದು ದಂಡಕಾರಣ್ಯದ ಪ್ರತ್ಯೇಕತೆಯನ್ನು ತೋರಿಸುವ ಅಂಶವಾಗಿದೆ.

'ದಂಡಕಾರಣ್ಯ' ಕಾದಂಬರಿ ಮಹತ್ವದ ಕೃತಿಯಾಗಿದೆ ಎನ್ನುವುದಕ್ಕೆ ಉತ್ತರ ಅದರ ಒಡಲಲ್ಲಿದೆ. ಎಷ್ಟೊಂದು ಪದರ ಪಾತಳಿಗಳು ಮತ್ತು ಅರ್ಥವ್ಯಾಪ್ತಿ ಆ ಕೃತಿಯ ಕಥೆಗೆ ಇದೆಯೆಂಬುದು, ಪರಿಭಾವಿಸಿದಷ್ಟೂ ನಿಚ್ಚಳಗೊಳ್ಳುತ್ತದೆ. ಕಥೆ ಬಿಚ್ಚಿಕೊಳ್ಳುವ, ಮಾಟ–ನೀರವ ಮುಂಜಾವದಲ್ಲಿ ಕನಸು ಬಿರಿಯುವಂತೆ, ಮೊಗ್ಗು ಹೂವಾಗಿ ಅರಳುವಂತೆ, ಅಲೌಕಿಕತೆ ನಾಟಕೀಯತೆ, ಗೇಯತೆ, ಪ್ರಸನ್ನತೆಗಳನ್ನು ಗರ್ಭೀಕರಿಸಿಕೊಂಡು ಜಾನಪದ, ಯಕ್ಷಗಾನ, ಬಯಲಾಟ, ಸಣ್ಣಾಟ, ದೊಡ್ಡಾಟ, ಮೂಡಲಪಾಯದೋಪಾದಿಯಲಿ ಕಥೆಯು ಚಲಿಸುತ್ತದೆ.

"ಕೆದುರುಗೂದಲ ಬತ್ತಿದ, ಚೇತನಕೆ ಬಿಟ್ಟೆಯಲ್ಲಾ, ಹಸಿವು ಮುತ್ತಿದ ಬೆಂಕಿ ಸಾಗರದಂತ ಏಕಾಂಗಿ ಮಾನವನ ಸಂಗಾತಿಯು ಯಕಶ್ಚಿತ್ ಲಂಗೋಟಿಯು. ಅದಾದರು ಹೇಣು ಕೂರಾದಿಗಳ ಸಾಗರವು. ಆ ನರಹುಳವಾದುದು ಆಕಾಸ್ಕ ತನ್ನಯ ಬೆನ್ನನು ತಿರುಗ್ಸಿಕೊಂಡು ಮಲಗಿತ್ತು. ಒಂದು ಗಳುಗಾಲಿ ನಿದ್ದಾವು ಬಂದು ಅದರ ಕಣ್ಣಗ ತುಂಬ್ಕಂಡ್ರ ಮತ್ತೊಂದು ಗಳುಗಾಲಿ ನಿದ್ದಾವು ಬಿದ್ದೋಡುತಾ ಬೆದರೂತ ಬೆಚ್ಚುತಲಿತ್ತು. ಆ ಅದರ ಜೀವವು ಅರಿಯದಾವುದೋ ಸಂಕಟದಲಿ ಮುಳುಗೇಳುತಿರಲೂ, ಚಣದ ಹಿಂದಲಿ ಚಣವು ಸರಿದು ಸರಪಳಿಯಾಗಿರಲೂ, ಕಾದ ಕುಲುಮೆಯ ಚೆಂಡಿನಂತಾ ಸೂರ್ಯವು ಪಡುವಲ ದಿಕ್ಕುಗ ತಿರುಗಿ ಮೂಡಲ ದಡವ ತಡುಕ್ತಲಿ ಕತ್ತಲ ಮೋರಗೆ ಕೆನ್ನೀರು ಎರಚ್ತಲಿರಲು, ಆಗಲೀಗ ಭೂಮ್ತಾಯ ಎದೆಯೂ ಬೆಳುಕಾಗಿ, ಕಾಲಪಕ್ಷಿಯೂ ತನ್ನಯ ಏಳು ಬಣ್ಣದ ಏಳು ರೆಕ್ಕಾದಿಗಳ ತೆರುದೂ ದಿಕ್ಪಾಲಕರ ತೋಳ್ಗಳ ಮೇಲ ಹಗಲು ರಾತ್ರಿಗಳ ತೇಲಿಸೂತಲಿ, ಒಂದು ಗಳುಗಾಲಿ ಒಂದು ಬಣ್ಣವ ತಳೆದೂ, ಮತ್ತೊಂದು ಗಳುಗಾಲಿ ಮತ್ತೊಂದು ಬಣ್ಣವ ತಳೆದೂ ಚಕ್ರವಾಗುತ್ತಿತ್ತು ಕಾಲವೂ".

ಓದುಗ ಕಾದಂಬರಿ ಓದುತ್ತಾ ಪ್ರದರ್ಶನ ನೋಡುವ ಪ್ರೇಕ್ಷಕನೂ ಆಗುವ ಅನುಭವವಾಗುತ್ತದೆ. ಕಾದಂಬರಿ ಕರತಲ ರಂಗಭೂಮಿ ಎಂಬ ಮಾತು ನಿಜವಾಗುತ್ತದೆ.

ಸಂಭಾಷಣೆಯ ಜೀವಂತಿಕೆ, ಲವಲವಿಕೆ ಜಿನುಗುವ, ನೇರಳೆಮರ, ತಾರಾಮರಗಳ ನಡುವೆ ನಡೆಯುವ ಚರ್ಚೆಗೆ ಕಿವಿಗೊಡಬೇಕು. ವರ್ಣನೆಯೇ ಸಿಂಧುವಾಗಿ ಸುತ್ತಲೂ ಆವರಿಸಿ ತುಂಬಿಕೊಂಡು ಮೂಲಕಥೆ ಒಂದು ಬಿಂದುವಿನೋಪಾದಿ ಮೂಲೆ ಸರಿದು ಮಾಗಮ್ಮಾಗಿದೆ. ಒಮ್ಮೆ ಅಸಾದಿಗಳು ಮಾರಮ್ಮನ ಕಥೆ ಹೇಳುವ ಹಾಗೆ ಕೇಳಿಸುತ್ತದೆ, ಇನ್ನೊಮ್ಮೆ ಜೋಗಪ್ಪನ ಧಾಟಿ ನೆನಪಾಗುತ್ತದೆ, ಮತ್ತೊಮ್ಮೆ ಚೌಡಿಕೆಯವರ ಥರಾ ಎಂದೆನಿಸುತ್ತದೆ, ಮಗದೊಮ್ಮೆ ಸರಳ ರಗಳೆಯ ಕಾವ್ಯಕೋದುಳಿ ಸರಗಟ್ಟಿದ ಶರಣರ ಸೊಳ್ಳಡಿ ವಚನಮಾಲೆ ಓದುತ್ತಿರುವ ಅನುಭವವಾಗುತ್ತದೆ.

ಅದು ಉಂಡಿತ್ತೋ ಉಪಾಸವಿತ್ತೋ ದಾರು ಬಲ್ಲರು

ಅದು ಆ ಎಲುಬು ಮೂಳೆಯ ಹಂದರವು ಯಾಕಲ್ಲಿ ಮಲಗಿತ್ತೋ ದಾರುಬಲ್ಲರು

ಅನ್ನದಾಸೆಯೂ ನೀರದಾಹವೂ ಅದರೊಳಗಿತ್ತೋ ಇಲ್ವೋ ದಾರು ಬಲ್ಲರು

ಆ ಜೀವದ ನೆನ್ನೆಗಳು ಆ ಜೀವದ ನಾಳೆಗಳು ಹೆಂಗಿದ್ದವೋ ದಾರು ಬಲ್ಲರು

ಕಿವುಡನಯ್ಯ ಸಿವನು ಕಿವಿಯು ಅವಗೆ ಕೇಳದು

ಕುರುಡನಯ್ಯ ಸಿವನು ಕಣ್ಣು ಅವಗೆ ಕಾಣದು

ಮೂಕನಯ್ಯ ಸಿವನು ಮಾತು ಅವಗೆ ಬರದು

ಹೇಳುವನಯ್ಯ ಸಿವನು ಕಾಲು ಅವಗೆ ಇಲ್ಲವು

ವಿಶಿಷ್ಟ ಶೈಲಿಯ ಬಂಧದಲ್ಲಿ ಆಪ್ತವಾಗಿ ಬಿಚ್ಚಿಕೊಳ್ಳುವ ಮಾದಕತೆ ಈ ಕಾದಂಬರಿಯ ಹೆಚ್ಚಳಗಳಲ್ಲೊಂದು. ಪುರಾಣಗಳಲ್ಲಿ ಜನಪದದಲ್ಲಿ ಹೂತುಹೋದ ಸಂಗತಿ, ಸೂಕ್ಷ್ಮ ಆಶಯಾದಿಗಳ ನೇಯ್ಗೆಯನ್ನು ಕುಸುರಿಯಿಂದ ಕಲಾತ್ಮಕವಾಗಿ ಬಿಡಿಸುವ ಚಾಣಲೇಖಣಿ ಬೆರಗಿಗೆ ಪರವಶರಾಗುತ್ತವೆ. ಜಾನಪದೀಯ ನಂಬಿಕೆ, ಆಚರಣೆಗಳನ್ನು ತನ್ನ ತೆಕ್ಕೆಗೆ ಬಗ್ಗಿಸಿಕೊಳ್ಳುತ್ತಾ, ಅರಳುತ್ತಾ, ಸೆಲೆಯುಕ್ಕಿ ಹಿಗ್ಗುತ್ತಾ, ನುಗ್ಗಿ ಬರುವ ಇಲ್ಲಿನ ಕನ್ನಡ ಗದ್ಯದ ಆಹ್ಲಾದತೆ ಹೃದ್ಯತೆಗೇಯತೆ ಚಪ್ಪರಿಸುತ್ತ ಮೆಲುಕು ಹಾಕುವಂತಿದೆ. ಅದರಲ್ಲಿಯೂ ಮುಖ್ಯವಾಗಿ ಕಡೆಯ ಏಳೆಂಟು ಪುಟಗಳಲ್ಲಿ ಕೇಂದ್ರೀಕೃತವಾಗಿದೆ. ಪೂರ್ವಾರ್ಧದಲ್ಲಿಯೂ ಇಂಥ ಅಂಶಗಳು ಎಡೆಸಿಕ್ಕಾಗ ಪುಟಿದುಕ್ಕಿ ತಲೆ ಹಾಕುತ್ತವೆ. ಪ್ರಕೃತಿಯ ಪ್ರೀತಿ, ಅದರೊಂದಿಗೇನೆ ಬೆರೆತು ಬೆಳೆಯುವ ಬೆಸುಗೆ ಲೇಖಕರಿಗೆ ಪ್ರಿಯವಾದ್ದು, ನಿಸರ್ಗ ಈ ಕಾದಂಬರಿಯ ಜೀವಧ್ವನಿ, ಜೀವಕಳೆ, ಪರಿಸರವಾದಿಗಳು ಓದಿ ಎದೆತಟ್ಟಿಕೊಂಡು ಸಾಲುಗಳು ಸಾಲುಗಟ್ಟಿವೆ.

ಹಣಕಾಗಿ ಮಾನವರು ಹೆಣಗಳ ನಾರು ತಿಂತರ

ಹೆತ್ತ ತಾಯನು ಕೊಂದ ಪರಸುರಾಮರು ಕೋಟಿ ಕೋಟಿ

ಕೂಡಿದೆಂಡರ ಸುಟ್ಟ ಸಿರಿರಾಮರು ಅದಕೂ ಡಬಲ್ ಕೋಟಿ ಕೋಟಿ

ದುಕ್ಕ ಬ್ಯಾಡವ್ವ ತಂಗಿ ದುಕ್ಕ ಬ್ಯಾಡವ್ವ ನೇರುಳಾ

ಮರದ ಮಾತು ಮುಗಿಯಲೂ ಆ ತಾರಾಮರವೂ

ನರಮಾನವರಾದರೇನಕ್ಕೆ ಅವರು ನಮ್ಮ ಮಕ್ಕಳಲ್ವ

ನಾವು ಅವರುಗ ನೆರಳು ನೀಡಲ್ವ

ಅವರು ತಿನ್ನಕ್ಕ ನೀವಿಯೊ ಸೀಯಾದ ಹಣ್ಗಳ ನೀಡಲ್ವ

ಅವರು ನಮ್ಮ ತರಿದರೇನಕ್ಕ ಅವರು ನಮ್ಮ ಮಕ್ಕಳಲ್ವ

ಆ ತಾರಾಮರದ ಮಾತನು ಕೇಳಿ ನೇರುಳಾ ಮರವಾದುದು ಕುಲುಕುಲು

ನಗ್ತಾ ಅಯ್ಯಾ ನರಲೋಕದ ಹಣಬರವೆ ಅಂತು ......

ಇದರ ನೋವಿನ ಇನ್ನೊಂದು ಮುಖದ ಪರಿಚಯಕ್ಕೆ ಮಾಯಪುರದ ಸಾರುಜನಿಕ ಹಾಸ್ಟೆಲು ಸಾಕುಃ

ಆ ಹಾಸ್ಟಲು ಅಂದ್ರಾ ದಯ್ಯದ ಮನೆ ರೀತೀಲಾಗಿತ್ತು. ಮೂಲೋಕದ ಕೊಳಕ್ತನ ಅಲ್ಲಿ ನಿದ್ದಾ ಲೋಕದಲಿ ತಲ್ಲೀನವಾಗಿ ಬಿದ್ಕಂಡಿತ್ತು. ದಿಕ್ಕಾಪಾಲು ದಿವಾಳಿ ಮರುಮಕ್ಳು ಯಾರೋ ಆ ಹಾಸ್ಟಲನೀಗ ನಡ್ಸುಕೊಂಡು ಬತ್ತಿದ್ರು. ಅಲ್ಲಿ ಹೈಕಳುಗಾ ಒಂಜಿನಾ ಊಟವಿದ್ರಾ ಒಂಭತ್ತು ಜಿನಾ ಊಟವಿರ್ತಿರಲಿಲ್ಲ. ಕಾಲಕಾಲಕೆ ಗ್ರಾಂಟು ಬಂದರೂ ಕೂಡ ಅಲ್ಲಿ ಓದುತಿರಾ ಹೈಕಳುಗಾ ಕಾಲ ಕಾಲಕೆ ಸರಿಯಾಗಿ ಊಟಾ ದೊರಕ್ತಿರಲಿಲ್ಲ. ನರಲೋಕ ನರಕದಂತಾ ಹಾಸ್ಟಲುಗ ಈ ಸಿವಣ್ಣನಾದವನು ಬಂದುದು ಅವ್ಯಾಳದಲಿ ಅಕಾಲದಲಿ ......

ವ್ಯವಸ್ಥೆಯೊಳಗಿನ ಟೊಳ್ಳು ಪೊಳ್ಳುಗಳನ್ನು ಮುಳ್ಳೂರರ ಲೇಖನಿ ಸಮರ್ಥವಾಗಿ ಸೆರೆ ಹಿಡಿದಿರುವುದನ್ನು ಉತ್ಪ್ರೇಕ್ಷಿಸುವ ಅಗತ್ಯವಿಲ್ಲ. ಹಾಸ್ಟಲಿನ ಚಿಂತಾಜನಕ ಸ್ಥಿತಿ, ಅಲ್ಲಿ ನಡೆಯುತ್ತಿರುವ ವಿದ್ಯಾಮಾನ, ಸಮಸ್ತವನ್ನೂ ಕುರಿತು ಸೋಷಿಯಲ್ ವೆಲ್‌ಫೇರ್ ಆಫೀಸರ್‌ಗಾ ಒಂದರ್ಜಿ ಸಿವಣ್ಣನು ಬರ್ದು ಕೊಟ್ಟದ್ದು ಕ್ಲಿಷ್ಟ ಭಾಷೆಯಲ್ಲಿದ್ದು, ರೋಚಕವಾಗಿದ್ದು, ವ್ಯಂಗ್ಯದಲ್ಲಿ ಕೆನೆಗಟ್ಟಿದೆ. ಈ ಅಧ್ಯಾಯ ಮುಗಿಯುವ ವೇಳೆಗೆ ದಲಿತ ಸಂಘರ್ಷ ಸಮಿತಿ ಮೊಳಕೆಯೊಡೆದು ಪಲ್ಲವಿಸುತ್ತದೆ. ‘ಮರಣ ಮಂಡಲ ಮಧ್ಯದೊಳಗೆ’ ಕಾದಂಬರಿಯಂತೆ, ಇಲ್ಲಿಯೂ ಅಂಬರದಿಂದ ಆರಂಭವಾದ ಕಥೆ ಕಡೆಯಲ್ಲಿ ಮಣ್ಣಲ್ಲಿ ಹರಡಿಕೊಳ್ಳುತ್ತದೆ.

ಅಂತರ್ಜಾತೀಯ ವಿವಾಹಕ್ಕೆ ಒಲಿದು ಒತ್ತು ಕೊಡುವ ಲೇಖಕರ ಅಂತರಂಗದಾಶಯಗಳು ಕೊನೆಯ ಹರಳುಗೊಳ್ಳುತ್ತದೆ.

ಪರಿಸರ ಮಾಲಿನ್ಯ ಕುರಿತು ಇತ್ತೀಚೆಗೆ ತಾಸುಗಟ್ಟಲೆ ಭಾಷಣವೂ, ಟನ್ನುಗಟ್ಟಲೆ ಬರಹವೂ ಹೊರಬರುತ್ತಿದೆ. ಅದಕ್ಕಿಂತ ಭಯಾನಕವಾಗಿರುವುದು ಸಾಹಿತ್ಯ ಪರಿಸರ ಮಾಲಿನ್ಯ. ಮಲಿನವಾದ ಇದರ ಪಕ್ಷಪಾತದಲ್ಲಿ ಮುಳ್ಳೂರರಂತವರು ಕಳೆದು ಹೋಗುವ ಸಾಧ್ಯತೆಗಳು ಹೆಚ್ಚು ಮತ್ತು ಸುಲಭವಾಗಿವೆ. ಈಗಾಗಲೇ ಅವರು ಒಮ್ಮೆ ಸಾಹಿತ್ಯ ವಾತ್ಸಲ್ಯದಿಂದ ದೂರಾಗಿದ್ದಾರೆ. 'ಮರಣ ಮಂಡಲ ಮಧ್ಯದೊಳಗೆ' ಕಾದಂಬರಿಗೆ ಸಿಗಬೇಕಿದ್ದಷ್ಟು ವಿಮರ್ಶೆಯ ಪುರಸ್ಕಾರ ಸಿಗಲಿಲ್ಲ. 'ದಂಡಕಾರಣ್ಯ' ಕಾದಂಬರಿಗೂ ಹಾಗಾಗಬಾರದು. ಪ್ರಸ್ತುತ ಈ ಕಾದಂಬರಿ ಅರ್ಥಪೂರ್ಣವೂ ಯಶಸ್ವಿಯೂ ಆದ ಮಹತ್ವದ್ದೆನ್ನಬಹುದಾದ ಕಲಾಕೃತಿಯಾಗಿ ಯಾಕೆ ಪರಿಗಣಿಸಬೇಕು ಎಂಬ ಬಗ್ಗೆ ಭಾಷೆಯ ಬಾಗು ಬಳುಕು ಬಿಗಿಬಿಗಿ ಬಿಂಕ ಬಿಚ್ಚೋಕ ನಾದತ್ವ ಅರ್ಥ ವಿಸ್ತಾರಗಳು ಕಥಾ ವರ್ಣನೆಗೆ ಅಳವಡಿಕೆಯಾಗಿ ಇಲ್ಲಿ ಜೀವ ತಳೆದು ಕೊನರಿ ದಾಂಗುಡಿಯಿಟ್ಟಿವೆ. ವಿಡಂಬನೆಯ ಅಲಗು ಮೊನಚು, ಅಲ್ಲಲ್ಲಿ ಅದು ಹೊದ್ದ ಹಾಸ್ಯದ ಹಳ್ಳಿಗಂಬಳಿಯ ರೂಕ್ಷತೆ ಪ್ರಿಯವಾಗುತ್ತದೆ.

ಇದಕ್ಕೆ ಒಂದು ಉದಾಹರಣೆ ಪ್ರಸನ್ನಕುಮಾರ್ ಪ್ರಸಂಗ. "ನಮಸ್ಕಾರ, ನನ್ನೆಸರು ಚಂದ್ರಶೇಖರ ಶಾಸ್ತ್ರಿ, ಇವರು ರಾಮರಾವ್, ಇವರು ಶಾಮಭಟ್ಟರು, ಈ ಮತ್ತೊಬ್ಬರು ರಾಘವೇಂದ್ರರಾವ್, ನಾವೆಲ್ಲ ಆರ್.ಎಸ್.ಎಸ್.ನವರ"

"ಆಯ್ತು ಮಾಸೋಮ್ಗಳ ಎಲ್ರುಗೂ ನಮಸ್ಕಾರ, ನನ್ನೆಸರು ಪ್ರಸನ್ನಕುಮಾರ್ ಹೊಲಾರ್".

ಹೊಲಾರರೆಂಬ ಸಬುತವ ಕೇಳಿ ಮನದಲಿ ಕಸಿವಿಸಿಗೊಂಡವರಾಗಿ ಆ ರಾಮರಾವರು "ಇದೇನು ಸಾರ್ ತಾವು ಹೊಲಾರೆಂಬ ಆಪ ಸಬುತವ ತಮ್ಮ ಹೆಸರಿನ ಜೊತಲಿ ಇಟ್ಕಂಡಿದ್ದೀರಲ್ಲಾ. ಆ ಅದ ಕಿತ್ತೊಗೆಯಬಾರದೇ? ತಮ್ಮೆಸರು ಮಾತ್ರವೇ ಮುದ್ದಾಗಿದೆ" ಇದರಿಂದ ಕಳವಳನಾದ ಕುಮಾರನು "ಇರ್ಲಿ ಬುಡಿಸಾ ಆ ಸಬುತವೇನು ಭಾರವಲ್ಲ, ಮೊಕಾ ಅಂದಮೇಲ ಮೂಗಿರಬೇಕು, ಮೂಗಿದ್ದ ಮೇಲ ನೆಗಡಿ ಮಾಮೂಲು. ಅದೇ ರೀತೀಲಿ ನಮ್ದೇಸ್ದಲಿ ಮನ್ಸ ಅಂದ ಮೇಲ ಜಾತಿ ಇರ್ಲೇಬೇಕು, ಜಾತಿ ಇಲ್ದವ ಮನ್ಸನೇ ಅಲ್ಲಾ ಅಂದಬುಟ್ಟು ಡಿಕ್ಲೇರ್ ಮಾಡ್ತರ ಇಲ್ಲಿ, ಹೋಗಲಿ ಬುಡಿಸಾ, ನಮ್ಮ ಜಾತಿ ಹೆಸರ ನಾವಿಟ್ಕಂಡ್ರಾ ಯಾರುಗಾ ಏನು ನಷ್ಟವಿಲ್ಲ. ನೀವಿಲ್ಲಾ ಶಾಸ್ತ್ರಿ, ರಾಮಭಟ್ಟ, ಈ ಇತ್ಯಾದಿ ಜಾತಿಸೂಚಕ ಹೆಸರ ಇಟ್ಕಂಡಿಲ್ವ, ಅದೇ ತರಾ ನಂದೂವಿ ಅಂದ್ಕಳಿ" ಹೀಗೆ ಹಾಸ್ಯ ಪ್ರಸಂಗಗಳಿವೆ.

ಒಂದು ಹಂತದಲ್ಲಿ ಕನಕದಾಸರ ರಾಮಧ್ಯಾನ ಚರಿತೆಯಂತೆ, ಇದೊಂದು ರೂಪಕ ಕೃತಿಯಾಗಿ ಮೈತೆರೆದುಕೊಂಡಿರುವ ಧ್ವನಿರಮ್ಯ ಗದ್ಯ ಕಾವ್ಯ. ಏಕೆಂದರೆ, ಈ ಕಾದಂಬರಿ ಮಾತನಾಡುವುದೇ ರೂಪಕಗಳಲ್ಲಿ, ಮೈದೋರುವುದೇ ಪ್ರತಿಮೆಗಳಲ್ಲಿ. ಇಡೀ ಕಾದಂಬರಿಯಲ್ಲಿ ನಾವು ಮುಳ್ಳೂರರು ಜೀವನವನ್ನು ನೋಡುವ ರೀತಿ ಮತ್ತು ಅರ್ಥೈಸುವ ಚಿಂತನಾಕ್ರಮವನ್ನು, ಜೀವನವನ್ನು ಗ್ರಹಿಸುವ ವಿಧಾನ, ಅವರ ಬದುಕನ್ನು ನೋಡುವಿಕೆಯು ಇಲ್ಲಿ ಅಡಕವಾಗಿದೆಯೆಂದು ಹೇಳಬಹುದು. ಹೆಣ್ಣು, ಹೊನ್ನು, ಮಣ್ಣು ಎಂಬ ಮಾಮೂಲಿಯ ಮೋಹಜಾಲದಲ್ಲಿ ಸಿಗುವ ಮನುಷ್ಯನ ಮನಸು ವಿಲಿವಿಲಿ ಒದ್ದಾಡುವ, ಭ್ರಾಂತಿಗಳನ್ನು ಬಿಡಿಸಿರುವುದು ಕುಶಲತೆಯ ಚಿತ್ತಾರವಾಗಿದೆ. ನಗುತಾ-ಬೀಗುತಾ ಕಸಮುಸುರೆಗಳಿಲ್ಲದ ಊರೊಂದು ಯಾವುದೋ ಗಳಿಗೇಲಿ ಅಪರಂಜಿಯ ಆಸೆ, ಅದಕೆ ಆತ್ಕೊಂಡು ಅದೇಯ ಕಡೆಗೆ ದಂಡಕಾರಣ್ಯವಾದ ಘಟನೆ ಆಕಾರ ಪಡೆದುಕೊಳ್ಳುವುದನ್ನು ಅದರಲ್ಲಿ ಗೆರೆಗೀರು ನರನಾಡಿ ಬಿಸಿಯುಸಿರು ತಾಕಲಾಟ ರಕ್ತಸಂಚಾರ ಸಹಿತ ಕಡೆದಿಟ್ಟಿರುವುದು ಈ ಕಾದಂಬರಿಯ ಶಿಲ್ಪ ವಿನ್ಯಾಸ.

ನಾಕದಲಿ ಈ ಕತೆಯು ಇಲ್ಲ, ನರಕದಲಿ ಈ ಕತೆಯು ಇಲ್ಲ

ನರಜಲುಮದ ಹಣಬರವು ರಕ್ತಲಿ ಮಿಂದ ಕತೆಯು ಕೇಳವ್ವಾ

. . . . ಸತ್ಯವು ಗಲ್ಲಿಗೇರಿದ ಕತೆಯ

ಕಥೆ ಹೇಳುವ ಹೇಳುಗಾರಿಕೆಯೊಳಗೇಯ ಕಾದಂಬರಿಕಾರರು ಮುಳುಗಿ ಇಷ್ಟೊಂದು ತನ್ಮಯರಾಗಿ ಓದುಗರನ್ನು ಮರೆತು ಹೋಗುವುದಕ್ಕೋ, ಇದರಿಂದಾಗುವ ಅಪಾಯಕ್ಕೋ, ಲೇಖಕರು ತುಸುವಾದರೂ ಎಚ್ಚರವಾಗಬೇಕಿತ್ತೆನಿಸುತ್ತದೆ. ವರ್ಣನೆಗಳನ್ನು ಬೃಹತ್ ಪ್ರಮಾಣದಲ್ಲಿ ಕೆತ್ತಿರುವುದು, ಆನಂದ ಕುಂಠಿತವಾಗುತ್ತದೆ. ಕಥೆ ಮುಂದಕ್ಕೆ ಸಾಗುವುದು ಕಷ್ಟ. ನಡ-ನಡುವೆ ಕಥೆ ನಿಂತು ಕೂತು, ತೂಕಡಿಸಿ, ಕೆಮ್ಮಿ, ಸೀನಿ, ಆಕಳಿಸಿ, ಎಡವಿ, ಮುಗ್ಗರಿಸಿ ಮೇಲೆದ್ದು ಕೊಡವಿ, ಮೈಮುರಿದು, ನಿಟಿಗೆ ತೆಗೆದು ಮತ್ತೆ ಮುಮದಕ್ಕೆ ಹೆಜ್ಜೆಯಿಡುವುದು ಇಲ್ಲಿನ ನಿಧಾನ ಸಂವಿಧಾನವಾಗಿದೆ. ಕೆಲವು ಆಕಸ್ಮಿಕ ತಿರುವುಗಳನ್ನು ನಿಗ್ರಹಿಸಿದ್ದರೆ, ಇನ್ನೂ ಚೆನ್ನಾಗಿರುತ್ತಿತ್ತು ಅನ್ನಿಸುತ್ತದೆ. ಕನ್ನಡ ಭಾಷೆಯು ಹರಿಯುವಾಗ ಇಂಗ್ಲೀಷಿನ ಕಲ್ಲುಗಳು ಬಿದ್ದು ಅಲ್ಲಲ್ಲಿ ಎದ್ದೇಳುವುದು ಸ್ವಾರಸ್ಯವಾಗಿವೆ, ಇಲ್ಲಿಯೂ ಸಹ ಕೆಲವು ದೋಷಗಳಿವೆ. ಸಮಕಾಲೀನ ಸಾಮಾಜಿಕ ವಾರ್ಗಿಕ ಏರುಪೇರುಗಳು ಮುಳ್ಳೂರರ ಟೀಕೆಯ ಮುಳ್ಳುಗಳಿಂದ ಬಿಡಿಸಿ ತಪ್ಪಿಸಿಕೊಳ್ಳಲಾಗದೆ ಒದ್ದಾಡಿವೆ. ಹೀಗೆ ಜಾತಿ, ಬಡತನ, ಹಸಿವು, ಈ ಮೂರರ ಸುತ್ತಲೇ ಸುತ್ತುತಿವೆ ಎನ್ನಬಹುದು. ಲೇಖಕರ ಜೀವನಕ್ಕೆ ಹತ್ತಿರವಾಗಿದೆಯೆನ್ನಬಹುದು.

'ಸಿಂಗಳೀಕ' ಕಥಾ ಸಂಕಲನಗಳಲ್ಲಿ ಬರುವ ಪಾತ್ರವೆಲ್ಲಾ ಸಾಮಾನ್ಯ ಗ್ರಾಮೀಣ ಪ್ರತಿಭೆಗಳೆ. ಮುಳ್ಳೂರರ ಒಟ್ಟು ಎಂಟು ಕಥೆಗಳ ಸಂಕಲನ. ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆ ಕಾಲಘಟ್ಟಗಳಲ್ಲಿ ಬರೆದ ಕಥೆಗಳ ಒಟ್ಟು ಸಾರವೇ 'ಸಿಂಗಳೀಕ'.

ಇಲ್ಲಿನ ಕಥೆಗಳಲ್ಲಿ ಬರುವ ಗ್ರಾಮೀಣ ಯುವ ಪ್ರತಿಭೆ ಆಚಾರ್‌ರಾಗಲಿ, ಗದ್ಯ ಕವಿಯಾಗಲಿ, ಉಮ್ಮಳದ ಶಂಕರನಾಗಲಿ, ಅಸಾಮಾನ್ಯರಲ್ಲ. ಅವರು ನಮ್ಮ ನಿಮ್ಮೆಲ್ಲರ ಬದುಕಿನಲ್ಲಿ ಹಾಸು ಹೊಕ್ಕಾಗಿರುವವರು, ಹಾದು ಹೋಗುತ್ತಿರುವವರು. ಅವರು ಎದುರಿಸಿದ ಸಂಕಷ್ಟಗಳು ನಮ್ಮ ನಿಮ್ಮವು, ಅವರ ಮನದಾಳದಲ್ಲಿನ ಭಾವನೆಗಳು, ಚಿಂತನೆಗಳು ನಮ್ಮಲ್ಲಿಯೂ ಸುಳಿದಾಡಿವೆ, ಅವರ ಬದುಕಿನ ಸದ್ದಿಲ್ಲದ ದುರಂತಗಳು ನಮ್ಮವೂ ಆಗಿವೆ. ಹಾಗಾಗಿ ಕಥೆಗಳು ಆತ್ಮೀಯವಾಗಿ ಓದುಗರನ್ನು ತಟ್ಟುತ್ತವೆ. ಹೀಗೆ ಸಾಮಾನ್ಯರ ಚಿತ್ರವನ್ನು ಕಟ್ಟಿಕೊಡುವ 'ಸಿಂಗಳೀಕ' ಕೇತಗಳು ಅತೀ ಭಾವುಕತೆಯಿಂದ ನರಳುವುದಿಲ್ಲ. ಹಾಗೆ ಹುಸಿ ಬಂಡಾಯವನ್ನು ಹಸಿ ಹಸಿಯಾಗಿ ನಮ್ಮ ಮುಂದಿಡುವುದಿಲ್ಲ. ವ್ಯಂಗ್ಯ ವಿಷಾದಗಳನ್ನು ತನ್ನ ಒಡಲಲ್ಲಿಟ್ಟುಕೊಂಡಿರುವ ಈ ಕಥೆಗಳು ಸಾಮಾನ್ಯರಿಗೆ ಒದಗುವ ಶೋಷಣಾ ಸ್ಥಿತಿಯನ್ನು ಅವರ ಪ್ರತಿಭಟನೆಯ ಕಾವನ್ನು ತಣ್ಣನೆ ನಿರೂಪಿಸುತ್ತದೆ. ಉಮ್ಮಳದ ಶಂಕರ ಕೊನೆ ಮನೆಯ ಹೆಂಗಸಿಗೆ ಕಾಯಿಚೂರನ್ನು ತಂದುಕೊಡುವಾಗ ಅವಳ ಮಾತಿನಂತೆ ಅದನ್ನು ಕಚ್ಚುತ್ತಿರಲಿಲ್ಲ. ಆದರೆ ಒಮ್ಮೆಯೂ ತಪ್ಪದೆ ಆ ಕಾಯಿಚೂರುಗಳನ್ನು ಅಮೂಲಾಗ್ರವಾಗಿ ತನ್ನ ನಾಲಿಗೆಯ ಮೂಲಕವೇ ನೆಕ್ಕುತ್ತಿದ್ದನು. ಇದವನಿಗೆ ಮನೋರಂಜಕವಾದ ಮತ್ತು ತಮಾಷೆಯಿಂದ ಕೂಡಿದ ಸಂಗತಿಯಾಗಿತ್ತು. 'ಕಾಯವರು ಯಾರಿಹರೋ ಕಾಣೆನಲ್ಲಾ' ಕಥೆಯಲ್ಲಿನ ಮುದುಕ ಬೀರಪ್ಪ ಕಳೆದುಕೊಂಡ ಚಿನ್ನದ ಸರದ ಬೆಂಬೆತ್ತಿ ಭೂತವಾಗಿ ತಾಸೀಲ್ದಾರನ ಜೀವ ಪಡೆಯುತ್ತಾನೆ. ಇಂಥ ಸಂದರ್ಭಗಳಲ್ಲಿ ಮುಳ್ಳೂರು ನಾಗರಾಜು ಯಾರ ಪರವಾಗಿ ಇದ್ದಾರೆ ಎಂಬುದು ತಿಳಿಯುತ್ತದೆ.

ದಲಿತ ಬದುಕಿನಲ್ಲೂ ಹೆಡೆಯಾಡಿಸುವ ಪಟ್ಟಭದ್ರ ಹಿತಾಸಕ್ತಿ, ಅಜ್ಞಾನ, ವಿವೇಚನಾ ರಹಿತ ನಡವಳಿಕೆಗಳನ್ನು ಲೇಖಕರು ಕೆಲವು ಕಥೆಗಳಲ್ಲಿ ದಾಖಲಿಸುತ್ತಾರೆ. 'ಓ ದೇವರೇ ಇವರನ್ನು ಕಾಪಾಡು' ಕಥೆಯನ್ನು ಈ ದೃಷ್ಟಿಯಿಂದ ಪರಿಶೀಲಿಸಬಹುದು. ದುರಂತ ಹಾಗೂ ವಿಷಾದಗಳು ಸ್ಥಾಯಿಭಾವವಾಗಿ ಇಡೀ ಸಂಕಲನದಲ್ಲಿ ಕಂಡುಬರುತ್ತದೆ. ಕೋಕಾಕೋಲ ಎಂದು ನವರತ್ನ ತೈಲ ಕುಡಿದು ಷಾಪಿಗೆ ಸೇರುವ ಆಚಾರಿ, ಮೀನು ತಿನ್ನುವ ಸುಖದಲ್ಲಿ ಗಂಟಲಿಗೆ ಮುಳ್ಳು ಚುಚ್ಚಿಸಿಕೊಂಡು ಪ್ರಾಣ ಬಿಡುವ ಮಲ್ಲಪ್ಪ, ಗದ್ಯ ಕವಿಯ ಕಹಿ, ಪ್ರೇಮ ಪ್ರಸಂಗ, ತಮ್ಮಯ್ಯನ ಏಳು ಬೀಳುಗಳು, ರೈಲಿನಿಂದ ಹಾರಿ ದಾರುಣ ಸಾವು ಕಾಣುವ ರಾಮು, ದುರಂತದ ವಿವಿಧ ಬಣ್ಣಗಳನ್ನು

ಮೂಡಿಸುತ್ತಾರೆ. ಬಡವರ ಬದುಕು ಎಷ್ಟು ಕಟುವಾಗಿದೆ, ಎಂತಹ ಕಟುಕರು ನಮ್ಮ ನಡುವಿದ್ದಾರೆ ಎಂಬುದನ್ನು 'ಸಿಂಗಳೀಕ'ದ ಕಥೆಗಳು ರೋಷವಿಲ್ಲದೆ ಚಿತ್ರಿಸುತ್ತದೆ.

ಹೆಣದ ಜೇಬನ್ನು ಸೋಸುವ ಸ್ಟೇಷನ್ ಮಾಸ್ಟರು, ಅಂತರಜಾತಿ ವಿವಾಹದೊಡನೆ, ಬ್ರಾಹ್ಮಣತ್ವದ ತಡಕಾಟದಲ್ಲಿರುವ ತಾಸಿಲ್ದಾರು, ತಿಕ್ಕಲು ಮನುಷ್ಯ ವಾರ್ಡನ್ ನಂಜಪ್ಪ, ಕಸಬುಗಾತಿ ಜಯಮ್ಮ, ಗದ್ಯ ಕವಿಯ ಕಳ್ಳ ಅಪ್ಪ ಮುಂತಾದ ಪಾತ್ರಗಳು ಕಥೆಗಾರರ ಸೂಕ್ಷ್ಮ ಅವಲೋಕನಕ್ಕೆ ಕೇವಲ ಉದಾಹರಣೆಗಳು ಮಾತ್ರವಾಗಿರದೆ, ನಮ್ಮ ಸಮಾಜದ ಹಲವು ಮುಖಗಳ ಕನ್ನಡಿಗಳೂ ಆಗಿವೆ. ಪಾತ್ರ ಸ್ವಭಾವಗಳನ್ನು ನಾಗರಾಜರು ಅಚ್ಚುಕಟ್ಟಾಗಿ ರೇಖಿಸಬಲ್ಲರು ಎಂಬುದಕ್ಕೂ ಇವು ಉದಾಹರಣೆಗಳಾಗಿ ನಿಲ್ಲುತ್ತವೆ.

'ಸಿಂಗಳೀಕ'ದ ಎಲ್ಲಾ ಕಥೆಗಳು ಕೆಳವರ್ಗದವರ ಬವಣೆಗಳನ್ನು ಬಿಡಿಸುತ್ತವೆ. ಹಾಗೆ ಬಿಡಿಸುವಾಗ ಸಮಕಾಲೀನ ರಾಜಕೀಯದ ವ್ಯಕ್ತಿಗಳು ಅವರ ಬದುಕಿನಲ್ಲಿ ಕೂಡಿಕೊಂಡಿರುವ ಬಗೆಗೆ ಕಥೆಗೂ ಭಾಷ್ಯವನ್ನು ಬರೆಯುತ್ತವೆ. ತೀರಿಕೊಂಡ ಮಹಾತ್ಮರ ಆತ್ಮವು ತಾನಿದ್ದ ಭೂಲೋಕದ ಕಡೆ ನೋಡಲಾಗಿ ಆ ನೋಟವು ಆಗಷ್ಟೇ ಧರೆಗೆ ಬಿದ್ದ ತಾಯ ಹೊಕ್ಕಳು ಬಳ್ಳಿಯ ಸಂಬಂಧವ ಇನ್ನೂ ಕತ್ತರಿಸಿಕೊಂಡಿರದ ಕತ್ತಲ ಮುದ್ದೆಯಂತಿದ್ದ ಆ ಕೂಸಿನ ಮೇಲೆ ಬಿತ್ತು..... ಎನ್ನುವಂತೆ ಕಥಾ ನಿರೂಪಣೆಯಲ್ಲಿ ಅಥವಾ ಸಿದ್ದಪ್ಪ ಆಳು ಜನರ ಜೊತೆ ಮಾತನಾಡುವಾಗ ಬಸವಣ್ಣ, ಗಾಂಧಿ, ಅಂಬೇಡ್ಕರ್ ಸುಳಿಯುವ ಬಗೆಯಲ್ಲಿ, ಬಂದೂಕಿನ ಆಸೆ ಮತ್ತು ನಕ್ಸಲೈಟ್ ಜೋಶಿ, ಮುದ್ದುಮಾದಯ್ಯ ಮತ್ತು ಸಿಂಗಳೀಕರ ಬದುಕಿನಲ್ಲಿ ಅಡಿಯಿಡುವ ಪರಿಯಲ್ಲಿ ಸಾಮಾನ್ಯ ಪ್ರತಿಕ್ರಿಯೆಗಳು ದಾಖಲಿಸಲ್ಪಟ್ಟಿವೆ.

ಸಾಮಾಜಿಕ ಕಥೆಗಳ ಸಂಕಲನವಾದ 'ಸಿಂಗಳೀಕದಲ್ಲಿ ಜಾನಪದ ಎನ್ನಬಹುದಾದ ಒಂದು ಜೀವ ವೃಕ್ಷದ ಕಥೆ' ಸೇರಿಕೊಂಡಿವೆ. ಈ ಪುಟ್ಟ ಕಥೆ, ಇತರ ಕಥೆಗಳಲ್ಲಿನ ಹಾಗೆ ಸಾಮಾಜಿಕ ಆವರಣವನ್ನು ಹೊಂದಿಲ್ಲದಿದ್ದರೂ, ಅದರ ಕೇಂದ್ರ ಆಶಯ ಮಾತ್ರ ಇತರ ಕಥೆಗಳದ್ದೇ ಆಗಿದೆ. ಹಾಗಾಗಿ ಈ ಸಂಕಲನದಲ್ಲಿ ಇದರ ಇರುವಿಕೆಗೆ ಅರ್ಥ ಬಂದಿದೆ.

"ಮರಣ ಮಂಡಲ ಮಧ್ಯದೊಳಗೆ" ಕೃತಿಯನ್ನು ರೂಪಿಸಿದ ವ್ಯಕ್ತಿತ್ವ ಈ ಕಥೆಗಳನ್ನು ರಚಿಸಿರುವುದರಿಂದ ಕಥಾ ಸಂವಿಧಾನದಲ್ಲಿ ಪಾತ್ರಗಳನ್ನು ಕಡೆಯುವ ರೀತಿಯಲ್ಲಿ ತನ್ನ ನೆಲದ ಸೊಗಡನ್ನು ಬಳಸುವಲ್ಲಿ ಅದೇ ಹದ ಸಾಧಿತವಾಗಿದೆ. ವಾಸ್ತವ ಚಿತ್ರದೊಂದಿಗೆ ಕಲ್ಪನೆ ಬೆರೆತುಕೊಂಡು ವಿಶಿಷ್ಟ ಕೊಲಾಜನ್ನು ಕಥೆಗಳು ಮುಂದಿಡುತ್ತವೆ. ಕಲ್ಪನೆಯ ಬಣ್ಣಗಳು ವಾಸ್ತವ ಚಿತ್ರಕ್ಕೆ ದಕ್ಕಿರುವುದು ಕಥಗಾರರು ಬಳಸುವ ಕಾವ್ಯಾತ್ಮಕ ಶೈಲಿಯಿಂದಾಗಿ. ಇದನ್ನು 'ಮರಣ ಮಂಡಲ ಮಧ್ಯದೊಳಗೆ' ಯಲ್ಲಿಯೂ

ಗುರುತಿಸಬಹುದು. ಆದರೆ, ಈ ಎರಡೂ ಕೃತಿಯಲ್ಲಿ ದೇಸಿ ಕಥಾ ನಿರೂಪಣಾ ಶೈಲಿ ಹಾಗೂ ದೇಸಿ ಭಾಷೆಗೆ ಯಾಂತ್ರಿಕ ಕಾವ್ಯಾತ್ಮಕ ಶೈಲಿಯು ಮೆರುಗನ್ನು ನೀಡಿದ್ದರೆ 'ಸಿಂಗಳೀಕ'ದ ಕಥೆಗಳಲ್ಲಿ ಗ್ರಂಥಿಕ ಕಾವ್ಯಾತ್ಮಕ ಶೈಲಿಗೆ ದೇಸೀಯ ಸಿಂಗಾರದ ಕುಸುರಿಗೆಲಸವಿದೆ. ಕವಿ ಕನಸ್ಸಿನ ನಾಗರಾಜರ ಗದ್ಯದಲ್ಲಿ ಕಾವ್ಯ ಉಸಿರಾಡುತ್ತಿದೆ. ಕಥೆಗಳ ಶೀರ್ಷಿಕೆಗಳೇ ಇದಕ್ಕೆ ಸಾಕ್ಷ್ಯ ನುಡಿಯುತ್ತವೆ. 'ಕಾದ ಎದೆಯ ಮೇಲೊಂದು ಒಲವಿನ ಬರಹ' 'ಒಡಲೆಂಬ ಬಂಡೆಯ ಮೇಲೆ ಕಾದು ಕೆಂಡವಾಗಿದೆ ಕನಸು' ಎಂಬ ಶೀರ್ಷಿಕೆಗಳು ಕಥೆಯ ಒಡಲಾಳವನ್ನು ಧ್ವನಿಸುವ ಹಾಗೆ ಲೇಖಕನ ಭಾಷಾ ಪ್ರಭುತ್ವವನ್ನೂ ಧ್ವನಿಸುತ್ತವೆ.

'ಉಮ್ಮಳ' ಒಡಲೆಂಬ ಬಂಡೆಯ ಮೇಲೆ ಕಾದು ಕೆಂಡವಾಗಿದೆ ಕನಸು, ಸಿಂಗಳೀಕ ದಂತಹ ಮರೆಯಲಾಗದ ಕಥೆಗಳನ್ನು ಹೊಂದಿದೆ. ಕಾಲದ ಎದೆಯ ಮೇಲೊಂದು ಒಲವಿನ ಬರೆಹದ ಕಥೆಯು ಮುಕ್ತಾಯವಾಗಿ ನಾಗರಜರು ಬರೆದಿರುವ ಸಾಲುಗಳು ಇನ್ನಿತರ ಕಥೆಗಳಿಗೂ ಅನ್ವಯವಾಗುತ್ತವೆ. 'ಪ್ರತಿ ಕಥೆಯೂ ಇತಿಹಾಸದ ಒಂದು ಭಾಗ' ಹಾಗೆ ನೋಡಿದರೆ ಈ ಕಥೆಯೂ ಮುಗಿದು ಹೋಗಿದೆ. ಮುಗಿಯದ ಎಷ್ಟೋ ಪ್ರೇಮಗಳಿಗೆ ನಾಂದಿಯಾಗಿದೆ. ಮನುಷ್ಯನ ಅದ್ಭುತ ಕಲೆಗಾರಿಕೆಗೆ, ಕಾಲದ ಮಾಂತ್ರಿಕತೆಗೆ ಸವಾಲಾಗಬಲ್ಲ ಪ್ರೇಮ ಸಾಯುತ್ತಲೂ, ಸಾಯಿಸುತ್ತಲೂ ಬದುಕೇ ಇದೆ. ಮನುಷ್ಯ ಲೋಕದ ಈ ತಳಮಳವು ತಲೆಮಾರುಗಳ ನಂತರವೂ, ನಿಲ್ಲದೇ ಇರುವಂತಹದ್ದು. ಇದಕ್ಕೆ ನೆಪಮಾತ್ರ ಎನ್ನಬಹುದು.

ಸರಾಗವಾಗಿ ಓದಿಸಿಕೊಂಡು ಹೋಗುವ ಈ ಕಥೆಗಳು ಹೊಸಲೋಕವನ್ನು ತೆರೆಯದಿದ್ದರೂ, ಮಾನವೀಯ ಗುಣವುಳ್ಳ ಕಥೆಗಾರ, ವಿವಿಧ ಬಗೆಯ ಶೋಷಣೆಗೆ ಸಾಮಾನ್ಯರು ಒಳಗಾಗುವ ಪರಿಯನ್ನು ಸೂಕ್ಷ್ಮವಾಗಿ, ಸೃಜನಶೀಲವಾಗಿ ಕಂಡರಿಸುವ ಪರಿಯನ್ನು ಓದುಗನ ಎದೆಯೊಳಕ್ಕೆ ನೆಡುತ್ತವೆ. ನಮ್ಮ ಸುತ್ತ ಮುತ್ತ ಸುಳಿದಾಡುತ್ತಿರುವ ದುರಂತವನ್ನು ತುಂಬಿಕೊಂಡಿರುವ ಮೃದುವಾದ ಪ್ರೀತಿ, ಬಿರುಕು ಬಿಟ್ಟ ನೆಲದಲ್ಲಿದ್ದರೂ ಆಕಾಶದಗಲ ಕಾಣುವ ಕನಸುಗಳು, ವಿಶೇಷ ಸ್ವಾರ್ಥವಿಲ್ಲದೆ, ಕೈಚಾಚಿ ನೀಡುವ ಸಹಾಯ ಹಾಗೂ ಕಾಲೆಳೆತಗಳೆಲ್ಲ 'ಸಿಂಗಳೀಕ'ದ ಮೂಲಕ ಅಂತರಂಗವನ್ನು ಪ್ರವೇಶಿಸಿ ನಮ್ಮನ್ನು ಬದಲಿಸಲು ಪ್ರಯತ್ನಿಸಿವೆ. ಆರೋಗ್ಯಕರ ಬದುಕು, ಬದಲಾವಣೆಗಳನ್ನು ಬಯಸುವವರು, ಸಹಾಯವಾಗುವ ಕೃತಿಯಾಗಿದೆ ಎನ್ನಬಹುದು.

ಮುಳ್ಳೂರರ ಆತ್ಮಚರಿತ್ರೆಯಾದ 'ಮಾಮರದ ಮೇಲೊಂದು ಕೋಗಿಲೆ' ಅವರ ಜೀವನದ ವಿವಿಧ ಘಟ್ಟಗಳನ್ನು ಓದುಗರಿಗೆ ತಿಳಿಸುತ್ತಾ, ಅದರ ಜೊತೆ ಬಡತನ, ಹಸಿವು, ಮೋಸದ ಜಾಲ, ಹೆಣ್ಣುಮಕ್ಕಳ ಚಂಚಲತೆಗಳನ್ನು, ಹುಡುಗರ ಪೀಕಲಾಟವನ್ನು ಎಲ್ಲವನ್ನೂ ಅವರ ಮೊದಲ ಸಂಪುಟದ ಆತ್ಮ ಚರಿತ್ರೆಯಲ್ಲಿ ಹೇಳಿದ್ದಾರೆ. ಎರಡನೇ

ಸಂಪುಟ ಮುದ್ರಣದ ಕಾರ್ಯದಲ್ಲಿದೆ. ಮುಳ್ಳೂರು ಪ್ರತಿಭಟನೆಗಳನ್ನು ಮಾಡುತ್ತಲೇ ಬೆಳೆದರು ಎಂದರೆ ತಪ್ಪಾಗಲಾರದು. ಈ ಪ್ರತಿಭಟನೆಗಳಿಂದಲೇ ಅವರು ಈ ಸೆರೆಮನೆ ವಾಸವನ್ನು ಅನುಭವಿಸಿದರು.

ಆತ್ಮಕಥೆಯಲ್ಲಿ ಎಂದಿನಂತೆ, ಅವರ ಬಾಲ್ಯದ ಸಿಹಿ–ಕಹಿ ನೆನಪುಗಳನ್ನು 'ಅಜ್ಜಿಯ ಊರಿನಲ್ಲಿ ಬಾಲ್ಯ' ಅಧ್ಯಾಯದಲ್ಲಿ ಹೇಳಿದ್ದಾರೆ. ಆ ವಯಸ್ಸಿಗೆ ಇರುವ ಭಯ, ಆತಂಕ, ದೆವ್ವ, ಭೂತ ಈ ರೀತಿ ಸಹಜವಾಗಿ ಬಾಲ್ಯದ ನೆನಪುಗಳನ್ನು ಹೇಳಿದ್ದಾರೆ. ಶಾಲೆಯಲ್ಲಿ ಅವರು ಹೇಳುತ್ತಿದ್ದ ದೆವ್ವ ಭೂತದ ಕಥೆಗಳು ಪ್ರಸಿದ್ಧಿ ಹೊಂದಿದ್ದು, ಎಲ್ಲವೂ ಇದೆ. ಮುಂದೆ ಪ್ರೌಢಾವಸ್ಥೆಗೆ ಬಂದಂತೆ, ಅವರ ಬೆಳವಣಿಗೆಯ ವಿಕಾಸಗಳನ್ನು, ಬುದ್ಧಿಯ ಸಾಮರ್ಥ್ಯವನ್ನು ಅವರು ಪರೀಕ್ಷಿಸುತ್ತಾ, ಶಾಲೆಯನ್ನು ಮುಗಿಸುತ್ತಾರೆ.

ಅವರು ಬಾಲ್ಯದಲ್ಲಿ ಇರುವಾಗಲೇ ಒಂದು ಘಟನೆ ನಡೆಯುತ್ತದೆ. ಯಾರೋ ಅವರ ಪಕ್ಕದ ಮನೆಯವರು, ಲೇಖಕರ ತಾಯಿಯ ಸೀರೆಯನ್ನು ತೆಗೆದುಕೊಂಡು ಹಿಂದಿರುಗಿಸುವುದಿಲ್ಲ. ಮನೆಯವರೆಲ್ಲ ತುಂಬಾ ಬೇಸರಪಟ್ಟುಕೊಳ್ಳುತ್ತಾರೆ. ಆದರೆ, ಕೊನೆಗೆ ಆ ಹೆಂಗಸು ಕ್ಷಯರೋಗದಿಂದ ನರಳುತ್ತಿದ್ದಳೆಂದಾಗ, ಪಾಪಿಯ ಧನ ಎಂದಿಗೂ ಪ್ರಾಯಶ್ಚಿತ್ತಕ್ಕೆ ಎಂದು ಲೇಖಕರು ಹೇಳಿರುವುದು ನಿಜವೆನಿಸುತ್ತದೆ.

ಲೇಖಕರು ಇಲ್ಲಿ ಅವರು ಮೋಸಹೋದ ಒಂದೆರಡು ಸಂಗತಿಗಳನ್ನು ಹೇಳಿದ್ದಾರೆ. ಕಳ್ಳತನಕ್ಕಾಗಿ ಪ್ರಾಣವನ್ನು ತೆಗೆಯುವ ಕಟುಕರನ್ನು ಅವರು ಖಂಡಿಸಿದ್ದಾರೆ. ಎಷ್ಟೋ ಬಾರಿ ಸ್ನೇಹಿತರಿಗೋಸ್ಕರ ಸಹಾಯ ಮಾಡಿ ಇವರು ಮೋಸ ಹೋಗಿದ್ದಾರೆ. ತಾರುಣ್ಯಾವಸ್ಥೆಯಲ್ಲಿ ಆಗುವ ಪ್ರೀತಿ–ಪ್ರೇಮದಿಂದ ಕಹಿ ಅನುಭವವನ್ನೂ ಸಹ ಪಡೆದಿದ್ದಾರೆ. ಅದು ಜಾತಿಯ ಕಾರಣದಿಂದ ಆಗಿರುವುದು ಅವರಿಗೆ ತಡೆಯಲಾರದ ಅಪಮಾನ, ನೋವು ಎಂದು ಹೇಳಿದ್ದಾರೆ. ಕೆಲ ಹುಡುಗಿಯರು ಜಾತಿಯ ಅವಮಾನ ಮಾಡಿದರೆ, ಮತ್ತೆ ಕೆಲವು ಅದನ್ನು ಗೌರವಿಸುವುದು ಅವರ ಮೆಚ್ಚುಗೆಗೆ ಅರ್ಹವಾಗಿದೆ.

ಸಾವಿನ ದವಡೆಗೆ ಹೋಗಿ ಬಂದಿರುವುದು ಲೇಖಕರನ್ನು ನಿಬ್ಬೆರಗಾಗಿಸಿದೆ. ಒಂದು ಸಾರಿ ತೀವ್ರವಾಗಿ ಖಾಯಿಲೆ ಬಿದ್ದಾಗ, ಸುಮಾರು ದಿನಗಳ ಕಾಲ ಆಸ್ಪತ್ರೆಯಲ್ಲಿ ಕಾಲ ಕಳೆದದ್ದು, ಅಲ್ಲಿ ಒಬ್ಬ ತಾತ ಲೇಖಕರಿಗೆ ಸಹಾಯ ಮಾಡಿದ್ದು, ಕೊನೆಯಲ್ಲಿ ಅಜ್ಜ ಇವರ ಕಡೆ ತಿರುಗಿ ನೋಡದೆ ತಿರಸ್ಕರಿಸುವುದು, ಲೇಖಕರ ಭಾವನೆಗಳನ್ನು ಕದಡುತ್ತದೆ.

ಮತ್ತೊಂದು ಅಧ್ಯಾಯದಲ್ಲಿ ಹಸಿವು, ಬಡತನದ ಬಗ್ಗೆ ಹೇಳಿದ್ದಾರೆ. ಎಷ್ಟೋ ಜನ ಹೊಟ್ಟೆಗಿಲ್ಲದೆ ಸತ್ತರೆ, ಇನ್ನಷ್ಟು ಜನ ಹೊಟ್ಟೆ ತುಂಬಾ ಉಂಡು, ಅಜೀರ್ಣವಾಗುವ ರೀತಿಯಲ್ಲಿ ಸಾಯುವುದು ವಿಪರ್ಯಾಸ. ಮೇಲ್ಜಾತಿ ಹೆಣ್ಣು ಮಕ್ಕಳು ದಲಿತರನ್ನು

ಪ್ರೀತಿಸುವುದು, ಇದರ ನಂತರ ಗಲಾಟೆ, ಕೊಲೆಯಾಗುವುದು ಸಾಮಾನ್ಯ ಸಂಗತಿಯಲ್ಲಿ ಲೇಖಕರು ಇಲ್ಲಿ ಹೇಳಿದ್ದಾರೆ.

'ಕಾಲದ ಎದುರು ಕರಗಿದವರು ಮತ್ತು ಬದುಕು' ಎಂಬ ಅಧ್ಯಾಯದಲ್ಲಿ ದ್ರೋಹ ಮಾಡಿದ ಸ್ನೇಹಿತರಿಗೆ ಸಹಾಯಾಸ್ತ ಚಾಚುವ ಮನೋಧರ್ಮವುಳ್ಳ ಬಗ್ಗೆ, ಆ ಅನುಭವ ಸ್ವತಃ ಲೇಖಕರಿಗೆ ಇರುವುದನ್ನು ಹೇಳಿದ್ದಾರೆ. ಮಂತ್ರಿಯ ಕಥೆಯನ್ನು ಅವರು ಹೇಳಿದ್ದಾರೆ. ರಾಜಕೀಯದಲ್ಲಿ ಗೆಲ್ಲಲು ಮುಳ್ಳೂರರೇ ಆ ವ್ಯಕ್ತಿಗೆ ನೆರವಾದರು. ಆ ವ್ಯಕ್ತಿ ಗೆದ್ದ ಮೇಲೆ, ದುರಹಂಕಾರದಿಂದ, ಅನೈತಿಕ ಚಟುವಟಿಕೆಗಳಿಂದ ಬೀದಿಗೆ ಬಂದ ಬಗೆಯನ್ನು ಹೇಳಿದ್ದಾರೆ. ಇಷ್ಟಾದರೂ ಅವರ ಪರ ಲೇಖಕರು ಮತ್ತೊಮ್ಮೆ ಅವರಿಗೆ ಸಹಾಯ ಮಾಡುವುದು ಶ್ಲಾಘನೀಯವಾಗಿದೆ.

ಹಾಸ್ಟೆಲ್‌ನ ಮಕ್ಕಳ ಊಟವನ್ನು ಅಧಿಕಾರಿಗಳು ಕಿತ್ತುಕೊಳ್ಳುವುದು, ಮೇಲ್ಜಾತಿಯವರ ದೌರ್ಜನ್ಯ, ದಬ್ಬಾಳಿಕೆ, ತುರ್ತು ಪರಿಸ್ಥಿತಿಯಿದ್ದಾಗ, ಹಾಸ್ಟೆಲ್‌ನಲ್ಲಿ ಊಟವಿಲ್ಲದೆ ಸಂಕಟಪಟ್ಟಿರುವುದು, ಉಪವಾಸವಿರುವುದು, ಆ ಸಂದರ್ಭದಲ್ಲಿ ಉಂಟಾದ ಗಲಾಟೆಗಳನ್ನು ಚಿತ್ರಿಸಿದ್ದಾರೆ. ೧೦ನೇ ತರಗತಿಯಲ್ಲಿ ಇದ್ದಾಗ ಆ ಹಾಸ್ಟೆಲ್‌ನ ಅಧಿಕಾರಿ ಸತ್ಯನಾರಾಯಣರವರು ದಲಿತ ಮಕ್ಕಳಿಗೆ ಪಾಠ ಹೇಳಿಕೊಟ್ಟಿರುವುದನ್ನು ಲೇಖಕರು ಎಂದೂ ಮರೆತಿಲ್ಲ. ಹಾಗೆಯೇ ಹಾಸ್ಟೆಲ್ ಮಕ್ಕಳಿಗೆ ಸಹಾಯ ಮಾಡಿರುವ ಕೆಲವು ಅಧಿಕಾರಿಗಳನ್ನು ಸ್ಮರಿಸುತ್ತಾರೆ. ಹೊಳೆಯ ಕಂಗಳ ದ್ವೀಪದಲ್ಲಿ ಹದಿಹರೆಯದ ಪ್ರೀತಿಯನ್ನು ಹೇಳಿದ್ದಾರೆ. ಚೆನ್ನಾಗಿಯೇ ಮಾತನಾಡುತ್ತಾ, ಆ ಹುಡುಗಿ ಮಾತನಾಡಿಸುವುದನ್ನೇ ನಿಲ್ಲಿಸಿ ಮದುವೆಯಾಗಿ ಹೊರಟುಹೋಗುತ್ತಾಳೆ. ಕಂಗಳ ದ್ವೀಪದಲ್ಲಿ ನೆನಪಾಗಿ ಉಳಿಯುತ್ತಾಳೆ. ಹೀಗೆ ಅವರ ಆತ್ಮಚರಿತ್ರೆಯಲ್ಲಿ ಜೀವನದ ಎಲ್ಲಾ ಘಟ್ಟಗಳನ್ನು ಕಾಣಬಹುದಾಗಿದೆ.

ಒಟ್ಟಾರೆ ಇವರಲ್ಲಿ ಕೃತಿಗಳು ಕೇಂದ್ರ ಬಿಂದು ಜಾತಿ, ಹಸಿವು, ಬಡತನ, ಅವಮಾನವೆಲ್ಲವೂ ಆಗಿದೆ ಎಂದು ಹೇಳಬಹುದು.

ಅಧ್ಯಾಯ – ೬

ಉಪಸಂಹಾರ

ಮುಳ್ಳೂರು ನಾಗರಾಜರ ಕೃತಿಗಳಲ್ಲಿ ನಾವು ದೌರ್ಜನ್ಯಕ್ಕೊಳಗಾದವರ ಮಾಡುವ ಪ್ರತಿಭಟನೆ, ಅನ್ಯಾಯವನ್ನು ತಡೆಗಟ್ಟಲು ಮಾಡುವ ಹೋರಾಟವನ್ನು ಕಾಣಬಹುದು. ಇವರ ಕೃತಿಗಳಲ್ಲಿ ಹಸಿವು, ಬಡತನ, ಅನ್ಯಾಯದ ವಿರುದ್ಧ ಹೋರಾಡುವುದನ್ನು ನಾವು ಗುರುತಿಸಬಹುದು. ಮುಳ್ಳೂರರ ಜೀವನದ ಪ್ರತಿಭಟನೆಯನ್ನು ಗುರುತಿಸಬಹುದು. ಮುಳ್ಳೂರರು ಅನ್ಯಾಯಗಳ ವಿರುದ್ಧ ಪ್ರತಿಭಟನೆಗಳನ್ನು ದಾಖಲಿಸುತ್ತಲೇ ಸಾಹಿತ್ಯಲೋಕಕ್ಕೆ ಧುಮುಕಿದರು. ಅವರ ಮೊದಲ ಕಾದಂಬರಿಯಾದ 'ಮರಣ ಮಂಡಲ ಮಧ್ಯದೊಳಗೆ' ದಲಿತ ಸಂಘರ್ಷ ಸಮಿತಿ, ಪ್ರಾರಂಭವಾದ ಹಿನ್ನೆಲೆಯಿಂದ ಬಂದ ಕಥೆಯಾಗಿದೆ. ಇದರಲ್ಲಿ ಮೇಲ್ಜಾತಿ ಮತ್ತು ಕೆಳಜಾತಿಗೆ ಸಂಬಂಧಪಟ್ಟ ವಿಷಯಗಳಿವೆ. ಇಂತಹಹುದರ ಮಧ್ಯೆ ಬಸವರಾಜು ಎಂಬ ರೌಡಿ, ದಲಿತ ಸಂಘರ್ಷ ಸಮಿತಿಯಿಂದ ಬದಲಾಗಿ, ಸಮಾಜದ ಕೆಲಸಕ್ಕಾಗಿ ನಿಲ್ಲುವುದು, ಶ್ಲಾಘನೀಯ ವಿಚಾರವಾಗಿದೆ. ಇವರೆಲ್ಲ ಕಥೆ, ಕಾದಂಬರಿ ಬಡವರ ಪರವಾಗಿಯೇ ಇದೆ. ಬಡವರ ಮೇಲೆ ನಡೆಯುವ ದೌರ್ಜನ್ಯ ಅನ್ಯಾಯಗಳನ್ನು ಖಂಡಿಸಿ, ಅವರ ನ್ಯಾಯಕ್ಕಾಗಿ ಹೋರಾಡುವ ಪರಿಯನ್ನು ಲೇಖಕರು ತಮ್ಮ ಕೃತಿಗಳಲ್ಲಿ ಹೇಳಿದ್ದಾರೆ. 'ಮರಣ ಮಂಡಲ ಮಧ್ಯದೊಳಗೆ' ಕಾದಂಬರಿ ಪೂರ್ಣ ದಲಿತರ ಮೇಲಾದ ಅನ್ಯಾಯಗಳನ್ನು ಗುರುತಿಸುತ್ತ, ಅದರ ವಿರುದ್ಧ ಹೋರಾಡುವ ಬಸವರಾಜುರಂತವರ ಮೂಲಕ ತೋರಿಸಿದ್ದಾರೆ. ಬಡತನ ಎಂತಹ ಕೆಲಸವನ್ನಾದರೂ ಮಾಡಿಸುತ್ತದೆಂಬುದಕ್ಕೆ ಇವರ ಕಥೆ, ಕಾದಂಬರಿಗಳು ಉದಾಹರಣೆಗಳಿವೆ.

ಎರಡನೇ ಕಾದಂಬರಿಯಾದ 'ದಂಡಾಕಾರಣ್ಯ'ದಲ್ಲಿ ವೃಕ್ಷಗಳ ಮೂಲಕ ಮಾನವನ ಹಸಿವಿನ ಬಡತನವನ್ನು ಚಿತ್ರಿಸಿದ್ದಾರೆ. ಜಾತಿಯ ಹಸಿವನ್ನು ಈ ಕಾದಂಬರಿಯಲ್ಲಿ ಬಿಂಬಿಸಿದ್ದಾರೆ. ಜಾತಿಯಿಂದ ಆದ ಅವಮಾನ, ಬಡತನ ಎಲ್ಲವನ್ನು ಹೇಳಿದ್ದಾರೆ. ಇಲ್ಲಿ ಭೂತಕಾಲ ಮತ್ತು ವರ್ತಮಾನದ ಪ್ರಸ್ತುತತೆಯನ್ನು ಹೇಳಿದ್ದಾರೆ. ನವ್ಯ ಚಳವಳಿ ನಂತರ ಸರ್ವ್ಯೋತ್ತರ ಅಥವಾ ದಲಿತ ಸಾಹಿತ್ಯಿಕ ಒಲವುಗಳು ಮೈಮನ ಪಡೆದು ಗರಿಗೆದರಿ ಬೇರೂರಿ ನಿಂತ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಈ ಕೃತಿ ಹೊರಬಂದಿದೆ. ಈ ಸಾಹಿತ್ಯ ಚಳುವಳಿಗಳ ಸ್ಥಿತ್ಯಂತರಗಳ ಹಿನ್ನೆಲೆಯಲ್ಲಿದೆಯೂ ಈ 'ದಂಡಕಾರಣ್ಯ'ವನ್ನು ತನಿಯಾಗಿ ನೋಡಬಹುದಾಗಿದೆ.

ನಂಜನಗೂಡು ಕನ್ನಡದ ಜನಪದ ಓಜಸ್ಸು ಸೊಗಡಿನೊಂದಿಗೆ ಶಿಷ್ಟಪರ ಸಾಹಿತ್ಯದ ಗತ್ತು ಗಾಂಭೀರ್ಯವೂ ತಳಕು, ಹಾಕಿಕೊಂಡು ಮಾರ್ಮಿಕತೆಯಿಂದ ಕಳಕಳಿಸುವ ಈ ಕನ್ನಡಕ್ಕೆ ಅಯಸ್ಕಾಂತ ಗುಣವಿದೆ. ಜನಪದ, ಶಿಷ್ಟಪದಗಳ ಹದವಾದ

ಸಂಯೋಗದಿಂದ ಕೃತಿಗೆ ಒಳ್ಳೆಯ ಭೂಮಿಕೆ ದಕ್ಕಿದೆ, ಪಶುಪಕ್ಷಿ ಪ್ರಾಣಿ ಮಾತನಾಡುವ, ಕಥೆ ಹೇಳುವ ತಂತ್ರವ ಪಂಚತಂತ್ರ ಬೇತಾಳ ಪಂಚವಿಂಶತಿಕಾರರು ಬಳಸಿದ್ದಾರೆ. ಗಿಡಮರಗಳೂ ಮಾತಾಡ್ತ ಹಿಂದಣ, ಮುಂದಣ ಕತೆಯ ಹೇಳ್ತಾ ಅವೂ ಮುಖ್ಯ ಪಾತ್ರಗಳೇ ಆಗಿ ಕೃತಿಬಂಧದಲ್ಲಿ ಹದವಾಗಿ ಬೆಸೆದುಕೊಂಡ ಸಾರ್ಥಕ ಪ್ರಯತ್ನ ಮುಳ್ಳೂರು ಈ ಕಾದಂಬರಿಯಲ್ಲಿ ಅಳವಟ್ಟಿದೆ. ಈ ಕಾದಂಬರಿಯಲ್ಲಿ ಕಥೆ ಗೌಣ, ವಸ್ತು ಅನುಷಂಗಿಕ. ಇಡೀ ಮಾನವರ ಕುಲದ ಜೀವನದ ವಿವಿಧ ಹಂತಗಳನ್ನು ನಾವು ಇಲ್ಲಿ ಕಾಣಬಹುದಾಗಿದೆ. ಅನೇಕ ಕಾಲಗಳ ಮಾನವ ಬದುಕು ಮುಳ್ಳೂರರ ಕಥೆ, ಕಾದಂಬರಿಗಳ ವಸ್ತುವಾಗಿದೆ, ಎಂದು ಸ್ವತಃ ಲೇಖಕರೇ ಹೇಳಿದ್ದಾರೆ. ಅವರ ಸಿಂಗಳೀಕ ಕಥಾಸಂಕಲನದಲ್ಲೂ, ಇದನ್ನು ನಾವು ಗಮನಿಸಬಹುದು. ನಾವು ಇಲ್ಲಿ ಹೆಚ್ಚು ಗ್ರಾಮೀಣ ಯುವ ಪ್ರತಿಭೆಗಳ ಜೀವನದ ವ್ಯಥೆಗಳನ್ನು ಗಮನಿಸಬಹುದು. ಬಡವರ ಬದುಕು ಎಷ್ಟು ಕಟುವಾಗಿದೆ, ಎಂತಹ ಕಟುಕರು ನಮ್ಮ ನಡುವಿದ್ದಾರೆ ಎಂಬುದನ್ನು ಸಿಂಗಳೀಕದ ಕಥೆಗಳು ರೋಷವಿಲ್ಲದೆ ಚಿತ್ರಿಸುತ್ತದೆ. ಹೆಣದ ಜೇಬನ್ನು ಸೋಸುವ ಸ್ಪೆಷಲ್‌ನ ಮಾಸ್ಟರು, ಅಂತರಜಾತಿ ವಿವಾಹದೊಡನೆ, ಬ್ರಾಹ್ಮಣತ್ವದ ತಡಕಾಟದಲ್ಲಿರುವ ತಾಸಿಲ್ದಾರ್, ತಿಕ್ಕಲು ಮನುಷ್ಯ ವಾರ್ಡನ್ ನಂಜಪ್ಪ, ಕಸುಬುಗಾತಿ ಜಯಮ್ಮ ಗದ್ಯಕವಿಯ ಕಳ್ಳ ಅಪ್ಪ ಮುಂತಾದ ಪಾತ್ರಗಳು ಕಥೆಗಾರರ ಸೂಕ್ಷ್ಮ ಅವಲೋಕನಕ್ಕೆ ಕೇವಲ ಉದಾಹರಣೆಗಳು ಮಾತ್ರವಾಗಿರದೆ ನಮ್ಮ ಸಮಾಜದ ಹಲವು ಮುಖಗಳ ಕನ್ನಡಿಗಳೂ ಆಗಿವೆ. ಪಾತ್ರ ಸ್ವಭಾವಗಳನ್ನು ನಾಗರಾಜರು ಅಚ್ಚುಕಟ್ಟಾಗಿ ರೇಖಿಸಬಲ್ಲರೊ ಎಂಬುದಕ್ಕೂ ಇವು ಉದಾಹರಣೆಗಳಾಗಿ ನಿಲ್ಲುತ್ತವೆ. ಸಾಮಾಜಿಕ ಕಥೆಗಳ ಸಂಕಲನ ಎನ್ನಬಹುದು. ಜಾನಪದ ಕಥೆಯೂ ಇಲ್ಲಿ ಸೇರಿಕೊಂಡಿವೆ. ಸರಾಗವಾಗಿ ಓದಿಸಿಕೊಂಡು ಹೋಗುವ ಈ ಕಥೆಗಳು ಹೊಸಲೋಕವನ್ನು ತೆರೆಯದಿದ್ದರೂ, ಮಾನವೀಯ ಗುಣವುಳ್ಳ ಆರೋಗ್ಯಕರ ಬದುಕು ಬದಲಾವಣೆಗಳನ್ನು ಮಾಡುವ ಪ್ರಯತ್ನ ಈ ಕಥಸಂಕಲವನ್ನು ಇದೆ ಎಂದು ಹೇಳಬಹುದು.

ತಮ್ಮ ಆತ್ಮಚರತ್ರೆಯಾದ 'ಮಾಮರದ ಮೇಲೊಂದು ಕೋಗಿಲೆ' (ಸಂಪುಟ–೧) ಯಲ್ಲಿ ಅವರ ಜೀವನದ ವಿವಿಧ ಘಟ್ಟಗಳನ್ನು ಚಿತ್ರಿಸಿದ್ದಾರೆ. ಇಲ್ಲಿ ಅವರು ತಮ್ಮ ಬಾಲ್ಯ, ಪ್ರೌಢ, ತಾರುಣ್ಯದ ವೇಳೆಯಲ್ಲಿ ಆದ ಕೆಲವು ಘಟನೆಗಳನ್ನು ಸ್ಮರಿಸಿದ್ದಾರೆ. ಇದಲ್ಲದೆ ಹೆಚ್ಚಾಗಿ ಅವರು ಹಾಸ್ಟೆಲ್‌ನಲ್ಲಿ ಇದ್ದಂತಹ ಪರಿಸ್ಥಿತಿಯನ್ನು ಸ್ಮರಿಸಿದ್ದಾರೆ. ಬಡತನದಿಂದ ಸೇರಿಕೊಂಡ ಎಷ್ಟೋ ವಿದ್ಯಾರ್ಥಿಗಳ ವಿಶೇಷತೆಯನ್ನು ಸಹ ಹೇಳಿದ್ದಾರೆ. ಮೇಲ್ಜಾತಿ ಹೆಣ್ಣು ಮಕ್ಕಳ ಹುಡುಗಾಟ, ಕೀಳುಜಾತಿ ಹುಡುಗರ ಪ್ರಾಣ ಸಂಕಟದ ಘಟನೆಗಳನ್ನು ಮನಸ್ಸು ಮುಟ್ಟುವಂತೆ ಚಿತ್ರಿಸಿದ್ದಾರೆ.

ಹೀಗೆ ಕಥೆ ಕಾದಂಬರಿ ಬದುಕಿನ ಹಲವು ಮುಖಗಳನ್ನು ನಮಗೆ ತೆರೆದು ತೋರಿಸುತ್ತದೆ. ದೌರ್ಜನ್ಯ ಮತ್ತು ಅದರ ಪ್ರತಿಭಟನೆ ಮಡುಗಟ್ಟಿ ನಿಂತಿದೆ. ಇವೆಲ್ಲ ಉತ್ತಮ ಕಾವ್ಯದಷ್ಟೇ ಸಮರ್ಥವಾದ ರಚನೆಯಾಗಿದೆ. ಒಬ್ಬ ದಲಿತ ಬರಹಗಾರ ಹಿಡಿದುಕೊಡುವ ಜೀವನಾನುಭವಗಳು, ಸಮಕಾಲೀನ ಜೀವನವನ್ನು ದಲಿತ ಬರಹಗಾರನೊಬ್ಬ ಹೇಗೆ ನೋಡಬಲ್ಲ ಮತ್ತು ತಾನೇ ಹೋರಾಟಗಾರನಾಗಿದ್ದಾಗ ಎಂತಹ ಬರಹವನ್ನು ಸೃಷ್ಟಿಸಬಲ್ಲ ಎಂಬುದಕ್ಕೆ ಈ ಕಥೆ, ಕಾದಂಬರಿಗಳು ಆತ್ಮಚರಿತ್ರೆ ಸಾಕ್ಷಿಯಾಗಿವೆ.

ಕನ್ನಡ ಸಾಹಿತ್ಯ ಪ್ರಪಂಚಕ್ಕೆ ದಲಿತ ಬರಹಗಾರನೊಬ್ಬ ನೀಡಿದ ವಿಶಿಷ್ಟ ಕಾಣಿಕೆಯಾಗಿದೆ, ಎಂಬ ಹೊಗಳಿಕೆಯ ಮಾತಿನ ಭಾರವನ್ನು ಮುಳ್ಳೂರು ಕೃತಿಗಳು ನಿಜಕ್ಕೂ ಹೊರಬಲ್ಲದು, ಆ ಶಕ್ತಿ ಇದಕ್ಕಿದೆ.

ದಲಿತ ಜನ ಜೀವನದ ಅನೇಕ ಸಮಸ್ಯೆಗಳು, ಭಾವನೆಗಳು, ವಿಚಾರಗಳು, ಕ್ರಾಂತಿಕಾರಕ ಧೋರಣೆಗಳು, ಮೇಲಿನ ಕೇರಿಯ, ಗುಲಾಮಗಿರಿಯನ್ನು ಹಿಮ್ಮೆಟ್ಟಿಸುವ ಹೋರಾಟ, ಮಾನವನ ಕನಿಷ್ಠ ಮರ್ಯಾದೆಗಾಗಿ ಸೆಣಸಾಟ, ಮೇಳಿನವರ ಗುಲಾಮಗಿರಿ, ಅನೇಕ ರೀತಿಯಲ್ಲಿ ಕ್ರಿಯಾಶೀಲವಾಗುವ ಪರಿಯೇ ಮುಂತಾಗಿ ಇಂಥ ಅನೇಕ ಭಾವನೆಗಳ ಜಟಿಲತೆಯನ್ನು ಅತ್ಯಂತ ಸಂಕೀರ್ಣವಾಗಿ ಕಟ್ಟಿಕೊಡುವ ಅಂಶಗಳನ್ನು ಮುಳ್ಳೂರರ ಈ ನಾಲ್ಕು ಕೃತಿಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

ಒಟ್ಟಾರೆ, ಮಾನವನ ಅನೇಕ ಕಾಲದ ಜೀವನದ ಕಷ್ಟ-ಸುಖಗಳನ್ನು, ಅದರಲ್ಲೂ ಹಿಂದುಳಿದ ಅಲ್ಪಸಂಖ್ಯಾತರಾದ ದಲಿತರ ಜೀವನದ ಬವಣೆಗಳನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾತಂತ್ರ್ಯ ನಂತರದ ಕಾಲಮಾನದಲ್ಲಿ ಚಿತ್ರಿಸಿದ್ದಾರೆ. ದಲಿತರು ಕಾಣಲು ಹೊರಟಿರುವ ಹೊಸದಿಕ್ಕುಗಳನ್ನು ಅದರಿಂದ, ಆದ ಹತಾಶೆ, ನಿರಾಶೆ ಜೊತೆಗೆ ಒಂದಿಷ್ಟು ಸಂತೋಷವನ್ನು ಈ ಕೃತಿಗಳು ನಮಗೆ ನಿಡುತ್ತವೆಂದರೆ ತಪ್ಪಾಗಲಾರದು.

[illegible]

ಗ್ರಂಥಋಣ

೧. 'ಮರಣ ಮಂಡಲ ಮಧ್ಯದೊಳಗೆ' ಪ್ರಕಟಣೆ– ಜನಪ್ರಿಯ ಪುಸ್ತಕದ ಮಾಲೆ, ಲೇಖಕರು– ಮುಳ್ಳೂರು ನಾಗರಾಜ್, ಮೊದಲ ಮುದ್ರಣ–೧೮೮೫, ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೨. 'ಸಿಂಗಳೀಕ' ಲೇಖಕರು– ಮುಳ್ಳೂರು ನಾಗರಾಜ್, ಮುದ್ರಣ– ತಾರಾ ಪ್ರಿಂಟರ್ಸ್, ರಾಮಾನುಜ ರೋಡ್, ಮೈಸೂರು, ಮೊದಲ ಮುದ್ರಣ–೨೦೦೦.

೩. 'ದಂಡಕಾರಣ್ಯ' ಲೇಖಕರು–ಮುಳ್ಳೂರು ನಾಗರಾಜ್, ಮುದ್ರಣ–ಗಾಯಿತ್ರಿ ಎಂಟರ್ ಪ್ರೈಸಸ್ ಮೈಸೂರು, ಮೊದಲ ಮುದ್ರಣ– ೧೯೯೨.

೪. ಕನ್ನಡ ಸಾಹಿತ್ಯದಲ್ಲಿ ಶಿ, ರಾಮ, ಕೃಷ್ಣ ಮತ್ತು ಅಂಬೇಡ್ಕರ್, ಲೇಖಕರು– ಡಾ.ಮ.ನ.ಜವರಯ್ಯ, ಸಿದ್ಧಾರ್ಥ ಗ್ರಂಥ ಮಾಲೆ, ಮೈಸೂರು–೨೦೦೩.

೫. 'ಮಾಮರದ ಮೇಲೊಂದು ಕೋಗಿಲೆ' ಲೇಖಕರು–ಮುಳ್ಳೂರು ನಾಗರಾಜ್, ಸಂಪಾದಕರು– ಪ್ರೊ. ಮಲ್ಲೇಶ್ವರಂ ಜಿ.ವೆಂಕಟೇಶ್, ಅಗ್ರಹಾರ ಕೃಷ್ಣಮೂರ್ತಿ, ಡಾ.ಕೆ.ಸಿ.ಶಿವಾರೆಡ್ಡಿ, ರಾಮಲಿಂಗಪ್ಪ.ಟಿ.ಬೇಗೂರು, ಸಂಚಾಲಕರು–ಸಿವಿಜಿ ಚಂದ್ರು, ಮುದ್ರಣ– ಶಕ್ತಿ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್, ಬೆಂಗಳೂರು. ಮೊದಲ ಮುದ್ರಣ– ೨೦೦೪.

೬. ದಲಿತ ಕಥನ– ಡಾ.ಮೊಗಳ್ಳಿ ಗಣೇಶ್, ಪ್ರಕಟಣೆ–ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪ್ರಕಾಶನ–ಪ್ರೊ.ಮಲ್ಲೆಪುರಂ ಜಿ.ವೆಂಕಟೇಶ್, ನಿರ್ದೇಶಕರು– ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ವಿದ್ಯಾರಣ್ಯ ,ಮೊದಲ ಮುದ್ರಣ– ೨೦೦೬.

೭. ಕನ್ನಡ ಸಂಶೋಧನೆ ತಾತ್ವಿಕ ವಿಚಾರ, ಲೇಖಕರು– ರಹಮತ್ ತರೀಕೆರೆ, ಮೊದಲ ಮುದ್ರಣ–೨೦೦೭

೮. ಹೊಸದಿಕ್ಕು, ಲೇಖಕರು–ಡಾ.ಬಸವರಾಜ ಸಬರದ, ಮೊದಲುಮುದ್ರಣ–೧೯೯೦, ಮುದ್ರಣ– ಇಳಾಮುದ್ರಣ, ಚಾಮರಾಜ ಪೇಟೆ, ಬೆಂಗಳೂರು.

೯. ಸಂಶೋಧನೆ, ಡಾ.ಚಿದಾನಂದಮೂರ್ತಿ

೧೦. 'ದಲಿತಜ್ಞ' ಲೇಖಕರು– ಅರ್ಜುನಗೊಳಸಂಗಿ, ಪ್ರಕಟಣೆ, ದಲಿತ ಸಾಹಿತ್ಯ ಪರಿಷತ್ತು, ರಾಜ್ಯ ಘಟಕ, ಗದಗ, ಮೊದಲಮುದ್ರಣ ೨೦೦೦. ಮುದ್ರಣ– ಕಾಂಬಳೆ ಪ್ರಿಂಟರ್ಸ್, ಗದಗ.

೧೧. 'ದಲಿತ ಚಳುವಳಿ'– ಒಂದು ಅವಲೋಕನ, ಸಂಪಾದಕ ಮತ್ತು ಲೇಖಕ – ಡಾ.ವಿ.ಮುನಿವೆಂಕಟಪ್ಪ, ಮುದ್ರಣ– ಉದಯರವಿ ಆಫ್‌ಸೆಟ್ ಪ್ರಿಂಟರ್ಸ್, ಮೈಸೂರು, ಪ್ರಕಟಣೆ– ವಿಚಾರವಾದಿ ಪ್ರಕಾಶನ, ಕುವೆಂಪುನಗರ, ಮೈಸೂರು, ಮೊದಲ ಮುದ್ರಣ– ೧೯೯೮.

೧೨. 'ಕನ್ನಡ ದಲಿತ ಸಾಹಿತ್ಯ ಮತ್ತು ಅಂಬೇಡ್ಕರ್‌ವಾದ" ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ ಶಿವಕುಮಾರ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೊತ್ರಿ, ಮೈಸೂರು. ಮಾರ್ಗದರ್ಶಕರು– ಡಾ.ಪ್ರೀತಿ ಶ್ರೀಮಂಧರ್‌ಕುಮಾರ್ (೨೦೦೬)

೧೩. "ದಲಿತ–ಬಂಡಾಯದ ವಿಭಿನ್ನ ನೆಲೆಗಳು' ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ, ಜಿ.ಸಿ.ದೊಡ್ಡೇಗೌಡ, ಮಾರ್ಗದರ್ಶಕರು–ಡಾ.ಅರವಿಂದ ಮಾಲಗತ್ತಿ (೨೦೦೪)

೧೪. "ಕನ್ನಡ ಮರಾಠಿ ದಲಿತ ಸಾಹಿತ್ಯ', ಡಾ.ಸರಜೂಕಾಟ್ಕರ್, ವಿಮೋಚನಾ ಪ್ರಕಾಶನ (೧೯೯೬)

೧೫. 'ದಲಿತ ಸಾಹಿತ್ಯ ನೆಲೆ–ಹಿನ್ನೆಲೆ', ಡಾ. ಅರವಿಂದ ಮಾಲಗತ್ತಿ, ಕನ್ನಡ ಪುಸ್ತಕ ಪ್ರಾಧಿಕಾರ.

೧೬. 'ದಲಿತ ಮಾರ್ಗ' ಸಂ.ಡಾ.ಅರವಿಂದ ಮಾಲಗತ್ತಿ, ಕನ್ನಡ ಸಾಹಿತ್ಯ ಪರಿಷತ್ತು.